# ಅಧ್ಯಾಯ-II

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

### 2.1 ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳ ಪರ್ಯಾಪ್ತತೆ (ಸಮರ್ಪಕತೆ ಮತ್ತು ಗುಣಮಟ್ಟ ಮೌಲ್ಯಮಾಪನ)

#### 2.1.1 ಪರಿಚಯ

ರಾಜ್ಯದಲ್ಲಿ ಮಹಿಳೆಯರಿಗೆ ಉದ್ಯೋಗಾವಕಾಶಗಳು ಇರುವ ನಗರಗಳು/ಪಟ್ಟಣಗಳಲ್ಲಿ ಭಾರತ ಸರ್ಕಾರದ ನೆರವಿನಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿಯಲ್ಲಿ ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳು ಕಾರ್ಯ ನಿರ್ವಹಿಸುತ್ತವೆ ಮತ್ತು ಭಾರತ ಸರ್ಕಾರ ಹೊರಡಿಸಿದ ಮಾರ್ಗಸೂಚಿಗಳಿಂದ ಅವುಗಳು ನಿಯಂತ್ರಿಸಲ್ಪಡುತ್ತವೆ.

ಕನಿಷ್ಠ ಮೂಲಸೌಕರ್ಯ ಸೌಲಭ್ಯಗಳ ಲಭ್ಯತೆಗೆ ಒಳಪಟ್ಟು ಅಂಗವಿಕಲ ವಿದ್ಯಾರ್ಥಿನಿಯರು ಮತ್ತು ಮಹಿಳೆಯರಿಗೆ ವಸತಿನಿಲಯಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ಅನುಮತಿ ನೀಡಿತು (ಜುಲೈ 2006) ಸರ್ಕಾರೇತರ ಸಂಸ್ಥೆಗಳು (ಎನ್‌ಜಿಒಗಳು) ವಸತಿ ನಿಲಯಗಳನ್ನು ನಿರ್ವಹಿಸುತ್ತವೆ ಮತ್ತು ಅದಕ್ಕಾಗಿ ಅವುಗಳು ರಾಜ್ಯ ಸರ್ಕಾರದಿಂದ ಪ್ರತಿ ವರ್ಷ ಸಹಾಯಾನುದಾನವನ್ನು ಪಡೆಯುತ್ತವೆ. ಇದಲ್ಲದೆ, ರಾಜ್ಯ ಸರ್ಕಾರವು ತನ್ನದೇ ಆದ ಯೋಜನೆಯನ್ನು ಪರಿಚಯಿಸಿತು (ಸೆಪ್ಟೆಂಬರ್ 2010) ಜಿಲ್ಲಾ ಕೇಂದ್ರಗಳಲ್ಲಿ ಉದ್ಯೋಗಸ್ಥ ಮಹಿಳೆಯರಿಗೆ ವಸತಿನಿಲಯಗಳನ್ನು ಸ್ಥಾಪಿಸಲು ನೋಂದಾಯಿತ ಖಾಸಗಿ ಮತ್ತು ಸ್ವ-ಸಹಾಯ ಸಂಸ್ಥೆಗಳಿಗೆ ಹಣಕಾಸು ನೆರವು ಯೋಜನೆಯಡಿಯಲ್ಲಿ ನಿಗದಿಪಡಿಸಲಾದ ವಿವಿಧ ಷರತ್ತುಗಳಿಗೆ ಒಳಪಟ್ಟು ಮಾರ್ಗದರ್ಶಿ ಮೌಲ್ಯದ ಶೇಕಡಾ 50ರಷ್ಟು ದರದಲ್ಲಿ 10,000 ಚದರ ಅಡಿಗಳ ಭೂಮಿಯನ್ನು ಹಂಚಿಕೆ ಮಾಡುವುದರ ಜೊತೆಗೆ ಗರಿಷ್ಠ ₹ 25 ಲಕ್ಷಗಳ ಗರಿಷ್ಠ ಆರ್ಥಿಕ ಸಹಾಯವನ್ನು ನೀಡುವ ತನ್ನದೇ ಆದ ಯೋಜನೆಯನ್ನು ರಾಜ್ಯ ಸರ್ಕಾರವು ಪ್ರಾರಂಭಿಸಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ರಾಜ್ಯ ಮಟ್ಟದಲ್ಲಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನೆರವು ನೀಡುತ್ತಾರೆ. ಉದ್ಯೋಗಸ್ಥ ಮಹಿಳೆಯರ ವಸತಿನಿಲಯ ಯೋಜನೆಯ ಅನುಷ್ಠಾನ ಮತ್ತು ಮೇಲ್ವಿಚಾರಣೆಗೆ ಯೋಜನಾ ನಿರ್ದೇಶಕರು, ಸ್ತ್ರೀಶಕ್ತಿ, ಇವರು ಜವಾಬ್ದಾರರಾಗಿರುತ್ತಾರೆ ಮತ್ತು ಜಿಲ್ಲಾ ಮಟ್ಟದಲ್ಲಿ ಉಪ ನಿರ್ದೇಶಕರು ಅವರಿಗೆ ನೆರವು ನೀಡುತ್ತಾರೆ

#### 2.1.2 ಲೆಕ್ಕಪರಿಶೋಧನಾ ಚೌಕಟ್ಟು

ರಾಜ್ಯದಲ್ಲಿ ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳ (ವಸತಿ ನಿಲಯ) ಸಮರ್ಪಕತೆ ಮತ್ತು ಪರ್ಯಾಪ್ತತೆಯನ್ನು ನಿರ್ಣಯಿಸಲು 2015-16ರಿಂದ 2020-21ರ ಅವಧಿಗೆ ಸಚಿವಾಲಯ, ಆಯುಕ್ತರ ಕಛೇರಿ ಮತ್ತು ರಾಜ್ಯದ 30 ಜಿಲ್ಲೆಗಳ ಪೈಕಿ 11 ಜಿಲ್ಲಾ ಮಟ್ಟದ ಕಚೇರಿಗಳ ದಾಖಲೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರೀಕ್ಷಾ-ತನಿಖೆ ನಡೆಸಲಾಯಿತು (ನವೆಂಬರ್ 2020 ರಿಂದ ಏಪ್ರಿಲ್ 2021). ಸೌಲಭ್ಯಗಳ ಲಭ್ಯತೆ ಮತ್ತು ಒದಗಿಸಿರುವ ವಸತಿಯ ಗುಣಮಟ್ಟವನ್ನು ಪರಿಶೀಲಿಸಲು ಆಯ್ದ ಜಿಲ್ಲೆಗಳ 30ರಲ್ಲಿ 20 ವಸತಿನಿಲಯಗಳು (ಶೇಕಡಾ 66) ಮತ್ತು ಎಲ್ಲಾ 12 ವಿಕಲಚೇತನ ವಸತಿನಿಲಯಗಳ ಜಂಟಿ ತಪಾಸಣೆಯನ್ನು ಲೆಕ್ಕಪರಿಶೋಧನೆಯು ನಡೆಸಿತು. ಅಲ್ಲದೆ, ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ಭೇಟಿ ನೀಡಲು ಸಾಧ್ಯವಾಗದ ಆರು ವಸತಿನಿಲಯಗಳಿಂದ ಪ್ರೊಫಾರ್ಮಾ ಮೂಲಕ ಮಾಹಿತಿಯನ್ನು ಪಡೆಯಲಾಯಿತು. ಲೆಕ್ಕಪರಿಶೋಧನಾ ಉದ್ದೇಶಗಳು, ಮಾನದಂಡಗಳು, ವ್ಯಾಪ್ತಿ ಮತ್ತು ವಿಧಾನವನ್ನು ಚರ್ಚಿಸಲು 11 ಡಿಸೆಂಬರ್ 2020ರಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ

ಆಯುಕ್ತರೊಂದಿಗೆ ಪ್ರವೇಶ ಸಭೆಯನ್ನು ನಡೆಸಲಾಯಿತು. 10 ಡಿಸೆಂಬರ್ 2021 ರಂದು ನಡೆದ ನಿರ್ಗಮನ ಸಭೆಯಲ್ಲಿ ಲೆಕ್ಕಪರಿಶೊಧನಾ ಆವಿಷ್ಕಾರಗಳನ್ನು ಪ್ರಧಾನ ಕಾರ್ಯದರ್ಶಿಯವರೊಂದಿಗೆ ಚರ್ಚಿಸಲಾಯಿತು. ರಾಜ್ಯ ಸರ್ಕಾರವು ಒದಗಿಸಿದ ಉತ್ತರಗಳನ್ನು ಈ ವರದಿಯಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

**ಲೆಕ್ಕಪರಿಶೊಧನೆಯಲ್ಲಿ ಕಂಡುಬಂದ ಅಂಶಗಳು**

### 2.1.3 ಆಯವ್ಯಯ ಮತ್ತು ವೆಚ್ಚ

***(ಎ) ಸಾಮಾನ್ಯ ವಸತಿನಿಲಯಗಳಿಗೆ***

2016-17ರಿಂದ 2020-21ರ ಅವಧಿಗೆ ರಾಜ್ಯ ಸರ್ಕಾರವು 2017-18ನೇ ಸಾಲಿನಲ್ಲಿ ₹ 26 ಲಕ್ಷ ಒದಗಿಸಿದ್ದು, ಅದರಲ್ಲಿ ₹ 12.5 ಲಕ್ಷವನ್ನು ಎರಡು ವಸತಿನಿಲಯಗಳಿಗೆ (ವಿಜಯಪುರ ಮತ್ತು ಉಡುಪಿ) ತಲಾ ₹ 6.25 ಲಕ್ಷದ ಮೊದಲ ಕಂತಾಗಿ ಬಿಡುಗಡೆ ಮಾಡಲಾಗಿತ್ತು ಮತ್ತು ₹ 0.45 ಲಕ್ಷವನ್ನು ಬೆಂಗಳೂರಿನ ಟ್ರಾನ್ಸಿಟ್ ವಸತಿನಿಲಯಗಳಿಗೆ ಬಳಸಲಾಗಿತ್ತು. ಎರಡೂ ವಸತಿನಿಲಯಗಳು ಹಣವನ್ನು ಬಳಸಿಕೊಂಡಿದ್ದವು. ಆದರೆ, ಲೆಕ್ಕಪರಿಶೋಧನಾ ಅವಧಿಯ ಇತರ ವರ್ಷಗಳಲ್ಲಿ ಯಾವುದೇ ಆಯವ್ಯಯ ಅವಕಾಶ ಇರಲಿಲ್ಲ. ಸಾಮಾನ್ಯ ವಸತಿನಿಲಯಗಳ ಸ್ಥಾಪನೆಗೆ ಯಾವುದೇ ಪ್ರಸ್ತಾವನೆಗಳನ್ನು ಸಲ್ಲಿಸದ ಕಾರಣ ರಾಜ್ಯ ಸರ್ಕಾರವು ಮೇಲಿನ ಅವಧಿಯಲ್ಲಿ ಭಾರತ ಸರ್ಕಾರದಿಂದ ಸಹ ಹಣವನ್ನು ಪಡೆದಿರಲಿಲ್ಲ.

ಭಾರತ ಸರ್ಕಾರದ ಮಾರ್ಗಸೂಚಿಗಳು ಐದು ವರ್ಷಗಳಿಗೊಮ್ಮೆ ವಾಶಿಂಗ್ ಮೆಶಿನ್‌ಗಳು ಹಾಗೂ ಗೀಸರ್ ಗಳು/ಸೋಲಾರ್ ವಾಟರ್ ಹೀಟರ್‌ಗಳಂತಹ ವಸ್ತುಗಳನ್ನು ಬದಲಿಸಲು ಅನುದಾನವನ್ನು ಒದಗಿಸುತ್ತವೆಯಾದರೂ, ರಾಜ್ಯದ ಯಾವುದೇ ವಸತಿನಿಲಯಗಳು ಈ ಬದಲಿ ಅನುದಾನವನ್ನು ಪಡೆಯಲು ತಮ್ಮ ಪ್ರಸ್ತಾವನೆಗಳನ್ನು ಸಲ್ಲಿಸಿರಲಿಲ್ಲ.

ಬದಲಿ ಅನುದಾನದ ಪ್ರಸ್ತಾವನೆಗಳನ್ನು ಭಾರತ ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022).

ಹೀಗೆ, ಅಧಿಕಾರಿಗಳ ಲೋಪದಿಂದ ಭಾರತ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಖಚಿತವಾಗಿದ್ದ ಹಣಕಾಸಿನ ನೆರವು ನಷ್ಟವಾಯಿತಲ್ಲದೆ ವಸತಿನಿಲಯದ ನಿವಾಸಿಗಳು ಸುಧಾರಿತ ಸೌಲಭ್ಯಗಳಿಂದ ವಂಚಿತವಾಗುವಲ್ಲಿ ಪರಿಣಮಿಸಿತು.

***(ಬಿ) ವಿಕಲಚೇತನರ ವಸತಿನಿಲಯಗಳಿಗೆ***

ವಿಕಲಚೇತನರ ವಸತಿನಿಲಯಗಳಿಗೆ ಕಟ್ಟಡಗಳ ಬಾಡಿಗೆ, ಆಡಳಿತಾತ್ಮಕ ಶುಲ್ಕಗಳು, ಸಿಬ್ಬಂದಿಯ ವೇತನ, ಆಹಾರ ಇತ್ಯಾದಿಗಳ ವೆಚ್ಚಕ್ಕಾಗಿ ರಾಜ್ಯಸರ್ಕಾರವು ವಾರ್ಷಿಕವಾಗಿ ಹಣ ಬಿಡುಗಡೆ ಮಾಡುತ್ತದೆ. 2016-17ರಿಂದ 2020-21ರ ಅವಧಿಯಲ್ಲಿ ಆಯವ್ಯಯ ಹಂಚಿಕೆ, ವೆಚ್ಚ ಮತ್ತು ಉಳಿತಾಯದ ವಿವರಗಳನ್ನು **ಕೋಷ್ಟಕ-2.1** ರಲ್ಲಿ ನೀಡಲಾಗಿದೆ.

**ಕೋಷ್ಟಕ-2.1: ವಿಕಲಚೇತನ ವಸತಿನಿಲಯಗಳಿಗೆ ಆಯವ್ಯಯ ಮತ್ತು ವೆಚ್ಚದ ವಿವರಗಳು**

(₹ ಲಕ್ಷಗಳಲ್ಲಿ)

| ವರ್ಷ | ಆಯವ್ಯಯ | ವೆಚ್ಚ | ಉಳಿತಾಯ | (ಶೇಕಡಾ) |
|---|---|---|---|---|
| 2016-17 | 458.00 | 321.54 | 136.46 | (30) |
| 2017-18 | 350.00 | 309.28 | 40.72 | (12) |
| 2018-19 | 350.00 | 313.32 | 36.68 | (11) |
| 2019-20 | 350.00 | 319.85 | 30.15 | (9) |
| 2020-21 | 275.00 | 271.54 | 3.46 | (1) |
| ಒಟ್ಟು | 1,783.00 | 1,535.53 | 247.17 | (14) |

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ.

2016–21ರ ಅವಧಿಯಲ್ಲಿ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಿಗೆ ಸರ್ಕಾರವು ಬಿಡುಗಡೆ ಮಾಡಿದ ಒಟ್ಟು ₹ 17.83 ಕೋಟಿಗೆ ಪ್ರತಿಯಾಗಿ ₹ 15.35 ಕೋಟಿ ಮೊತ್ತವನ್ನು ಮಾತ್ರ ಬಳಸಲಾಗಿತ್ತು ಎಂಬುದನ್ನು ಮೇಲಿನ ಕೋಷ್ಟಕದಿಂದ ಗಮನಿಸಬಹುದು. ಈ ಅವಧಿಯಲ್ಲಿ ಒಟ್ಟಾರೆ ಉಳಿತಾಯವು ಶೇಕಡಾ 14ರಷ್ಟಿದ್ದರೆ, ಅದು 2016–17ರಲ್ಲಿ ಶೇಕಡಾ 30 ಮತ್ತು 2020–21ರಲ್ಲಿ ಶೇಕಡಾ ಒಂದರ ನಡುವಿನ ವ್ಯಾಪ್ತಿಯಲ್ಲಿದ್ದಿತು.

#### 2.1.3.1 ವಸತಿನಿಲಯವೊಂದರ ನಿರ್ಮಾಣದ ಮೇಲೆ ನಿಷ್ಫಲ ವೆಚ್ಚ

104 ಉದ್ಯೋಗಸ್ಥ ಮಹಿಳೆಯರಿಗೆ ಮಕ್ಕಳ ಡೇಕೇರ್ ಸೌಲಭ್ಯದೊಂದಿಗೆ ₹ 39.12 ಲಕ್ಷ ಅಂದಾಜು ವೆಚ್ಚದಲ್ಲಿ ವಸತಿನಿಲಯದ ನಿರ್ಮಾಣಕ್ಕೆ ಸರ್ಕಾರವು ಅನುಮೋದನೆ ನೀಡಿತು (ಮಾರ್ಚ್ 1993) ಮತ್ತು ₹ 6.60 ಲಕ್ಷವನ್ನು ರಾಯಚೂರಿನ ಜನತಾ ಟ್ರಸ್ಟ್‌ಗೆ ಬಿಡುಗಡೆ ಮಾಡಿತು. ರಾಜ್ಯ ಸರ್ಕಾರವು 1995ರ ಸೆಪ್ಟೆಂಬರ್‌ನಲ್ಲಿ ₹ 1.22 ಲಕ್ಷ ಬಿಡುಗಡೆ ಮಾಡಿತು. ಕೇವಲ ತಳಪಾಯ ಮತ್ತು ಕಂಬಗಳನ್ನು ಹಾಕಲಾಗಿತ್ತು ಮತ್ತು 28 ವರ್ಷಗಳು ಕಳೆದರೂ ವಸತಿನಿಲಯ ಕಟ್ಟಡದ ನಿರ್ಮಾಣವು ಪೂರ್ಣಗೊಂಡಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ರಾಯಚೂರಿನಲ್ಲಿ ಈಗಾಗಲೇ ಎರಡು ವಸತಿನಿಲಯಗಳು ಕಾರ್ಯ ನಿರ್ವಹಿಸುತ್ತಿದ್ದು, ಈ ವಸತಿನಿಲಯದ ನಿರ್ಮಾಣ ಅಗತ್ಯವಿಲ್ಲ ಎಂದು ಜಿಲ್ಲಾ ಸಮಿತಿಯು ಸೆಪ್ಟೆಂಬರ್ 2021ರಲ್ಲಿ ನಿರ್ದೇಶನಾಲಯಕ್ಕೆ ತಿಳಿಸಿತು. ಹೀಗೆ, ಅಪೂರ್ಣವಾಗಿ ಉಳಿದಿರುವ ಮತ್ತೊಂದು ವಸತಿನಿಲಯಕ್ಕೆ ಮಂಜೂರು ಮಾಡಿರುವುದು ₹ 7.82 ಲಕ್ಷ ವೆಚ್ಚವು ನಿಷ್ಫಲವಾಗುವುದರಲ್ಲಿ ಪರಿಣಮಿಸಿತು.

ಟ್ರಸ್ಟ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ರಾಯಚೂರು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದು ನಿರ್ಗಮನ ಸಭೆಯಲ್ಲಿ (ಡಿಸೆಂಬರ್ 2021) ರಾಜ್ಯ ಸರ್ಕಾರವು ತಿಳಿಸಿತು ಮತ್ತು ಲೆಕ್ಕಪರಿಶೋಧನೆಯಲ್ಲಿ ತೋರಿಸಲಾದ ಲೋಪದೋಷಗಳ ಸಂಬಂಧವಾಗಿ ಜನತಾ ಟ್ರಸ್ಟ್‌ಗೆ ನೋಟಿಸ್ ನೀಡಲಾಗಿದೆ (ಡಿಸೆಂಬರ್ 2021) ಎಂದು ಕೂಡ ತಿಳಿಸಿತು (ಜನವರಿ 2022).

### 2.1.4 ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳು (ಸಾಮಾನ್ಯ)

#### 2.1.4.1 ಎಲ್ಲಾ ಜಿಲ್ಲೆಗಳಲ್ಲಿಯೂ ವಸತಿನಿಲಯಗಳನ್ನು ಸ್ಥಾಪಿಸಿರಲಿಲ್ಲ

ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳು, ತಮ್ಮಲ್ಲಿ ಒಳಗೊಂಡಿರುವ ಸುರಕ್ಷತೆ ಮತ್ತು ಅನುಕೂಲತೆಯಿಂದಾಗಿ ಉದ್ಯೋಗಸ್ಥ ಮಹಿಳೆಯರಿಗೆ ಉತ್ತಮ ವಸತಿ ಆಯ್ಕೆಗಳನ್ನು ಒದಗಿಸುತ್ತವೆ. ವಸತಿನಿಲಯಗಳ ಬೇಡಿಕೆಯನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಅಗತ್ಯತೆ ಆಧಾರಿತ ಮೌಲ್ಯಮಾಪನವನ್ನು ಕೈಗೊಳ್ಳಬೇಕು ಎಂದು ಭಾರತ ಸರ್ಕಾರದ ಮಾರ್ಗಸೂಚಿಗಳು ಸೂಚಿಸುತ್ತವೆ. ಈ ಮೌಲ್ಯಮಾಪನಗಳ ಆಧಾರದ ಮೇಲೆ ಈ ಯೋಜನೆಯಡಿಯಲ್ಲಿ ವಸತಿ ನಿಲಯಗಳಿಗೆ ಭೂಮಿಯನ್ನು ಸಣ್ಣ ಪಟ್ಟಣಗಳು/ಮಹಾನಗರೇತರ ಪ್ರದೇಶಗಳಲ್ಲಿ ರಾಜ್ಯ/ಕೇಂದ್ರಾಡಳಿತ ಸರ್ಕಾರವು ಜಿಲ್ಲಾಡಳಿತದ ಮೂಲಕ ನಗರ ಗ್ರಾಮಾಂತರ ಯೋಜನೆಯ ಭಾಗವಾಗಿ ಮೀಸಲಿಡಬೇಕು. ಈ ಉದ್ದೇಶಕ್ಕಾಗಿ ಜಿಲ್ಲಾ ಮಹಿಳಾ ಕಲ್ಯಾಣ ಸಮಿತಿಯು ರಾಜ್ಯ ಸರ್ಕಾರಕ್ಕೆ/ಜಿಲ್ಲಾಡಳಿತಕ್ಕೆ ಶಿಫಾರಸು ಮಾಡಬಹುದಾಗಿದೆ.

ಕರ್ನಾಟಕದಲ್ಲಿ ಉದ್ಯೋಗಸ್ಥ ಮಹಿಳೆಯರ ಅನುಕೂಲಕ್ಕಾಗಿ 23 ಜಿಲ್ಲೆಗಳಲ್ಲಿ ಹರಡಿರುವ 67 ಉದ್ಯೋಗಸ್ಥ ಮಹಿಳಾ ವಸತಿನಿಲಯಗಳು (55ನ್ನು ಖಾಸಗಿ ಏಜೆನ್ಸಿಗಳು ನಿರ್ವಹಿಸುತ್ತವೆ ಮತ್ತು 12ನ್ನು ವಿಶ್ವವಿದ್ಯಾನಿಲಯಗಳು ನಿರ್ವಹಿಸುತ್ತವೆ) ಅಸ್ತಿತ್ವದಲ್ಲಿವೆ. ಈ 67 ವಸತಿನಿಲಯಗಳಲ್ಲಿ, 65ನ್ನು ಭಾರತ ಸರ್ಕಾರದ ಯೋಜನೆಯಡಿ ಮತ್ತು ಎರಡು ವಸತಿನಿಲಯಗಳನ್ನು ರಾಜ್ಯ ಸರ್ಕಾರದ ಯೋಜನೆಯಡಿ ಸ್ಥಾಪಿಸಲಾಗಿದೆ. ಜಿಲ್ಲಾವಾರು ವಸತಿನಿಲಯಗಳ ಸಂಖ್ಯೆಯನ್ನು **ನಕ್ಷೆ–2.1**ರಲ್ಲಿ ನೀಡಲಾಗಿದೆ.

**ನಕ್ಷೆ–2.1: ವಸತಿನಿಲಯಗಳ ಜಿಲ್ಲಾವಾರು ಸಂಖ್ಯೆ**




ಮಂಜೂರಾದ ನಿವಾಸಿಗಳು ಮತ್ತು ದಾಖಲಾಗಿರುವ ನಿವಾಸಿಗಳ ವರ್ಷವಾರು ವಿವರಗಳು ಈ ಕೆಳಗಿನಂತಿವೆ:

**ಕೋಷ್ಟಕ–2.2: ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳಲ್ಲಿ ದಾಖಲಾದ ನಿವಾಸಿಗಳ ವರ್ಷಾವಾರು ವಿವರಗಳು**

| ಅವಧಿ | ಉದ್ಯೋಗಸ್ಥ ಮಹಿಳೆಯರಿಗಾಗಿನ ವಸತಿನಿಲಯಗಳ ಸಂಖ್ಯೆ | ಮಂಜೂರಾದ ನಿವಾಸಿಗಳು | ನಿವಾಸಿಗಳ ವಾಸ್ತವಿಕ ವಾಸ |
|---|---|---|---|
| 2015–16 | 65 | 5,735 | 4,395 |
| 2016–17 | 65 | 5,735 | 4,549 |
| 2017–18 | 65 | 5,735 | 4,603 |
| 2018–19 | 65 | 5,735 | 4,445 |
| 2019–20 | 65 | 5,735 | 4,184 |
| 2020–21 | 65 | 5,735 | 3,642 |
| **ಒಟ್ಟು** | | | **25,818** |

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಗರಿಷ್ಠ (11) ವಸತಿ ನಿಲಯಗಳಿದ್ದವು, ನಂತರ ಬೆಳಗಾವಿ (8) ಮತ್ತು ದಕ್ಷಿಣ ಕನ್ನಡ (5) ಜಿಲ್ಲೆಗಳಿದ್ದವು. ಎಂಟು ಜಿಲ್ಲೆಗಳು ಒಂದೇ ಹಾಸ್ಟೆಲ್ ಹೊಂದಿದ್ದರೆ, ಐದು ಜಿಲ್ಲೆಗಳು ಎರಡು ಹಾಸ್ಟೆಲ್‌ಗಳನ್ನು ಹೊಂದಿದ್ದವು. ಗದಗ ಜಿಲ್ಲೆಯ ಎರಡು ವಸತಿ ನಿಲಯಗಳ ಪೈಕಿ ಒಂದು ವಸತಿ ನಿಲಯವು ಲೆಕ್ಕಪರಿಶೋಧನೆಯ ಅವಧಿಯಲ್ಲಿ ಕಟ್ಟಡದ ದುರಸ್ತಿಯಿಂದಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ.

ಮೇಲಿನವುಗಳನ್ನು ಹೊರತುಪಡಿಸಿ, ರಾಜ್ಯ ಸರ್ಕಾರದಿಂದ ಮಂಜೂರಾದ ಮೂರು[8] ವಸತಿ ನಿಲಯಗಳು ಇನ್ನೂ ನಿರ್ಮಾಣ ಹಂತದಲ್ಲಿದ್ದವು ಏಕೆಂದರೆ, **ಕೋಷ್ಟಕ–2.3ರಲ್ಲಿ** ತೋರಿಸಿರುವಂತೆ, ಇಲಾಖೆಯು ಬಾಕಿ ಹಣವನ್ನು ಬಿಡುಗಡೆ ಮಾಡಬೇಕಿತ್ತು.

[8] ಕಲಬುರಗಿ (ಮಾರ್ಚ್ 2016), ಉಡುಪಿ (ಜೂನ್ 2017) ಮತ್ತು ವಿಜಯಪುರ (ಜನವರಿ 2018).

**ಕೋಷ್ಟಕ–2.3: ವಸತಿನಿಲಯಗಳ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿದ ಹಣದ ವಿವರಗಳು**

(₹ ಲಕ್ಷಗಳಲ್ಲಿ)

| ಸಂಸ್ಥೆಯ ಹೆಸರು | ಅಂದಾಜು ವೆಚ್ಚ | ಬಿಡುಗಡೆ ಮಾಡಬೇಕಿದ್ದ ಮೊತ್ತ | ಬಿಡುಗಡೆ ಮಾಡಿದ ಮೊತ್ತ | ಬಿಡುಗಡೆ ಮಾಡಿದ ಅವಧಿ | ಬಿಡುಗಡೆಯಲ್ಲಿನ ಕೊರತೆಯ ಶೇಕಡಾವಾರು |
|---|---|---|---|---|---|
| ಜೋಹ್ರಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಚಾರಿಟಬಲ್ ಟ್ರಸ್ಟ್, ಕಲಬುರಗಿ | 37.80 | 25.00 | 10.00 | ಮಾರ್ಚ್ 2016 | 60 |
| ಮಹಿಳಾ ಮಂಡಳ (ರಿ), ಕಟಪಾಡಿ, ಉಡುಪಿ ಜಿಲ್ಲೆ | 61.00 | 25.00 | 6.25 | ಜೂನ್ 2017 | 75 |
| ಅಲ್–ಫಲ್ಲಾ ಸಾಮಾಜಿಕ ಕಲ್ಯಾಣ ಸೊಸೈಟಿ, ಮುದ್ದೇಬಿಹಾಳ, ವಿಜಯಪುರ ಜಿಲ್ಲೆ | 81.65 | 25.00 | 6.25 | ಜನವರಿ 2018 | 75 |

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಕಂಡಿಕೆ 2.1.3(ಎ)ನಲ್ಲಿ ಚರ್ಚಿಸಿದಂತೆ, ಹಣವನ್ನು ಬಿಡುಗಡೆ ಮಾಡದಿರಲು ಆ ಉದ್ದೇಶಕ್ಕಾಗಿ ಆಯವ್ಯಯವನ್ನು ಮೀಸಲಿಡದಿರುವುದು ಕಾರಣವಾಗಿತ್ತು.

ಪ್ರತಿ ಜಿಲ್ಲೆಯಲ್ಲಿ ವಸತಿನಿಲಯಗಳನ್ನು ಸ್ಥಾಪಿಸಲು ಇಲಾಖೆಯು ಅಗತ್ಯತೆ ಆಧಾರಿತ ಮೌಲ್ಯಮಾಪನವನ್ನು ಕೈಗೊಂಡಿರಲಿಲ್ಲ ಅಥವಾ ಆ ನಿಟ್ಟಿನಲ್ಲಿ ಯಾವುದೇ ಕಾರ್ಯ ಯೋಜನೆಯನ್ನು ಸಿದ್ಧಪಡಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮಹಿಳೆಯರು/ಉದ್ಯೋಗಸ್ಥ ಮಹಿಳೆಯರು ಉತ್ತಮ ಉದ್ಯೋಗಾವಕಾಶಗಳ ಹುಡುಕಾಟದಲ್ಲಿ (ಅಂತರರಾಜ್ಯ/ಒಳರಾಜ್ಯ) ವಲಸೆ ಹೋಗುವುದರಿಂದ ಇದು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಅಲ್ಲದೆ, ಇಲಾಖೆಯು ವಲಸೆ ಹೋಗುವ ಉದ್ಯೋಗಸ್ಥ ಮಹಿಳೆಯರ ದತ್ತಸಂಚಯವನ್ನು ಹೊಂದಿರಲಿಲ್ಲ ಮತ್ತು ವಲಸೆ ಹೋಗುವ ಮಹಿಳೆಯರ ಬೇಡಿಕೆಯನ್ನು ಪೂರೈಸಲು ಸಾಕಷ್ಟು ಸಂಖ್ಯೆಯ ಸಾಂಸ್ಥಿಕ ವಸತಿ ಸೌಲಭ್ಯಗಳು ಲಭ್ಯವಿವೆ ಎಂಬುದನ್ನು ಖಚಿತ ಪಡಿಸಿಕೊಳ್ಳಲು ನಿರ್ದಿಷ್ಟ ಪ್ರದೇಶ/ಪಟ್ಟಣ/ನಗರದಲ್ಲಿರುವ ಉದ್ಯೋಗಸ್ಥ ಮಹಿಳೆಯರ ಪ್ರಮಾಣವನ್ನು ನಿರ್ಧರಣೆ ಮಾಡಿರಲಿಲ್ಲ. ಆರ್ಥಿಕ ಸಮೀಕ್ಷೆಯ ವರದಿಗಳ ಪ್ರಕಾರ, ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳನ್ನು ಹೊಂದಿರದ ಏಳು ಜಿಲ್ಲೆಗಳಲ್ಲಿ 2017 ಮತ್ತು 2020ರ ನಡುವೆ ಉದ್ಯೋಗಗಳನ್ನು ಹುಡುಕುವ ಮಹಿಳೆಯರ ಸಂಖ್ಯೆ ಗಣನೀಯವಾಗಿ (ಶೇಕಡಾ 43 ರಿಂದ 90 ರವರೆಗೆ) ಹೆಚ್ಚಾಗಿದ್ದಿತು. ಅಲ್ಲದೆ, 2016–17ನೇ ಅವಧಿಯ ಅರ್ಥಶಾಸ್ತ್ರ ಮತ್ತು ಅಂಕಿಅಂಶಗಳ ನಿರ್ದೇಶನಾಲಯದ ವರದಿಯ ಪ್ರಕಾರ, ಉದ್ಯೋಗದಲ್ಲಿರುವ ಒಟ್ಟು ಮಹಿಳೆಯರು ಮತ್ತು ಈ ಏಳು ಜಿಲ್ಲೆಗಳಲ್ಲಿ ಪದವಿಗೆ ದಾಖಲೆ ಪಡೆದ ಹುಡುಗಿಯರ ಸಂಖ್ಯೆ 21,931 ಮತ್ತು 57,076ರ ನಡುವಿನ ವ್ಯಾಪ್ತಿಯಲ್ಲಿದ್ದಿತು.

ಮಂಜೂರಾದ ವಸತಿನಿಲಯದ ಕಟ್ಟಡಗಳಿಗೆ ಸಮರ್ಪಕವಾಗಿ ಹಣ ಒದಗಿಸದಿದ್ದುದು ಕಟ್ಟಡಗಳು ದೀರ್ಘಕಾಲ ಅಪೂರ್ಣವಾಗಿ ಉಳಿದು ಮತ್ತು ವೆಚ್ಚವು ನಿಷ್ಫಲವಾಗುವಲ್ಲಿ ಪರಿಣಮಿಸಿತು.

ಉಳಿದ ಜಿಲ್ಲೆಗಳಲ್ಲಿ ಅಗತ್ಯತೆ ಆಧಾರಿತ ಮೌಲ್ಯಮಾಪನವನ್ನು ಸೂಕ್ತ ಏಜೆನ್ಸಿಯ ಮೂಲಕ ಶೀಘ್ರದಲ್ಲೇ ತೆಗೆದುಕೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022).

### 2.1.4.2 ಎಲ್ಲಾ ಹೊಸ ಸಾಂಸ್ಥಿಕ ಪ್ರದೇಶಗಳು ಮತ್ತು ಆರ್ಥಿಕ ವಲಯಗಳಲ್ಲಿ ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳಿಗಾಗಿ ಸಾರ್ವಜನಿಕ ಭೂಮಿಯನ್ನು ಮೀಸಲಿಡುವುದು

ಎಲ್ಲಾ ಹೊಸ ಸಾಂಸ್ಥಿಕ ಪ್ರದೇಶಗಳು ಮತ್ತು ರಾಜ್ಯಗಳಲ್ಲಿ ಸ್ಥಾಪಿಸಲಾಗುತ್ತಿರುವ ಆರ್ಥಿಕ ವಲಯಗಳಲ್ಲಿ, ಆ ಪ್ರದೇಶದಲ್ಲಿ ಮಹಿಳೆಯರಿಗೆ ಲಭ್ಯವಿರುವ ಉದ್ಯೋಗಾವಕಾಶವನ್ನು ಗಮನದಲ್ಲಿಟ್ಟುಕೊಂಡು

ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳಿಗಾಗಿ ಸಾರ್ವಜನಿಕ ಭೂಮಿಯನ್ನು ಮೀಸಲಿಡುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಎಂದು ಭಾರತ ಸರ್ಕಾರವು ನಿಗದಿಪಡಿಸಿತ್ತು (ಮಾರ್ಗಸೂಚಿಗಳ ಕಂಡಿಕೆ 12). ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಹೊಸ/ಅಸ್ತಿತ್ವದಲ್ಲಿರುವ ಬಡಾವಣೆಗಳಲ್ಲಿ ಅಂತಹ ವಸತಿ ನಿಲಯಗಳಿಗೆ ಸಾರ್ವಜನಿಕ ಭೂಮಿಯನ್ನು ಮೀಸಲಿಡುವ ಕಾರ್ಯವನ್ನು ಕೈಗೊಳ್ಳಲು ಎಲ್ಲಾ ಅಭಿವೃದ್ಧಿ ಪ್ರಾಧಿಕಾರಗಳಿಗೆ ಸೂಚಿಸಬೇಕು. ವಸತಿನಿಲಯಗಳಿಗೆ ಸಾರ್ವಜನಿಕ ಭೂಮಿಯನ್ನು ಮೀಸಲಿಡಲು ಮತ್ತು ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಶಾಸನವನ್ನು ಜಾರಿಗೊಳಿಸಬೇಕು ಅಥವಾ ಅಗತ್ಯವೆಂದು ಪರಿಗಣಿಸಿದರೆ ಅಸ್ತಿತ್ವದಲ್ಲಿರುವ ಕಾನೂನುಗಳಿಗೆ ತಿದ್ದುಪಡಿಯನ್ನು ತರಬೇಕು.

ವಿಶೇಷ ಆರ್ಥಿಕ ವಲಯಗಳ ಕಾಯಿದೆ 2005ರ ಅಡಿಯಲ್ಲಿ ರಚಿತವಾದ ವಿಶೇಷ ಆರ್ಥಿಕ ವಲಯಗಳ ಅನುಮೋದನೆ ಮಂಡಳಿಯು ರಾಜ್ಯದಲ್ಲಿ 75 ವಿಶೇಷ ಆರ್ಥಿಕ ವಲಯಗಳಿಗೆ ಔಪಚಾರಿಕ ಅನುಮೋದನೆಗಳನ್ನು ನೀಡಿತು ಮತ್ತು ಅವುಗಳಲ್ಲಿ 36 ವಲಯಗಳು ₹ 99,055.56 ಕೋಟಿಗಳ ಹೂಡಿಕೆಯೊಂದಿಗೆ ಕಾರ್ಯನಿರ್ವಹಿಸುತ್ತಿವೆ ಹಾಗೂ 3,72,927 ಜನರಿಗೆ ಉದ್ಯೋಗವನ್ನು ಸೃಷ್ಟಿಸಿವೆ. ಪ್ರಸ್ತುತ ಈ ವಿಶೇಷ ಆರ್ಥಿಕ ವಲಯಗಳಲ್ಲಿ ಒಟ್ಟು 495 ಘಟಕಗಳಿವೆ. 2020-21ರ ಅವಧಿಯಲ್ಲಿ (ಏಪ್ರಿಲ್ ನಿಂದ ಸೆಪ್ಟೆಂಬರ್‌ವರೆಗೆ) ಈ ವಿಶೇಷ ಆರ್ಥಿಕ ವಲಯಗಳಿಂದ ಆದ ರಫ್ತು ಮೌಲ್ಯವು ₹ 62,547.44 ಕೋಟಿಗಳಷ್ಟಿತ್ತು[9]. ಕರ್ನಾಟಕ ಹಣಕಾಸು ನೀತಿ ಸಂಸ್ಥೆಯು 2018-19ರಲ್ಲಿ 'ಕರ್ನಾಟಕದಲ್ಲಿನ ವಿಶೇಷ ಆರ್ಥಿಕ ವಲಯಗಳ ಸ್ಥಿತಿ' ಕುರಿತು ನಡೆಸಿದ ಅಧ್ಯಯನವು 26 ವಿಶೇಷ ಆರ್ಥಿಕ ವಲಯಗಳ ಕಾರ್ಯಾಚರಣಾ ಘಟಕಗಳಲ್ಲಿ 71,118 ಮಹಿಳಾ ಉದ್ಯೋಗಿಗಳು (ನುರಿತ ಮತ್ತು ಕೌಶಲ್ಯರಹಿತ) ಕಾರ್ಯ ನಿರ್ವಹಿಸುತ್ತಿದ್ದರು ಎಂದು ವರದಿ ಮಾಡಿತ್ತು.

ನಿರ್ದಿಷ್ಟ ಪ್ರದೇಶದಲ್ಲಿ ಮಹಿಳೆಯರಿಗೆ ಇರುವ ಬೃಹತ್ ಉದ್ಯೋಗಾವಕಾಶವನ್ನು ಗಮನದಲ್ಲಿಟ್ಟುಕೊಂಡು ರಾಜ್ಯಗಳಲ್ಲಿ ಸ್ಥಾಪಿಸಲಾಗುತ್ತಿರುವ ಎಲ್ಲಾ ಹೊಸ ಸಾಂಸ್ಥಿಕ ಪ್ರದೇಶಗಳು ಮತ್ತು ಆರ್ಥಿಕ ವಲಯಗಳಲ್ಲಿ ಸಾರ್ವಜನಿಕ ಭೂಮಿಯನ್ನು ಮೀಸಲಿಡಲು ಯೋಜನೆಯನ್ನು ಅನುಷ್ಠಾನಗೊಳಿಸುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರ ಹೊಂದಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ರಾಜ್ಯ ಸರ್ಕಾರದ ಗಮನಕ್ಕೆ ತಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಉದ್ಯೋಗಸ್ಥ ಮಹಿಳೆಯರ ವಸತಿನಿಲಯ ನಿರ್ಮಾಣಕ್ಕಾಗಿ ಸಾರ್ವಜನಿಕ ಭೂಮಿಯನ್ನು ಕಾಯ್ದಿರಿಸಲು ಎಲ್ಲಾ ಜಿಲ್ಲಾಧಿಕಾರಿಗಳನ್ನು ವಿನಂತಿಸಲಾಗಿದೆ (ಡಿಸೆಂಬರ್ 2021) ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022). ವಿವಿಧ ಕೈಗಾರಿಕೆಗಳು/ಸೇವಾ ವಲಯದ ಅಸ್ತಿತ್ವ ಅಥವಾ ಬೆಳವಣಿಗೆಯಿಂದಾಗಿ ವಲಸೆ ಜನಸಂಖ್ಯೆಯ ದೊಡ್ಡ ಒಳಹರಿವು ಇರುವ ಪ್ರದೇಶಗಳು/ಪಟ್ಟಣಗಳು/ನಗರಗಳನ್ನು ಗುರುತಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಕಾರ್ಮಿಕ ಮತ್ತು ನಗರಾಭಿವೃದ್ಧಿ ಇಲಾಖೆಗಳಿಗೆ ಪತ್ರಗಳನ್ನು ಬರೆದು ಹೊಸ/ಅಸ್ತಿತ್ವದಲ್ಲಿರುವ ಬಡಾವಣೆಗಳಲ್ಲಿ ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳಿಗಾಗಿ ಸಾರ್ವಜನಿಕ ಭೂಮಿಯನ್ನು ಮೀಸಲಿಡುವಂತೆ ಸೂಚಿಸಿರುವುದಾಗಿಯೂ (ಜೂನ್ 2021) ಸಹ ಸರ್ಕಾರವು ತಿಳಿಸಿತು. ಆದರೆ, ಪತ್ರಗಳನ್ನು ಲೆಕ್ಕಪರಿಶೋಧನೆಯ ನಂತರ ಬರೆಯಲಾಗಿದೆ ಎಂಬುದು ವಾಸ್ತವಾಂಶವಾಗಿದೆ.

#### 2.1.4.3 ಮೂಲಸೌಕರ್ಯಗಳ ಲಭ್ಯತೆ

ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮಾರ್ಗಸೂಚಿಗಳಿಗೆ ಅನುಸಾರವಾಗಿ ಪ್ರತಿ ವಸತಿನಿಲಯಗಳು ಡೇ ಕೇರ್ ಸೆಂಟರ್‌ಗಳು, ಗೀಸರ್/ಸೋಲಾರ್ ವಾಟರ್ ಹೀಟಿಂಗ್ ಸಿಸ್ಟಂ, ಪೀಠೋಪಕರಣಗಳು ಇತ್ಯಾದಿ

[9] ಆಧಾರ-ಕರ್ನಾಟಕದ ಆರ್ಥಿಕ ಸಮೀಕ್ಷೆ-2020-21.

ಮೂಲ ಸೌಕರ್ಯಗಳನ್ನು ಹೊಂದಿರಬೇಕು ಮತ್ತು ಅದಕ್ಕಾಗಿ ಒಂದು ಬಾರಿಯ ಆರ್ಥಿಕ ಸಹಾಯವನ್ನು ಭಾರತ ಸರ್ಕಾರವು ಒದಗಿಸುತ್ತದೆ. ಭಾರತ ಸರ್ಕಾರದ ಮಾರ್ಗಸೂಚಿಗಳು ಸಿಸಿಟಿವಿ, ವೈದ್ಯಕೀಯ ಪ್ರಥಮ ಚಿಕಿತ್ಸೆ ಮುಂತಾದ ಹೆಚ್ಚುವರಿ ಸೌಲಭ್ಯಗಳನ್ನು ಸಹ ನಿಗದಿಪಡಿಸಿದ್ದವು.

₹ 11.22 ಕೋಟಿ (1975ರಿಂದ 2017ರ ಅವಧಿಯಲ್ಲಿ ಬಿಡುಗಡೆಯಾದ) ಸರ್ಕಾರದ ನೆರವಿನೊಂದಿಗೆ ಸ್ಥಾಪಿಸಲಾದ ಪರೀಕ್ಷಾ–ತನಿಖೆ ನಡೆಸಿದ 26 ವಸತಿನಿಲಯಗಳು ನಿವಾಸಿಗಳಿಗೆ ಎಲ್ಲಾ ನಿಗದಿತ ಸೌಲಭ್ಯಗಳನ್ನು ಒದಗಿಸಲು ವಿಫಲವಾಗಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ನವೆಂಬರ್ 2020–ಏಪ್ರಿಲ್ 2021). 20 ವಸತಿ ನಿಲಯಗಳು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ನೆರವಿನೊಂದಿಗೆ ನಿರ್ಮಿಸಲಾದ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು ಮತ್ತು ಆರು ವಸತಿನಿಲಯಗಳು ಗುತ್ತಿಗೆ/ಬಾಡಿಗೆ ಪಡೆದ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ಜಂಟಿ ತಪಾಸಣೆ ಮತ್ತು ಮಾಹಿತಿಯ ವಿಶ್ಲೇಷಣೆಯ ಸಮಯದಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು. ಒಂಬತ್ತು ವಸತಿನಿಲಯಗಳಲ್ಲಿ ಬೀಟ್ ಪೊಲೀಸ್‌ಗೆ ಸಹಿ ಪಾಯಿಂಟ್‌ಗಳ ಕೊರತೆ, 18 ವಸತಿನಿಲಯಗಳಲ್ಲಿ ಡೇ ಕೇರ್ ಸೆಂಟರ್ ಇಲ್ಲದಿರುವುದು, 19 ವಸತಿನಿಲಯಗಳಲ್ಲಿ ವಾಷಿಂಗ್ ಮೆಷಿನ್ ಇಲ್ಲದಿರುವುದು, 21 ವಸತಿನಿಲಯಗಳಲ್ಲಿ ರೇಲಿಂಗ್ ಸೌಲಭ್ಯವಿರುವ ರ್‍ಯಾಂಪ್‌ಗಳು ಇಲ್ಲದಿರುವುದು, 23 ವಸತಿನಿಲಯಗಳಲ್ಲಿ ಅಂಗವಿಕಲರ ಸ್ನೇಹಿ ಶೌಚಾಲಯಗಳಿಲ್ಲರುವುದು ಮತ್ತು 10 ವಸತಿನಿಲಯಗಳಲ್ಲಿ ಅಗ್ನಿಶಾಮಕ ಯಂತ್ರಗಳಿಲ್ಲರುವುದನ್ನು ಜಂಟಿ ತಪಾಸಣೆಯಲ್ಲಿ ಗಮನಿಸಲಾಯಿತು. ನಿವಾಸಿಗಳಿಗೆ ವಿವಿಧ ಸೌಲಭ್ಯಗಳನ್ನು ಒದಗಿಸುವಲ್ಲಿನ ನ್ಯೂನತೆಗಳನ್ನು **ಅನುಬಂಧ–2.1** ರಲ್ಲಿ ವಿವರಿಸಲಾಗಿದೆ.

ಮೈಸೂರು ನಗರ ಮಹಿಳಾ ಕ್ರೆಡಿಟ್ ಕೋಆಪರೇಟಿವ್ ಸೊಸೈಟಿ, ಕುಟುಂಬ ಸಹಾಯ ಕೇಂದ್ರ (ಕೇಂದ್ರ ಸಮಾಜ ಕಲ್ಯಾಣ ಕೇಂದ್ರ–ಸಹಾಯಾನುದಾನ), ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಮತ್ತು ಅಖಿಲ ಭಾರತ ಮಹಿಳಾ ಸಮ್ಮೇಳನ ಕಛೇರಿ (ಎಐಡಬ್ಲ್ಯುಸಿ) ಮುಂತಾದ ಖಾಸಗಿ ಸಂಸ್ಥೆಗಳು ಮೈಸೂರಿನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯದ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಸತಿನಿಲಯದಲ್ಲಿ ಮೂಲಸೌಕರ್ಯಗಳು ಕಳಪೆಯಾಗಿದ್ದು, ನಗದು ಪುಸ್ತಕ, ನಿವಾಸಿಗಳ ವಿವರಗಳನ್ನು ಒಳಗೊಂಡಿರುವ ರಿಜಿಸ್ಟರ್ ಇತ್ಯಾದಿ ದಾಖಲೆಗಳನ್ನು ನಿರ್ವಹಿಸಿರಲಿಲ್ಲ. ವಸತಿನಿಲಯದ ಕಾವಲಿಗಾಗಿ ಯಾವುದೇ ಭದ್ರತಾ ವ್ಯವಸ್ಥೆ ಇರಲಿಲ್ಲ.

ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳ ನಿಯತಕಾಲಿಕ ತಪಾಸಣೆಗಳ ಕೊರತೆ ಮತ್ತು ಕಾರ್ಯನಿರ್ವಹಣೆಯ ಮೇಲೆ ಜಿಲ್ಲಾ ಪ್ರಾಧಿಕಾರಗಳ ಸಮರ್ಪಕ ಮೇಲ್ವಿಚಾರಣೆಯ ಅನುಪಸ್ಥಿತಿಯು ಈ ವಸತಿನಿಲಯದ ನಿವಾಸಿಗಳು ನಿಗದಿತ ಸೌಲಭ್ಯಗಳಿಂದ ವಂಚಿತರಾಗುವಲ್ಲಿ ಪರಿಣಮಿಸಿತು.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಮಿತಿಯು ವಸತಿನಿಲಯಗಳ ಕಾರ್ಯನಿರ್ವಹಣೆಯನ್ನು ನಿಯಮಿತವಾಗಿ ಪರಿಶೀಲಿಸುತ್ತಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022). ಆದರೆ ವಸತಿನಿಲಯದ ನಿವಾಸಿಗಳಿಗೆ ನಿಗದಿಪಡಿಸಿದ ಎಲ್ಲಾ ಸೌಲಭ್ಯಗಳನ್ನು ಒದಗಿಸಿರಲಿಲ್ಲ ಎಂಬುದು ವಾಸ್ತವಾಂಶವಾಗಿದೆ.

### 2.1.4.4 ಮಾರ್ಗಸೂಚಿಗಳನ್ನು ಅನುಸರಿಸದಿರುವುದು

ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳ ನೆರವಿನಿಂದ ಸ್ಥಾಪಿಸಲಾದ ಪ್ರತಿಯೊಂದು ವಸತಿನಿಲಯವು, ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಕೆಲವು ಮಾರ್ಗಸೂಚಿಗಳನ್ನು ಅನುಸರಿಸುವ ಅಗತ್ಯವಿದೆ. ಪರೀಕ್ಷಾ–ತನಿಖೆ ನಡೆಸಲಾದ 26 ವಸತಿನಿಲಯಗಳಲ್ಲಿನ ಅನುಸರಣೆಯ ಸ್ಥಿತಿಯನ್ನು **ಕೋಷ್ಟಕ–2.4ರಲ್ಲಿ** ನೀಡಲಾಗಿದೆ.

**ಕೋಷ್ಟಕ-2.4:ಪರೀಕ್ಷಾ-ತನಿಖೆ ನಡೆಸಿದ 26 ಉದ್ಯೋಗಸ್ಥ ಮಹಿಳಾ ವಸತಿನಿಲಯಗಳಲ್ಲಿ ಅನುಸರಣೆಯ ಸ್ಥಿತಿ**

| ಕ್ರಮ ಸಂಖ್ಯೆ | ಯೋಜನಾ ಮಾರ್ಗಸೂಚಿಗಳ ಪ್ರಕಾರ | ವಸತಿನಿಲಯಗಳ ಸಂಖ್ಯೆ | |
|---|---|---|---|
| | | ಅನುಸರಣೆ ಮಾಡಿರುವುದು | ಅನುಸರಣೆ ಮಾಡದಿರುವುದು |
| 1 | ವಸತಿನಿಲಯದ ಅಧಿಕಾರಿಗಳು ಕಟ್ಟಡದ ಮೇಲೆ ಪ್ರಮುಖವಾಗಿ ವಸತಿ ಹೆಸರು ಮತ್ತು "ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ/ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನೆರವು" ಎಂಬ ಫಲಕವನ್ನು ಪ್ರದರ್ಶಿಸಬೇಕು. | 17 | 09 |
| 2 | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಸತಿನಿಲಯದ ಪ್ರತಿನಿಧಿಗಳನ್ನು ಒಳಗೊಂಡ ವಸತಿನಿಲಯ ನಿರ್ವಹಣಾ ಸಮಿತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸಬೇಕು. | 11 ವಸತಿನಿಲಯಗಳಲ್ಲಿ ವಸತಿನಿಲಯ ನಿರ್ವಹಣಾ ಸಮಿತಿಗಳನ್ನು ರಚಿಸಲಾಗಿದ್ದರೂ ಸಹ ನಿಗದಿಪಡಿಸಿದಂತೆ ಸಭೆಗಳನ್ನು ನಡೆಸಿರಲಿಲ್ಲ | 15 |
| 3 | ವಸತಿನಿಲಯದ ಅಧಿಕಾರಿಗಳು ನಿವಾಸಿಗಳು ಕೆಲಸ ಮಾಡುವ ಸ್ಥಳ, ವಸತಿನಿಲಯದ ನಿವಾಸಿಗಳ ವಾಸ್ತವ್ಯ ಮುಂತಾದ ವಿವರಗಳನ್ನು ಒಳಗೊಂಡಿರುವ ದತ್ತಸಂಚಯ/ದಾಖಲೆಗಳನ್ನು ನಿರ್ವಹಿಸಬೇಕು. | ದತ್ತಸಂಚಯವು ಕೇವಲ 3 ವಸತಿನಿಲಯಗಳಲ್ಲಿ ಪೂರ್ಣವಾಗಿತ್ತು ಮತ್ತು 12 ವಸತಿನಿಲಯಗಳಲ್ಲಿ ಅಪೂರ್ಣವಾಗಿತ್ತು | 07* |

ಆಧಾರ: ವಸತಿನಿಲಯಗಳು ಒದಗಿಸಿದ ಮಾಹಿತಿ.

* ಚಾಲ್ತಿಯಲ್ಲಿರುವ ಕೋವಿಡ್ ಸಾಂಕ್ರಾಮಿಕ ಪರಿಸ್ಥಿತಿಯಿಂದಾಗಿ ಜಂಟಿ ಭೌತಿಕ ಪರಿಶೀಲನೆಯನ್ನು ನಡೆಸದ ಕಾರಣ ಇತರ ನಾಲ್ಕು ವಸತಿನಿಲಯಗಳ ಸ್ಥಿತಿಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಹೊರಡಿಸಿದ ಯೋಜನಾ ಮಾರ್ಗಸೂಚಿಗಳಲ್ಲಿ ಸೂಚಿಸಲಾದ ನಿಬಂಧನೆಗಳನ್ನು ವಸತಿನಿಲಯಗಳು ಅನುಸರಿಸಿರಲಿಲ್ಲ ಎಂಬುದನ್ನು ಗಮನಿಸಬಹುದು.

### 2.1.4.5 ಹಾಸ್ಟೆಲ್‌ಗಳನ್ನು ಮೂಲ ಉದ್ದೇಶಗಳಿಗಾಗಿ ಬಳಸದಿರುವುದು

ಸರ್ಕಾರದ ನೆರವಿನೊಂದಿಗೆ ನಿರ್ಮಿಸಲಾದ ಎರಡು ವಸತಿ ನಿಲಯಗಳನ್ನು, ಕೆಳಗೆ ವಿವರಿಸಿದಂತೆ, ಉದ್ಯೋಗಸ್ಥ ಮಹಿಳೆಯರಿಗೆ ವಸತಿ ಸೌಲಭ್ಯವನ್ನು ಒದಗಿಸಲು ಬಳಸದೆ ಇರುವುದನ್ನು ಜಂಟಿ ತಪಾಸಣೆಯ ಸಂದರ್ಭದಲ್ಲಿ ಗಮನಿಸಲಾಗಿಯಿತು:

**(ಎ)** ನಿರ್ದೇಶಕರು, ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್, ಸೌತ್ ಇಂಡಿಯಾ, ಬೆಂಗಳೂರು, ಇವರು 100 ಉದ್ಯೋಗಸ್ಥ ಮಹಿಳೆಯರಿಗೆ ಡೇಕೇರ್ ಸೆಂಟರ್ ಒಳಗೊಂಡ ವಸತಿನಿಲಯದ ನಿರ್ಮಾಣಕ್ಕಾಗಿ ಭಾರತ ಸರ್ಕಾರದಿಂದ ಮಂಜೂರಾಗಿದ್ದ ₹ 82.50 ಲಕ್ಷದಲ್ಲಿ ₹ 74.25 ಲಕ್ಷ (2004-06) ಮತ್ತು ಕರ್ನಾಟಕ ಸರ್ಕಾರದಿಂದ ಮಂಜೂರಾಗಿದ್ದ ₹ 13.75 ಲಕ್ಷದಲ್ಲಿ ₹ 6.88 ಲಕ್ಷ ಅನುದಾನವನ್ನು ಪಡೆದಿದ್ದರು. 96 ಕೊಠಡಿಗಳನ್ನು ಒಳಗೊಂಡಿರುವ ವಸತಿನಿಲಯ ಕಟ್ಟಡವನ್ನು ಸಂಸ್ಥೆಯು ನಡೆಸುವ ತರಬೇತಿಗೆ ಹಾಜರಾಗುವ ನಿವಾಸಿಗಳ ವಾಸ್ತವ್ಯಕ್ಕಾಗಿ ಬಳಸಲಾಗುತ್ತಿತ್ತು ಮತ್ತು ವಸತಿನಿಲಯದಲ್ಲಿ ಉದ್ಯೋಗಸ್ಥ ಮಹಿಳೆಯರು ಇರಲಿಲ್ಲ. ಇದು ಮೂಲ ಉದ್ದೇಶದಿಂದ ಅನುದಾನವನ್ನು ಮಾರ್ಗಪಲ್ಲಟ ಮಾಡುವಲ್ಲಿ ಪರಿಣಮಿಸಿತು. ಸಂಸ್ಥೆಯು ನಡೆಸುವ ತರಬೇತಿಗಳಿಗಾಗಿ ವಸತಿನಿಲಯವನ್ನು ಬಳಸಿಕೊಳ್ಳಲು ಭಾರತ ಸರ್ಕಾರ/ರಾಜ್ಯ ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿತ್ತು ಎಂಬುದನ್ನು ತೋರಿಸಲು ಯಾವುದೇ ದಾಖಲೆಗಳು ಲಭ್ಯವಿರಲಿಲ್ಲ.

**(ಬಿ)** ರಾಯಚೂರಿನ ಗುಲ್ಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದಲ್ಲಿ ಉದ್ಯೋಗಸ್ಥ ಮಹಿಳೆಯರ ವಸತಿನಿಲಯದ ನಿರ್ಮಾಣದ ಉದ್ದೇಶಕ್ಕಾಗಿ ಬಿಡುಗಡೆಯಾದ ₹ 79.76 ಲಕ್ಷ ಅನುದಾನವನ್ನು ಬಾಲಕರ ವಸತಿಗಾಗಿ (ಮೂರು ಬ್ಲಾಕ್‌ಗಳು), ಸಿಬ್ಬಂದಿ ವಸತಿನಿವಾಸ (ಒಂದು ಬ್ಲಾಕ್) ಏಳು ಬ್ಲಾಕ್‌ಗಳ ನಿರ್ಮಾಣಕ್ಕಾಗಿ ಖರ್ಚು ಮಾಡಲಾಗಿದೆ. ಬ್ಲಾಕ್), ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿಗಳು (ಒಂದು ಬ್ಲಾಕ್), ಅತಿಥಿ ಗೃಹ (ಒಂದು ಬ್ಲಾಕ್) ಮತ್ತು ಗ್ರಂಥಾಲಯ (ಒಂದು ಬ್ಲಾಕ್), ಹೀಗೆ ಒಟ್ಟು ಏಳು ಬ್ಲಾಕ್ ಗಳ ನಿರ್ಮಾಣದ ಮೇಲೆ ವೆಚ್ಚ ಮಾಡಲಾಯಿತು. ಇದು ಮೂಲ ಉದ್ದೇಶದಿಂದ ಅನುದಾನವನ್ನು ಮಾರ್ಗಪಲ್ಲಟ ಮಾಡುವಲ್ಲಿ ಪರಿಣಮಿಸಿತು.

ಹೀಗೆ, ಉದ್ಯೋಗಸ್ಥ ಮಹಿಳೆಯರ ವಸತಿನಿಲಯಕ್ಕಾಗಿನ ಸರ್ಕಾರದ ಅನುದಾನದಿಂದ ನಿರ್ಮಿಸಲಾದ ವಸತಿನಿಲಯಗಳ ಕಟ್ಟಡಗಳನ್ನು ಇತರ ಉದ್ದೇಶಗಳಿಗಾಗಿ ಬಳಕೆ ಮಾಡಿತ್ತು ಕಾನೂನುಬಾಹಿರವಾಗಿತ್ತು.

ವರದಿಯಲ್ಲಿ ಉಲ್ಲೇಖಿಸಲಾದ ಲೋಪದೋಷಗಳ ಬಗ್ಗೆ ವಸತಿನಿಲಯದ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ (ಡಿಸೆಂಬರ್ 2021) ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022).

## 2.1.5 ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ

### 2.1.5.1 ವಸತಿನಿಲಯಗಳ ಕಾರ್ಯ ನಿರ್ವಹಣೆಯ ಸ್ಥಿತಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಿರ್ವಹಿಸಲ್ಪಡುವ ಸಾಮಾನ್ಯ ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳ ಹೊರತಾಗಿ, ರಾಜ್ಯವು 24 ಜಿಲ್ಲೆಗಳಲ್ಲಿ ವಿಕಲಚೇತನ ಮಹಿಳೆಯರಿಗಾಗಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ನಿರ್ವಹಿಸಲ್ಪಡುವ 28 ವಸತಿನಿಲಯಗಳನ್ನು ಹೊಂದಿದೆ. ಇವುಗಳಲ್ಲಿ ಚಿಕ್ಕಮಗಳೂರು ಮತ್ತು ರಾಮನಗರಗಳಲ್ಲಿನ ವಸತಿನಿಲಯಗಳು ಕಾರ್ಯ ನಿರ್ವಹಿಸುತ್ತಿರಲಿಲ್ಲ[10] ಮತ್ತು ದಕ್ಷಿಣ ಕನ್ನಡ, ದಾವಣಗೆರೆ, ಕೊಡಗು, ರಾಯಚೂರು, ಉಡುಪಿ ಮತ್ತು ಉತ್ತರ ಕನ್ನಡ, ಈ ಜಿಲ್ಲೆಗಳಲ್ಲಿ ವಿಕಲಚೇತನರಿಗೆ ವಸತಿ ನಿಲಯಗಳಿರಲಿಲ್ಲ. ಮಂಜೂರಾದ ಸಾಮರ್ಥ್ಯ ಮತ್ತು ದಾಖಲಾಗಿರುವ ನಿವಾಸಿಗಳ ವರ್ಷವಾರು ವಿವರಗಳು ಈ ಕೆಳಗಿನಂತಿವೆ:

**ಕೋಷ್ಟಕ–2.5: ದಾಖಲಾದ ವಿಕಲಚೇತನ ವಸತಿನಿಲಯಗಳ ನಿವಾಸಿಗಳ ವರ್ಷಾವಾರು ವಿವರಗಳು**

| ಅವಧಿ | ವಿಕಲಚೇತನರಿಗೆ ವಸತಿನಿಲಯಗಳ ಸಂಖ್ಯೆ | ಮಂಜೂರಾದ ಸಾಮರ್ಥ್ಯ | ವಾಸ್ತವಿಕ ನಿವಾಸಿಗಳು |
|---|---|---|---|
| 2015–16 | 27 | 1,350 | 1,139 |
| 2016–17 | 27 | 1,350 | 843 |
| 2017–18 | 27 | 1,350 | 738 |
| 2018–19 | 27 | 1,350 | 800 |
| 2019–20 | 25 | 1,250 | 999 |
| 2020–21 | 25 | 1,250 | 651 |
| **ಒಟ್ಟು** | | | **5,170** |

ರಾಯಚೂರಿನ ಸಂಕಲ್ಪ ಸಂಸ್ಥೆಯಿಂದ ರಾಯಚೂರಿನಲ್ಲಿ ವಿಕಲಚೇತನರಿಗಾಗಿ ವಸತಿನಿಲಯ ಸ್ಥಾಪನೆಗೆ ರಾಜ್ಯ ಸರ್ಕಾರವು ಅನುಮೋದನೆ ನೀಡಿರುವುದನ್ನು (ಮೇ 2007) ಲೆಕ್ಕಪರಿಶೋಧನೆಯು ಗಮನಿಸಿತು. ಪತ್ರಿಕೆಗಳ ಮೂಲಕ ವ್ಯಾಪಕ ಪ್ರಚಾರ ನೀಡಿದರೂ ನಿವಾಸಿಗಳು ಇಲ್ಲದ ಕಾರಣ ವಸತಿನಿಲಯ ಕಾರ್ಯಾರಂಭ ಮಾಡಲು ಸಾಧ್ಯವಾಗಲಿಲ್ಲ. ಬೇಡಿಕೆಯಿರುವ ಕಾರಣ ವಸತಿ ನಿಲಯವನ್ನು ಪ್ರಾರಂಭಿಸಲು ಸಂಕಲ್ಪ ಸಂಸ್ಥೆಯು ತನ್ನ ಇಚ್ಛೆಯನ್ನು ವ್ಯಕ್ತಪಡಿಸಿತು (ಮಾರ್ಚ್ 2013) ಮತ್ತು ಪ್ರವೇಶಕ್ಕಾಗಿ 25 ಫಲಾನುಭವಿಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ತರುವಾಯ, ವಸತಿ ನಿಲಯವನ್ನು ಪ್ರಾರಂಭಿಸುವ ಕಾರ್ಯಸಾಧ್ಯತೆಯನ್ನು ಖಚಿತಪಡಿಸಿಕೊಳ್ಳಲು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಯಚೂರು ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ, ರಾಯಚೂರು ಅವರು ಮೂಲಸೌಕರ್ಯಗಳ ಜಂಟಿ ಪರಿಶೀಲನೆಯನ್ನು (ನವೆಂಬರ್ 2013) ನಡೆಸಿದರು ಮತ್ತು ವರದಿಯನ್ನು ಸಲ್ಲಿಸಿದರು. ವಸತಿ ನಿಲಯವನ್ನು ಪ್ರಾರಂಭಿಸಲು ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿಯವರು (ಜುಲೈ 2017 ಮತ್ತು ಫೆಬ್ರವರಿ 2020) ಇಲಾಖೆಯ ಅನುಮೋದನೆಯನ್ನು ಕೋರಿದ್ದರೂ, ಇಲಾಖೆಯು ಯಾವುದೇ ಕ್ರಮವನ್ನು ತೆಗೆದುಕೊಂಡಿರಲಿಲ್ಲ (ಡಿಸೆಂಬರ್ 2021).

ದಕ್ಷಿಣ ಕನ್ನಡ, ಕೊಡಗು ಮತ್ತು ಉಡುಪಿ ಜಿಲ್ಲೆಗಳಿಗೆ ಮಂಜೂರಾಗಿದ್ದ ವಸತಿನಿಲಯಗಳನ್ನು ಬೆಂಗಳೂರು ನಗರ ಜಿಲ್ಲೆಗೆ ವರ್ಗಾಯಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಫೆಬ್ರವರಿ 2022).

[10] ಚಿಕ್ಕಮಗಳೂರು–ನಿವಾಸಿಗಳ ಕಡಿಮೆ ಸಂಖ್ಯೆಯಿಂದ ಮತ್ತು ರಾಮನಗರ–ಕಂಡಿಕೆ 2.1.5.1.5ರಲ್ಲಿ ಚರ್ಚಿಸಿರುವಂತೆ ಬೇರೆ ಕಾರಣಗಳಿಂದಾಗಿ.

### 2.1.5.1.1 ಸೂಕ್ತವಾದ ಪ್ರವೇಶವಿಲ್ಲದ ಹಾಸ್ಟೆಲ್‌ಗಳು

ಅಡೆತಡೆ-ಮುಕ್ತ ಪ್ರವೇಶ ಸೌಲಭ್ಯದ ಪರಿಸರವು ಸಮುದಾಯ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ವಿಕಲಚೇತನರ ಭಾಗವಹಿಸುವ ಹಕ್ಕನ್ನು ಪೂರೈಸುವ ಮೊದಲ ಹೆಜ್ಜೆಯಾಗಿದೆ ಹಾಗೂ 1995 ಮತ್ತು 2016ರ ವಿಕಲಚೇತನರ ಕಾಯಿದೆಗಳ ಅಧಿಸೂಚನೆಯೊಂದಿಗೆ ಭಾರತದಲ್ಲಿ ಅದನ್ನು ವಿಕಲಚೇತನರ ಹಕ್ಕು ಎಂದು ಗುರುತಿಸಲಾಗಿದೆ. ಈ ವಸತಿನಿಲಯಗಳಲ್ಲಿ ಅಡೆತಡೆ ಮುಕ್ತ ಪರಿಸರ (ಇಳಿಜಾರುಗಳು, ರೇಲಿಂಗ್‌ಗಳು), ವಿಶೇಷವಾಗಿ ವಿನ್ಯಾಸಗೊಳಿಸಿದ ಶೌಚಾಲಯಗಳು ಮುಂತಾದ ಕನಿಷ್ಠ ಮೂಲಸೌಕರ್ಯಗಳ ಲಭ್ಯತೆಯನ್ನು ರಾಜ್ಯ ಸರ್ಕಾರವು ನಿಗದಿಪಡಿಸಿತ್ತು (ಮಾರ್ಚ್ 2004).

ಜಂಟಿ ತಪಾಸಣೆಗಾಗಿ ಆಯ್ಕೆಮಾಡಿದ 12 ವಸತಿನಿಲಯಗಳಲ್ಲಿ ಒಂದು ವಸತಿನಿಲಯವು 2019-20ರಿಂದ ಕಾರ್ಯ ನಿರ್ವಹಿಸುತ್ತಿರಲಿಲ್ಲ (ಕಂಡಿಕೆ 2.1.5.1.5 ರಲ್ಲಿ ಚರ್ಚಿಸಲಾಗಿದೆ). 11 ವಸತಿನಿಲಯಗಳಲ್ಲಿ 10 ಖಾಸಗಿ ಏಜೆನ್ಸಿಗಳ ಒಡೆತನದಲ್ಲಿದ್ದರೆ ಒಂದನ್ನು ಸರ್ಕಾರ ನಿರ್ವಹಿಸುತ್ತಿತ್ತು.

ಸರಕಾರಿ ವಸತಿನಿಲಯ ಸೇರಿದಂತೆ ಪರೀಕ್ಷಾ-ತನಿಖೆ ನಡೆಸಿದ ಎಲ್ಲಾ 11 ವಸತಿನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಇವುಗಳಲ್ಲಿ ಆರು ಪ್ರತ್ಯೇಕ ವಸತಿನಿಲಯ ಘಟಕಗಳಾಗಿ ಕಾರ್ಯ ನಿರ್ವಹಿಸುತ್ತಿದ್ದು, ಐದು ವಸತಿ ಕಟ್ಟಡಗಳಲ್ಲಿದ್ದವು. ಒಂದು[11] ವಸತಿ ನಿಲಯವನ್ನು ಹೊರತುಪಡಿಸಿ ಪರೀಕ್ಷಾ-ತನಿಖೆ ನಡೆಸಿದ ವಸತಿನಿಲಯಗಳಲ್ಲಿ ಪ್ರವೇಶಕ್ಕಾಗಿ ಮೂಲಸೌಕರ್ಯವನ್ನು ಒದಗಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಂಗವಿಕಲರ ವಸತಿನಿಲಯಗಳನ್ನು ಸ್ಥಾಪಿಸಲು ಪೂರ್ವಾಪೇಕ್ಷಿತವಾಗಿದ್ದ ಇಳಿಜಾರುಗಳು, ರೇಲಿಂಗ್‌ಗಳು ಮತ್ತು ವಿಶೇಷವಾಗಿ ಅಂಗವಿಕಲ ಶೌಚಾಲಯಗಳಂತಹ ಅಂಗವಿಕಲ ಸ್ನೇಹಿ ಮೂಲಸೌಕರ್ಯಗಳನ್ನು ಒದಗಿಸಿರಲಿಲ್ಲ (ನಕ್ಷೆ-2.2). ಇದು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ನಿರ್ವಹಿಸಲ್ಪಡುವ ಹಾಸ್ಟೆಲ್ ಅನ್ನು ಒಳಗೊಂಡಿತ್ತು. ಈ 11 ವಸತಿನಿಲಯಗಳಲ್ಲಿ ಏಳು ವಸತಿನಿಲಯಗಳು ನೆಲಮಹಡಿ ಹೊರತುಪಡಿಸಿ ಬೇರೆ ಮಹಡಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಲೆಕ್ಕಪರಿಶೋಧನೆಯ ಅವಧಿಯಲ್ಲಿ ಈ 10 ಖಾಸಗಿ ವಸತಿನಿಲಯಗಳಿಗೆ ₹ 6.89 ಕೋಟಿ ಹಣ ಬಿಡುಗಡೆ ಮಾಡಲಾಗಿತ್ತು.

**ನಕ್ಷೆ-2.2: ಪರೀಕ್ಷಾ-ತನಿಖೆ ನಡೆಸಿದ ವಸತಿನಿಲಯಗಳಲ್ಲಿ ಪ್ರವೇಶ ಸೌಕರ್ಯಗಳ ಸ್ಥಿತಿ**




[11] ಸ್ಪಂದನ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಬೆಂಗಳೂರು.

ಕಾಯಿದೆಗಳ ಅನುಸಾರ ರೇಲಿಂಗ್ ಮತ್ತು ಅಂಗವಿಕಲ ಸ್ನೇಹಿ ಶೌಚಾಲಯಗಳಂತಹ ತಡೆರಹಿತ ವಾತಾವರಣವನ್ನು ಒದಗಿಸಲು ಕ್ರಮವನ್ನು ಪ್ರಾರಂಭಿಸಲಾಗುವುದು ಮತ್ತು ಅಂತಹ ವಸತಿನಿಲಯಗಳನ್ನು ನಿರ್ವಹಿಸುವ ಸರ್ಕಾರೇತರ ಸಂಸ್ಥೆಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗುವುದು ಎಂದು ಸರ್ಕಾರ್ವು ತಿಳಿಸಿತು (ಫೆಬ್ರವರಿ 2022).

### *2.1.5.1.2* ಮೂಲಸೌಕರ್ಯಗಳ ಲಭ್ಯತೆ

ಸುಲಭ ಪ್ರವೇಶದ ಅಗತ್ಯತೆಗಳ ಹೊರತಾಗಿ, ಒಂದು ಗ್ರಂಥಾಲಯ (ಬ್ರೈಲ್ ಮತ್ತು ಶ್ರವಣ ದೋಷವುಳ್ಳವರಿಗೆ), ಒಂದು ಚಿಕಿತ್ಸಾ ಕೊಠಡಿ, ಲಾಕರ್‌ಗಳು, ಭೇಟಿ ನೀಡುವ ವೈದ್ಯರ ಸೌಲಭ್ಯ, ವಾಷಿಂಗ್ ಮೆಷಿನ್ ಇತ್ಯಾದಿಗಳು ಲಭ್ಯವಿರಬೇಕಾದ ಇತರ ಮೂಲಸೌಕರ್ಯಗಳಲ್ಲಿ ಸೇರಿದ್ದವು.

ಪರೀಕ್ಷಾ–ತನಿಖೆ ನಡೆಸಲಾದ 11 ವಸತಿನಿಲಯಗಳಲ್ಲಿ ಲಭ್ಯವಿರುವ ಸೌಲಭ್ಯಗಳ ಸ್ಥಿತಿಯನ್ನು **ನಕ್ಷೆ–2.3**ರಲ್ಲಿ ತೋರಿಸಲಾಗಿದೆ.

**ನಕ್ಷೆ–2.3: ಪರೀಕ್ಷಾ–ತನಿಖೆ ನಡೆಸಲಾದ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳಲ್ಲಿ ಲಭ್ಯವಿರುವ ಸೌಲಭ್ಯಗಳ ಲಭ್ಯತೆಯ ಸ್ಥಿತಿ**




ಆಧಾರ: ಜಂಟಿ ತಪಾಸಣೆಯ ಫಲಿತಾಂಶ

ಹೆಚ್ಚಿನ ವಸತಿನಿಲಯಗಳು ತಮ್ಮ ನಿವಾಸಿಗಳಿಗೆ ನಿಗದಿತ ಸೌಲಭ್ಯಗಳನ್ನು ಒದಗಿಸಿರುವುದನ್ನು ಮೇಲಿನ ನಕ್ಷೆಯಿಂದ ಗಮನಿಸಬಹುದು. ಆದಾಗ್ಯೂ, ಐದು ವಸತಿನಿಲಯಗಳು ವಾಷಿಂಗ್ ಮೆಷಿನ್‌ಗಳನ್ನು ಹೊಂದಿರಲಿಲ್ಲ, ಏಳರಲ್ಲಿ ಶ್ರವಣದೋಷವುಳ್ಳವರಿಗೆ ಮತ್ತು ದೃಷ್ಟಿಹೀನರಿಗೆ ಪ್ರತ್ಯೇಕ ಗ್ರಂಥಾಲಯಗಳು ಇರಲಿಲ್ಲ. ಇದಲ್ಲದೆ, ನಾಲ್ಕು ವಸತಿನಿಲಯಗಳಲ್ಲಿ ಸಂದರ್ಶಕ ವೈದ್ಯರ ಸೌಲಭ್ಯವಿಲ್ಲ. ಹೀಗೆ, ಈ ವಸತಿನಿಲಯಗಳ ನಿವಾಸಿಗಳು ಅಗತ್ಯ ಸೌಲಭ್ಯಗಳಿಂದ ವಂಚಿತರಾಗಿದ್ದರು.

ಯಾವುದೇ ಅನಾನುಕೂಲತೆಗಳು ಇಲ್ಲದಿರುವ ಹಾಗೆ ಮತ್ತು ಎಲ್ಲಾ ಸೌಲಭ್ಯಗಳನ್ನು ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ವಸತಿನಿಲಯಗಳನ್ನು ನಡೆಸುತ್ತಿರುವ ಎಲ್ಲಾ ಸರ್ಕಾರೇತರ ಸಂಸ್ಥೆಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಫೆಬ್ರವರಿ 2022).

#### *2.1.5.1.3 ಹಾಸಿಗೆಗಳ ಲಭ್ಯತೆ ಮತ್ತು ಪ್ರವೇಶ ಸಾಧ್ಯತೆ*

ವಿಕಲಚೇತನ ವ್ಯಕ್ತಿಗಳು, ಅದರಲ್ಲೂ ವಿಶೇಷವಾಗಿ ದೈಹಿಕ ವಿಕಲಚೇತನರು ಮತ್ತು ದೃಷ್ಟಿಹೀನರಿಗೆ, ಅವರುಗಳು ಸುಲಭವಾಗಿ ತಲುಪಬಹುದಾದ ಒಂಟಿ ಮಂಚಗಳು ಹಾಗೂ ವಿಶಾಲವಾದ ಕೊಠಡಿಗಳಂತಹ ಮೂಲಸೌಕರ್ಯಗಳ ಅಗತ್ಯವಿರುತ್ತದೆ. ಪರೀಕ್ಷಾ–ತನಿಖೆ ನಡೆಸಿದ ವಸತಿನಿಲಯಗಳ ನಿವಾಸಿಗಳಲ್ಲಿ ಮುಖ್ಯವಾಗಿ ದೈಹಿಕವಾಗಿ ವಿಕಲಚೇತನರು (ಶೇಕಡಾ 57), ದೃಷ್ಟಿಹೀನರು (ಶೇಕಡಾ 25), ಶ್ರವಣದೋಷವುಳ್ಳವರು (ಶೇಕಡಾ 16) ಮತ್ತು ಇತರ ವಿಕಲಚೇತನರು (ಶೇಕಡಾ 2) ಇದ್ದರು. ರಾಜ್ಯ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಪ್ರತಿ ಕೈದಿಗಳಿಗೆ ಸರಾಸರಿ 100 ಚದರ ಅಡಿ ಜಾಗವನ್ನು ಒದಗಿಸಬೇಕು. ಪರೀಕ್ಷಾ–ತನಿಖೆ ನಡೆಸಿದ 11 ವಸತಿನಿಲಯಗಳಲ್ಲಿ ಮೂರು ವಸತಿನಿಲಯಗಳು[12] ಪ್ರತಿ ಕೈದಿಗಳಿಗೆ ನಿರ್ದಿಷ್ಟ ಸರಾಸರಿ ಸ್ಥಳವನ್ನು ಒದಗಿಸಿರಲಿಲ್ಲ ಮತ್ತು ಎರಡು[13] ವಸತಿನಿಲಯಗಳು ಪ್ರತಿ ಕೈದಿಗಳಿಗೆ ಪ್ರತ್ಯೇಕ ಹಾಸಿಗೆಯನ್ನು ಒದಗಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. **ಕೋಷ್ಟಕ–2.6ರಲ್ಲಿ** ತೋರಿಸಿರುವಂತೆ, ಐದು ವಸತಿನಿಲಯಗಳಲ್ಲಿ ಅಂಗವಿಕಲ ಕೈದಿಗಳಿಗೆ ಒಟ್ಟು 118 ಬಂಕ್ ಬೆಡ್‌ಗಳನ್ನು (ಒಂದರ ಮೇಲೊಂದು ಎರಡು ಹಾಸಿಗೆಗಳು) ಒದಗಿಸಲಾಗಿತ್ತು (ಇವುಗಳಲ್ಲಿ ನಾಲ್ಕು ವಸತಿನಿಲಯಗಳು ಕೇವಲ ಬಂಕ್ ಬೆಡ್‌ಗಳನ್ನು ಹೊಂದಿದ್ದವು ಮತ್ತು ಒಂದು ವಸತಿನಿಲಯ ಭಾಗಶಃ ಪ್ರತ್ಯೇಕ ಹಾಸಿಗೆ ಮತ್ತು ಭಾಗಶಃ ಬಂಕ್ ಬೆಡ್‌ಗಳನ್ನು ಹೊಂದಿತ್ತು).

**ಕೋಷ್ಟಕ–2.6: ವಿಕಲಚೇತನರ ವಿಧ ಮತ್ತು ಒದಗಿಸಲಾದ ಮಂಚಗಳ ವಿಧದ ವಿವರಗಳು**

| ಕ್ರಮ ಸಂಖ್ಯೆ | ವಸತಿನಿಲಯ | ನಿವಾಸಿಗಳ ಸಂಖ್ಯೆ – ವಿಕಲಚೇತನದ ವಿಧ | | | | | ಮಂಚದ ವಿಧ | | |
|---|---|---|---|---|---|---|---|---|---|
| | | ಕುರುಡರು | ಕಿವುಡರು | ದೈಹಿಕ ಅಂಗವಿಕಲರು | ಇತರೆ | ಒಟ್ಟು | ಒಂಟಿ | ಜೋಡಿ | ಒಟ್ಟು |
| 1 | ಸಜೀವಿ ವಿಕಲಚೇತನರ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಬಾಗಲಕೋಟೆ | 04 | 03 | 31 | 00 | 38 | 48 | 00 | 48 |
| 2 | ಸಾಕಮ್ಮ ಸಮರ್ಥಾನಮ್ ಟ್ರಸ್ಟ್ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಬೆಂಗಳೂರು | 29 | 00 | 24 | 01 | 54 | 00 | 27 | 54 |
| 3 | ಸ್ಪಂದನ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಬೆಂಗಳೂರು | 05 | 14 | 31 | 00 | 50 | 00 | 25 | 50 |
| 4 | ಶ್ರೀ ಸಾಯಿ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಬೆಂಗಳೂರು | 10 | 14 | 25 | 00 | 49 | 00 | 25 | 50 |
| 5 | ವಿನಾಯಕ ಟ್ರಸ್ಟ್ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಬೆಂಗಳೂರು | 02 | 23 | 25 | 00 | 50 | 00 | 25 | 50 |
| 6 | ಸರ್ಕಾರಿ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಕೆಂಗೇರಿ, ಬೆಂಗಳೂರು | 10 | 00 | 02 | 00 | 12 | 28 | 00 | 28 |
| 7 | ಆಸ್ತಾ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಬೀದರ್ | 01 | 01 | 45 | 00 | 47 | 12 | 16 | 44 |
| 8 | ಹೇಮಾವತಿ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ಮತ್ತು ವಿದ್ಯಾರ್ಥಿಗಳ ವಸತಿನಿಲಯ, ಚಿತ್ರದುರ್ಗ | 00 | 00 | 35 | 00 | 35 | 35 | 00 | 35 |
| 9 | ಶೇತಾ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಹಾಸನ | 14 | 12 | 21 | 00 | 47 | 47 | 00 | 47 |
| 10 | ಕಮಲೇಶ್ವರ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಹಾವೇರಿ | 00 | 09 | 33 | 08 | 50 | 47 | 00 | 47 |
| 11 | ಜೆಎಸ್ಎಸ್ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಮೈಸೂರು | 44 | 01 | 02 | 00 | 47 | 47 | 00 | 47 |

[12] ಆಸ್ತಾ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ–ಬೀದರ್, ಶ್ರೀ ಸಾಯಿ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ–ಬೆಂಗಳೂರು ಮತ್ತು ಜೆಎಸ್ಎಸ್ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ–ಮೈಸೂರು.

[13] ಆಸ್ತಾ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ–ಬೀದರ್; ಮತ್ತು ಕಮಲೇಶ್ವರ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ, ಹಾವೇರಿ.

ಸಾಮಾನ್ಯವಾಗಿ, ಬಂಕ್ ಬೆಡ್‌ಗಳನ್ನು ಹತ್ತುವಾಗ ಅಥವಾ ಮಲಗುವಾಗ ಆಗುವ ಅಪಘಾತಗಳಿಂದ ಉಂಟಾಗುವ ಗಾಯಗಳು ಸಾಮಾನ್ಯ ಮಂಚಗಳಿಗಳಿಂದಾಗುವ ಅಫಘಾತಗಳಿಗಿಂತ ಹೆಚ್ಚು ಗಂಭೀರವಾಗಿರುತ್ತದೆ. ಹೀಗೆ, ಬಂಕ್ ಬೆಡ್‌ಗಳನ್ನು ಬಳಸುವುದು ಸೂಕ್ತವಲ್ಲ ಮತ್ತು ದೈಹಿಕವಾಗಿ ವಿಕಲಾಂಗ ಮತ್ತು ದೃಷ್ಟಿಹೀನ ವ್ಯಕ್ತಿಗಳಿಗೆ ಏಣಿಯ ಮೂಲಕ ಮೇಲಿನ ಹಾಸಿಗೆಯನ್ನು ಪ್ರವೇಶಿಸುವಾಗ ಸುರಕ್ಷತೆಯ ಅಪಾಯವನ್ನು ಒಳಗೊಂಡಿರುತ್ತದೆ.

ಪ್ರವೇಶದ ಸಮಸ್ಯೆಗಳು ಮತ್ತು ಮೂಲಸೌಕರ್ಯಗಳ ಅನುಪಸ್ಥಿತಿಯ ಹೊರತಾಗಿಯೂ ಇಲಾಖೆಯು ಈ ವಸತಿನಿಲಯಗಳಿಗೆ ಕಾರ್ಯನಿರ್ವಹಿಸಲು ಅನುಮತಿ ನೀಡಿತ್ತು ಎಂಬುದು ಮೇಲಿನಿಂದ ಸ್ಪಷ್ಟವಾಗುತ್ತದೆ. ಇದು ಇಲಾಖೆಯಿಂದ ನಿಯಮಿತ ತಪಾಸಣೆಯ ಕೊರತೆಯನ್ನು ಸೂಚಿಸುತ್ತದೆ.

ಅಸ್ತಿತ್ವದಲ್ಲಿದ್ದ ಒಂದೇ ಸರ್ಕಾರಿ ವಸತಿ ನಿಲಯವು ಬಡಾವಣೆಯ ಒಳಭಾಗದಲ್ಲಿತ್ತು ಮತ್ತು ನಿವಾಸಿಗಳು ಪ್ರಯಾಣಕ್ಕಾಗಿ ಆಟೋಗಳನ್ನು ಬಳಸುತ್ತಿದ್ದರು ಈ ಅನಾನುಕೂಲತೆಯಿಂದಾಗಿ 2012-13ರಲ್ಲಿ 30 ಇದ್ದ ನಿವಾಸಿಗಳ ಸಂಖ್ಯೆ 2019-20ರಲ್ಲಿ 11ಕ್ಕೆ ತೀವ್ರವಾಗಿ ಕಡಿಮೆಯಾಯಿತು.

ಈ ಸಮಸ್ಯೆಯನ್ನು ಪರಿಹರಿಸಲು ತಕ್ಷಣದ ಕ್ರಮವನ್ನು ತೆಗೆದುಕೊಳ್ಳಲಾಗುವುದು, ಕಾಲಕಾಲಕ್ಕೆ ಈ ವಸತಿನಿಲಯಗಳ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ಫಲಾನುಭವಿಗಳಿಗೆ ಎಲ್ಲಾ ಮೂಲಸೌಕರ್ಯಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾ ವಿಕಲಚೇತನ ಕಲ್ಯಾಣ ಅಧಿಕಾರಿಗಳಿಗೆ ಸೂಕ್ತವಾಗಿ ಸೂಚನೆ ನೀಡಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022).

### *2.1.5.1.4 ನಿವಾಸಿಗಳಿಂದ ಶುಲ್ಕಗಳನ್ನು ವಸೂಲು ಮಾಡದಿರುವುದು*

ವಸತಿನಿಲಯಗಳಲ್ಲಿ ಉಳಿದುಕೊಂಡಿರುವ ಪ್ರತಿ ಉದ್ಯೋಗಸ್ಥ ಮಹಿಳೆಯಿಂದ ₹ 800 ಸಂಗ್ರಹಿಸಬೇಕು ಮತ್ತು ರಾಜ್ಯ ಸರ್ಕಾರದಿಂದ ಪಡೆದ ಅನುದಾನದ ಬಗ್ಗೆ ಲೆಕ್ಕಪತ್ರಗಳನ್ನು ನಿರ್ವಹಿಸಬೇಕು ಎಂದು ರಾಜ್ಯ ಸರ್ಕಾರ ಷರತ್ತು ವಿಧಿಸಿದೆ. ಪರೀಕ್ಷಾ-ತನಿಖೆ ನಡೆಸಿದ 11 ವಸತಿನಿಲಯಗಳ ಪೈಕಿ ಕೇವಲ ಮೂರು[14] ವಸತಿ ನಿಲಯಗಳಲ್ಲಿ ನಿವಾಸಿಗಳಿಂದ ಶುಲ್ಕ ವಸೂಲಿ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಈ ವಸತಿನಿಲಯಗಳ ರಶೀದಿ ಮತ್ತು ಪಾವತಿ ಖಾತೆಗಳಲ್ಲಿ ಸಂಗ್ರಹಿಸಲಾದ ಅಂತಹ ಶುಲ್ಕದ ಬಗ್ಗೆ ಯಾವುದೇ ಉಲ್ಲೇಖವಿರಲಿಲ್ಲ. ಇತರೆ ಎಂಟು ವಸತಿ ನಿಲಯಗಳಲ್ಲಿ ರಸೀದಿ ಪುಸ್ತಕಗಳನ್ನು ನಿರ್ವಹಣೆ ಮಾಡದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಶುಲ್ಕವನ್ನು ವಸೂಲಿ ಮಾಡದಿರುವುದಕ್ಕೆ ಕಾರಣಗಳನ್ನು ಒದಗಿಸಲಿಲ್ಲ.

ಸಂಬಂಧಪಟ್ಟ ಸರ್ಕಾರೇತರ ಸಂಸ್ಥೆಗಳಿಂದ ವರದಿಯನ್ನು ಪಡೆಯಲಾಗುವುದು ಮತ್ತು ಜಿಲ್ಲಾ ವಿಕಲಚೇತನ ಕಲ್ಯಾಣ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಸರ್ಕಾರೇತರ ಸಂಸ್ಥೆಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಫೆಬ್ರವರಿ 2022). ಆದಾಗ್ಯೂ, ಈ ವಸತಿನಿಲಯಗಳಲ್ಲಿ ವಿದ್ಯಾರ್ಥಿನಿಯರು ಮತ್ತು ಪ್ರಶಿಕ್ಷಣಾರ್ಥಿಗಳಿಗೆ ಉಚಿತ ವಸತಿ ಸೌಲಭ್ಯವನ್ನು ಒದಗಿಸಲಾಗಿತ್ತು.

### *2.1.5.1.5 ಕಾರ್ಯ ನಿರ್ವಹಿಸದ ವಸತಿನಿಲಯ*

ರಾಜ್ಯ ಸರ್ಕಾರವು (ಜೂನ್ 2012) ವಿಕಲಚೇತನ ಉದ್ಯೋಗಸ್ಥ ಮಹಿಳೆಯರು ಮತ್ತು ವಿದ್ಯಾರ್ಥಿಗಳಿಗಾಗಿ ವಸತಿನಿಲಯವೊಂದನ್ನು ನಿರ್ವಹಿಸಲು ಮೆ.ವಿನಾಯಕ ಶಿಕ್ಷಣ ಸಂಸ್ಥೆಗೆ ಅನುಮೋದನೆ ನೀಡಿತು. ವಸತಿನಿಲಯವು 2012-13ರಿಂದ ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಇಲಾಖೆಯು 2012-13 ರಿಂದ 2019-20ರ ಅವಧಿಯಲ್ಲಿ ಒಟ್ಟು ₹ 82.99 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿತು. ಲೆಕ್ಕಪರಿಶೋಧನೆಗೆ ಒದಗಿಸಿದ ದಾಖಲೆಗಳ ಪ್ರಕಾರ, ವಸತಿನಿಲಯದ ಅಧಿಕಾರಿಗಳು 2012-13ರಲ್ಲಿ 32

[14] ಆಸ್ತಾ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ-ಬೀದರ್, ಸರ್ಕಾರೀ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ-ಕೆಂಗೇರಿ, ಬೆಂಗಳೂರು ಮತ್ತು ಜೆಎಸ್‌ಎಸ್ ವಿಕಲಚೇತನ ಉದ್ಯೋಗಸ್ಥ ಮಹಿಳೆಯರ ವಸತಿನಿಲಯ-ಮೈಸೂರು.

ನಿವಾಸಿಗಳಿಗೆ ವಸತಿ ಕಲ್ಪಿಸಿರುವುದಾಗಿ ಹೇಳಿಕೊಂಡಿದ್ದರು, 2014-15ರಲ್ಲಿ ನಿವಾಸಿಗಳ ಸಂಖ್ಯೆಯು 43ಕ್ಕೆ ಏರಿತ್ತು ಮತ್ತು 2018-19ರಲ್ಲಿ 27ಕ್ಕೆ ಇಳಿದಿತ್ತು.

ಡಿಸೆಂಬರ್ 2019ರಿಂದ ವಸತಿನಿಲಯವು ಕಾರ್ಯ ನಿರ್ವಹಿಸುತ್ತಿರಲಿಲ್ಲ ಎಂಬುದು ದಾಖಲೆಗಳ ಪರಿಶೀಲನೆಯಿಂದ (ನವೆಂಬರ್ 2020) ತಿಳಿದುಬಂದಿತು. ಗುಣಮಟ್ಟದ ಆಹಾರ ಪೂರೈಕೆ ಮಾಡದಿರುವುದು, ಮೂಲಸೌಕರ್ಯಗಳ ಕೊರತೆ, ಭದ್ರತಾ ಸಿಬ್ಬಂದಿಯನ್ನು ನೇಮಿಸದಿರುವುದು ಮುಂತಾದವುಗಳು ಸೇರಿದಂತೆ ವಸತಿನಿಲಯದ ಅಧಿಕಾರಿಗಳಿಂದ ಹೊರಹಾಕುವ ಬೆದರಿಕೆಯನ್ನು ಎದುರಿಸಿರುವುದರ ಬಗ್ಗೆ ಕೈದಿಗಳು ದೂರು ನೀಡಿರುವುದು ಕಂಡುಬಂದಿತು. ಸಿಬ್ಬಂದಿಯೊಂದಿಗೆ ನಿವಾಸಿಗಳು ಸಹಕರಿಸದ ಕಾರಣ ವಸತಿನಿಲಯದ ಅಧಿಕಾರಿಗಳು ವಸತಿನಿಲಯವನ್ನು ಮುಚ್ಚಲು ಇಲಾಖೆಗೆ ಪ್ರಸ್ತಾವಿಸಿದರು (ನವೆಂಬರ್ 2019). ಆರಂಭದಲ್ಲಿ ನಿವಾಸಿಗಳನ್ನು ಬೇರೆ ವಸತಿನಿಲಯಗಳಿಗೆ ಸ್ಥಳಾಂತರಿಸಲು ಇಲಾಖೆ ಮುಂದಾಗಿದ್ದು ಆದರೆ ಅದು ಕಾರ್ಯರೂಪಕ್ಕೆ ಬರಲಿಲ್ಲ.

ವಸತಿನಿಲಯವಿದ್ದ ಮೂರು ಅಂತಸ್ತಿನ ಕಟ್ಟಡದ ಜಂಟಿ ಪರಿಶೀಲನೆಯನ್ನು 25 ನವೆಂಬರ್ 2020ರಂದು ನಡೆಸಲಾಯಿತು. ಜಂಟಿ ಪರಿಶೀಲನೆಯ ಸಮಯದಲ್ಲಿ ಗಮನಿಸಿದಂತೆ ವಸತಿನಿಲಯವು ಮೂರು ಕೊಠಡಿಗಳು, ಎರಡು ಸ್ನಾನಗೃಹಗಳು ಮತ್ತು ಮೂರು ಶೌಚಾಲಯಗಳನ್ನು ಒಳಗೊಂಡಿರುವ ನೆಲ ಮಹಡಿಯಲ್ಲಿತ್ತು. ಮೊದಲ ಮತ್ತು ಎರಡನೇ ಮಹಡಿಯನ್ನು ಖಾಸಗಿ ವಸತಿ ಸೌಕರ್ಯಗಳಿಗೆ ಬಳಸಲಾಗುತ್ತಿತ್ತು. ಪ್ರತಿ ಕೊಠಡಿಗೆ[15] ನಾಲ್ಕು ವ್ಯಕ್ತಿಗಳ ಮಾನದಂಡವನ್ನು ಪರಿಗಣಿಸಿ, ವಸತಿನಿಲಯದಲ್ಲಿ ಗರಿಷ್ಠ 12 ಕೈದಿಗಳಿಗೆ ಮಾತ್ರ ಅವಕಾಶ ಕಲ್ಪಿಸಬಹುದು. ತಮ್ಮ ಹಲವಾರು ಭೇಟಿಗಳ ಸಂದರ್ಭದಲ್ಲಿ ಗಮನಿಸಿದಂತೆ ಆರರಿಂದ ಏಳು ಕೈದಿಗಳು ಮಾತ್ರ ಇದ್ದರು ಎಂದು ಜಿಲ್ಲಾ ವಿಕಲಚೇತನ ಕಲ್ಯಾಣ ಅಧಿಕಾರಿಯವರು ನಿರ್ದೇಶಕರಿಗೆ ಬರೆದ ಪತ್ರದಲ್ಲಿ (ಜನವರಿ 2019) ತಿಳಿಸಿದ್ದರು. ವಸತಿನಿಲಯವು ಕಾರ್ಯ ನಿರ್ವಹಿಸುತ್ತಿದ್ದ ಯಾವುದೇ ಸಮಯದಲ್ಲಿ ಸುಮಾರು 10-12 ನಿವಾಸಿಗಳು ಉಳಿದುಕೊಂಡಿದ್ದರು ಎಂದು ನೆರೆಹೊರೆಯವರೊಂದಿಗೆ ನಡೆಸಿದ ಸಂವಾದದಿಂದ ತಿಳಿದುಬಂದಿತು. ವಸತಿನಿಲಯದ ಅಧಿಕಾರಿಗಳು ನಿಜವಾದ ಅರ್ಹತೆಗಿಂತ ಹೆಚ್ಚಿನ ಅನುದಾನವನ್ನು ಕ್ಲೈಮ್ ಮಾಡಿರುವುದನ್ನು ಹಾಗೂ ಇಲಾಖೆಯು 2012-2020ರ ಅವಧಿಯಲ್ಲಿ ₹ 82.99 ಲಕ್ಷವನ್ನು ಅಕ್ರಮವಾಗಿ ಮರುಪಾವತಿಸಿತ್ತು ಎಂಬುದನ್ನು ಇದು ಸೂಚಿಸುತ್ತದೆ. ಜಿಲ್ಲಾ ವಿಕಲಚೇತನ ಕಲ್ಯಾಣ ಅಧಿಕಾರಿಯವರು ತಮ್ಮ ಸ್ವಂತ ತಪಾಸಣೆ ಮತ್ತು ವಸತಿನಿಲಯದಲ್ಲಿ ಕೇವಲ ಆರರಿಂದ ಏಳು ನಿವಾಸಿಗಳು ಮಾತ್ರ ಇದ್ದರು ಎಂಬ ಹೇಳಿಕೆಯ ಹೊರತಾಗಿಯೂ ನಿವಾಸಿಗಳ ನೈಜವಾದ ಸಂಖ್ಯೆಯ ಪ್ರಕಾರ ಕ್ಲೈಮ್‌ಅನ್ನು ನಿರ್ಬಂಧಿಸಲು ವಿಫಲರಾಗಿದ್ದರು.

ಸರ್ಕಾರವು ವಸತಿನಿಲಯಕ್ಕೆ ಅನುಮೋದನೆಯನ್ನು ರದ್ದುಗೊಳಿಸಿತು (ಜನವರಿ 2021) ಮತ್ತು ರಾಮನಗರದ ಜಿಲ್ಲಾಧಿಕಾರಿಗಳ ಆದೇಶದಂತೆ, ರಾಮನಗರದಲ್ಲಿ ವಸತಿನಿಲಯವನ್ನು ನಿರ್ವಹಿಸಲು ಆಸಕ್ತಿ ಹೊಂದಿರುವ ಸರ್ಕಾರೇತರ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಿ ಹೊಸ ಅಧಿಸೂಚನೆಯನ್ನು ಹೊರಡಿಸಲಾಯಿತು (ಮಾರ್ಚ್ 2021) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಸೆಪ್ಟೆಂಬರ್ 2021). ವಸತಿ ನಿಲಯವನ್ನು ನಡೆಸಲು ಆಸಕ್ತಿ ಹೊಂದಿರುವ ಸರ್ಕಾರೇತರ ಸಂಸ್ಥೆಗಳಿಂದ ಏಳು ಬಿಡ್‌ಗಳನ್ನು ಸ್ವೀಕರಿಸಲಾಯಿತು ಮತ್ತು ಯಶಸ್ವಿ ಬಿಡ್‌ದಾರರನ್ನು ಫೆಬ್ರವರಿ 2022ರಲ್ಲಿ ಮಾತ್ರ ಜಿಲ್ಲಾಧಿಕಾರಿಗಳು ಅಂತಿಮಗೊಳಿಸಿದ್ದರು ಹಾಗೂ ಅದಕ್ಕೆ ರಾಜ್ಯ ಸರ್ಕಾರದಿಂದ ಇನ್ನೂ ಅನುಮೋದನೆ ದೊರೆಯಬೇಕಿದೆ (ಮಾರ್ಚ್ 2022).

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಮತ್ತು ಜಿಲ್ಲಾ ವಿಕಲಚೇತನ ಕಲ್ಯಾಣ ಅಧಿಕಾರಿಗಳ ವರದಿಯನ್ನು ಆಧರಿಸಿ ವಸತಿನಿಲಯಕ್ಕೆ ಅನುದಾನವನ್ನು ಒದಗಿಸಲಾಗಿತ್ತು ಎಂದು

[15] ಮಾರ್ಚ್ 2004ರಲ್ಲಿ ರಾಜ್ಯ ಸರ್ಕಾರವು ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ ಒಂದು ಕೋಣೆಯಲ್ಲಿ ಗರಿಷ್ಠ ನಾಲ್ಕು ವ್ಯಕ್ತಿಗಳಿಗೆ ಮಾತ್ರ ಅವಕಾಶವಿರುತ್ತದೆ.

ಸರ್ಕಾರವು ತಿಳಿಸಿತು (ಫೆಬ್ರವರಿ 2022). ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿದ್ದರೆ, ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದೂ ಸಹ ಸರ್ಕಾರವು ತಿಳಿಸಿತು.

ವಸತಿನಿಲಯಗಳ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಹಣವನ್ನು ಬಿಡುಗಡೆ ಮಾಡಲು ಇಲಾಖೆಯಲ್ಲಿನ ಆಂತರಿಕ ನಿಯಂತ್ರಣ ಕಾರ್ಯವಿಧಾನದಲ್ಲಿನ ಗಂಭೀರ ಲೋಪವನ್ನು ಈ ಉತ್ತರವು ಸೂಚಿಸುತ್ತದೆ ಮತ್ತು ಇದು ಸರ್ಕಾರದ ಹಣದ ದುರುಪಯೋಗವನ್ನು ಸುಗಮಗೊಳಿಸಿತು. ವಸತಿನಿಲಯದಲ್ಲಿ ಕಡಿಮೆ ಸಂಖ್ಯೆಯ ನಿವಾಸಿಗಳ ಬಗ್ಗೆ ತಿಳಿದಿದ್ದರೂ, ವಸತಿನಿಲಯದಿಂದ ಕ್ಲೈಮ್ ಮಾಡಲಾದ ಅನುದಾನವನ್ನು ಬಿಡುಗಡೆ ಮಾಡಲು ಶಿಫಾರಸು ಮಾಡಿರುವುದಕ್ಕೆ ಜಿಲ್ಲಾ ವಿಕಲಚೇತನ ಕಲ್ಯಾಣ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಬಹುದು. ಇತರ ವಸತಿನಿಲಯಗಳಿಗೆ ಸಂಬಂಧಿಸಿದಂತೆ ಇದೇ ರೀತಿಯ ನಿದರ್ಶನಗಳೇನಾದರೂ ಇದ್ದಲ್ಲಿ ಸರ್ಕಾರವು ತನಿಖೆ ನಡೆಸುವ ಅಗತ್ಯವಿದೆ.

## 2.1.6 ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

### 2.1.6.1 ರಾಜ್ಯ ಮಟ್ಟದ ಉನ್ನತಾಧಿಕಾರದ ಸಮಿತಿ

ತಮ್ಮ ರಾಜ್ಯದಲ್ಲಿ ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳ ಅಗತ್ಯತಾ ಮೌಲ್ಯಮಾಪನವನ್ನು ಕೈಗೊಳ್ಳಲು ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಥವಾ ಮಹಿಳಾ ಮತ್ತು ಮಕ್ಕಳ ಕಲ್ಯಾಣದ ವಿಷಯದೊಂದಿಗೆ ವ್ಯವಹರಿಸುವ ಇಲಾಖೆಯ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಉನ್ನತಾಧಿಕಾರ ಸಮಿತಿಯನ್ನು (ಎಸ್‌ಎಲ್‌ಇಸಿ) ರಚಿಸಬೇಕು ಎಂದು ಭಾರತ ಸರ್ಕಾರದ ಮಾರ್ಗಸೂಚಿಗಳು ನಿಗದಿಪಡಿಸಿದ್ದವು. ಸಮಿತಿಯು ತಾನೇ ಪ್ರಸ್ತಾವನೆಗಳನ್ನು ಶಿಫಾರಸು ಮಾಡಬೇಕಿತ್ತು ಮತ್ತು ಯೋಜನೆಯಡಿಯಲ್ಲಿ ವಸತಿ ನಿಲಯಗಳ ಲಭ್ಯತೆಯ ಮಾಹಿತಿಯ ಪ್ರಸರಣ ಮಾಡಬೇಕು.

ಉನ್ನತಾಧಿಕಾರ ಸಮಿತಿಯು ರಚನೆಯಾಗಿದ್ದರೂ (ಜೂನ್ 2009) ಸಹ ನಿಯಮಿತವಾಗಿ ಸಭೆಗಳನ್ನು ನಡೆಸಿರಲಿಲ್ಲ. ತತ್ಪರಿಣಾಮವಾಗಿ, ವಸತಿನಿಲಯಗಳ ಅವಶ್ಯಕತೆಗಳನ್ನು ನಿರ್ಣಯಿಸಲು ಯಾವುದೇ ಕಾರ್ಯ ಯೋಜನೆ ಇರಲಿಲ್ಲ ಮತ್ತು ಅಸ್ತಿತ್ವದಲ್ಲಿರುವ ಹಾಸ್ಟೆಲ್‌ಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಯ ಅನುಪಸ್ಥಿತಿಯಿದ್ದಿತು. ಭವಿಷ್ಯದಲ್ಲಿ ಜಿಲ್ಲಾಧಿಕಾರಿಗಳು, ನಗರಾಭಿವೃದ್ಧಿ ಮತ್ತು ಕಾರ್ಮಿಕ ಇಲಾಖೆಗಳಿಂದ ಮಾಹಿತಿಯನ್ನು ಪಡೆಯುವ ಮೂಲಕ ಅಗತ್ಯ ಮೌಲ್ಯಮಾಪನದ ಕುರಿತು ಚರ್ಚೆಗಳನ್ನು ನಡೆಸಲಾಗುವುದು ಎಂದು ಇಲಾಖೆಯು ತಿಳಿಸಿತು (ಜುಲೈ 2021).

ಕಾರ್ಮಿಕ, ಲೋಕೋಪಯೋಗಿ ಮತ್ತು ನಗರಾಭಿವೃದ್ಧಿ ಮುಂತಾದ ಇಲಾಖೆಗಳ ಮತ್ತು ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳನ್ನು ಸೇರಿಸಿ ಉನ್ನತಾಧಿಕಾ ಸಮಿತಿಯನ್ನು ಪುನರ್‌ರಚಿಸಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022).

ವಸತಿನಿಲಯಗಳ ಮೌಲ್ಯಮಾಪನ ಮತ್ತು ಲಭ್ಯವಿರುವ ಮಾಹಿತಿಯ ಪ್ರಸರಣಕ್ಕೆ ಸಂಬಂಧಿಸಿದಂತೆ ಸಮಿತಿಯು ನಿಯಮಿತವಾಗಿ ಸಭೆಗಳನ್ನು ನಡೆಸದ ಹೊರತು ಇತರ ಇಲಾಖೆಗಳ ಪ್ರತಿನಿಧಿಗಳನ್ನು ಸೇರಿಸಿ ಉನ್ನತಾಧಿಕಾರ ಸಮಿತಿಯನ್ನು ಪರಿಷ್ಕರಿಸುವುದು ಯಾವುದೇ ಫಲಿತಾಂಶವನ್ನು ನೀಡುವುದಿಲ್ಲವಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

ಇದಲ್ಲದೆ, ಉನ್ನತಾಧಿಕಾರ ಸಮಿತಿಯನ್ನು ಪರಿಷ್ಕರಿಸಲು ತೆಗೆದುಕೊಂಡ ಕ್ರಮಗಳನ್ನು ಲೆಕ್ಕಪರಿಶೋಧನೆಗೆ ತಿಳಿಸಲಾಗಿಲ್ಲ (ಏಪ್ರಿಲ್ 2022).

### 2.1.6.2 ಉದ್ಯೋಗಸ್ಥ ಮಹಿಳೆಯವ ವಸತಿನಿಲಯಗಳ ಮೌಲ್ಯಮಾಪನ

ವಸತಿನಿಲಯಗಳ ಮಂಜೂರಾತಿ ಮತ್ತು ಕಾರ್ಯನಿರ್ವಹಣೆಯ ಪ್ರಕ್ರಿಯೆ ಹಾಗೂ ಉದ್ಯೋಗಸ್ಥ ಮಹಿಳೆಯರ ಮೇಲೆ ಅವುಗಳ ಆರ್ಥಿಕ/ಸಾಮಾಜಿಕ/ಮಾನಸಿಕ ಪ್ರಭಾವವನ್ನು ಮೌಲ್ಯಮಾಪನ ಮಾಡುವ

ಉದ್ದೇಶದಿಂದ ರಾಜ್ಯದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಯಾವುದು ಉತ್ತಮವಾಗಿ ಕೆಲಸ ಮಾಡಿದೆ ಮತ್ತು ಯಾವುದು ಮಾಡಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಲು ರಾಜ್ಯ ಸರ್ಕಾರವು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮೂಲಕ ಯೋಜನೆಯ ಅನುಷ್ಠಾನವನ್ನು ಮೌಲ್ಯಮಾಪನ ಮಾಡಿಸಿತು (2015). ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳ ಹೊರತಾಗಿ ಈ ಕೆಳಗಿನವುಗಳು ಮೌಲ್ಯಮಾಪನದ ಪ್ರಮುಖ ಆವಿಷ್ಕಾರಗಳಾಗಿದ್ದವು:

- ಹೆಚ್ಚಿನ ನಿವಾಸಿಗಳು (ಶೇಕಡಾ 74) ವಸತಿನಿಲಯಗಳ ಬಗ್ಗೆ ಬಾಯಿ ಮಾತಿನ ಮೂಲಕ ಕೇಳಿದ್ದರು.
- ಯಾವುದೇ ನಿಗದಿತ ವಿಧಾನವನ್ನು ಅನುಸರಿಸದ ಕಾರಣ ದಾಖಲಾತಿ ಪ್ರಕ್ರಿಯೆಯು ವಸತಿನಿಲಯದಿಂದ ವಸತಿನಿಲಯಕ್ಕೆ ಗಮನಾರ್ಹವಾಗಿ ಬೇರೆಬೇರೆಯಾಗಿತ್ತು.
- ಶೇಕಡಾ 88ರಷ್ಟು ವಸತಿನಿಲಯಗಳಲ್ಲಿ ಕುಂದುಕೊರತೆ ಪರಿಹಾರ ಸಮಿತಿಗಳನ್ನು ರಚಿಸಿರಲಿಲ್ಲ.
- ಶೇಕಡಾ 12ರಷ್ಟು ನಿವಾಸಿಗಳು ಅಸುರಕ್ಷಿತ ಸ್ಥಳ, ಅಪಾಯಕಾರಿ ಪ್ರಯಾಣದ ಮಾರ್ಗ, ಭದ್ರತಾ ಸಿಬ್ಬಂದಿ ಇಲ್ಲದಿರುವುದು, ಕಳ್ಳತನಗಳು ಇತ್ಯಾದಿ ಸುರಕ್ಷತಾ ಸಮಸ್ಯೆಗಳನ್ನು ಎದುರಿಸುತ್ತಿರುವುದಾಗಿ ವರದಿ ಮಾಡಿದ್ದರು.
- ನಿಗದಿತ ವಿಧಾನಗಳ ಅನುಸರಣೆ ಮಾಡದ ವಸತಿನಿಲಯಗಳ ವಿರುದ್ಧ ಕ್ರಮ ಕೈಗೊಳ್ಳಲು ಇಲಾಖೆಯಲ್ಲಿ ಯಾವುದೇ ಔಪಚಾರಿಕ ಕಾರ್ಯವಿಧಾನವಿರಲಿಲ್ಲ.

ಮೇಲೆ ಕಂಡುಬಂದ ವಿಷಯಗಳು ಬಹಳ ಮಹತ್ವದ್ದಾಗಿದ್ದವು ಮತ್ತು ಈ ಸಮಸ್ಯೆಗಳನ್ನು ಪರಿಹರಿಸಲು ಇಲಾಖೆಯ ಕಡೆಯಿಂದ ತಕ್ಷಣದ ಕ್ರಮದ ಅಗತ್ಯವಿದೆ. ಲೆಕ್ಕಪರಿಶೋಧನೆಯು ಮೌಲ್ಯಮಾಪನ ವರದಿಯಲ್ಲಿ ಕಂಡುಬಂದ ಅಂಶಗಳು ಮತ್ತು ಶಿಫಾರಸುಗಳ ಮೇಲೆ ಇಲಾಖೆಯು ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಮೌಲ್ಯಮಾಪನ ವರದಿಯಲ್ಲಿ ಉಲ್ಲೇಖಿಸಲಾದ ಶಿಫಾರಸುಗಳನ್ನು ಎಲ್ಲಾ ವಸತಿನಿಲಯಗಳು ಮತ್ತು ಉಪ ನಿರ್ದೇಶಕರುಗಳಿಗೆ ತಿಳಿಸಲಾಗಿದೆ ಹಾಗೂ ಮೌಲ್ಯಮಾಪನ ವರದಿಯ ಅನ್ವಯ ಕ್ರಮ ತೆಗೆದುಕೊಳ್ಳಲು ಹಾಗೂ ಜಿಲ್ಲಾ ಮಟ್ಟದಲ್ಲಿ ಯೋಜನೆಯ ನಿಯಮಿತ ಪರಿಶೀಲನೆ ನಡೆಸಲು ಸುತ್ತೋಲೆಯನ್ನು ಹೊರಡಿಸಲಾಗಿದೆ (ಆಗಸ್ಟ್ 2017) ಎಂದು ರಾಜ್ಯ ಸರ್ಕಾರವು ತಿಳಿಸಿತು (ಜನವರಿ 2022). ಮೌಲ್ಯಮಾಪನ ವರದಿಯಲ್ಲಿ ಕಂಡುಬಂದ ಸಮಸ್ಯೆಗಳು, ಲೆಕ್ಕಪರಿಶೋಧನೆಯಿಂದ ಗಮನಿಸಲ್ಪಟ್ಟಂತೆ, ಈಗಲೂ ಅಸ್ತಿತ್ವದಲ್ಲಿವೆ ಎಂಬುದು ವಾಸ್ತವಾಂಶವಾಗಿದೆ.

## 2.1.7 ನಿರ್ಣಯ ಮತ್ತು ಶಿಫಾರಸುಗಳು

### 2.1.7.1 ನಿರ್ಣಯ

ರಾಜ್ಯ ಸರ್ಕಾರವು ಯಾವುದೇ ಅಗತ್ಯತೆ ಆಧಾರಿತ ಮೌಲ್ಯಮಾಪನ/ಸಮೀಕ್ಷೆಯನ್ನು ನಡೆಸಲಿಲ್ಲ ಅಥವಾ ರಾಜ್ಯದಲ್ಲಿ ಉದ್ಯೋಗಸ್ಥ ಮಹಿಳೆಯರಿಗಾಗಿ ಅಸ್ತಿತ್ವದಲ್ಲಿರುವ ವಸತಿನಿಲಯಗಳ ಪರ್ಯಾಪ್ತತೆ ಮತ್ತು ಸಮರ್ಪಕತೆಯನ್ನು ಮೌಲ್ಯಮಾಪನ ಮಾಡಿರಲಿಲ್ಲ. 2018-19ರಿಂದ 2020-21ರ ಅವಧಿಯಲ್ಲಿ ರಾಜ್ಯವು ಆಯವ್ಯಯ ಅವಕಾಶವನ್ನು ಒದಗಿಸಲು ವಿಫಲವಾಗಿದ್ದರಿಂದ ನಿರ್ಮಾಣ ಹಂತದಲ್ಲಿರುವ ಮೂರು ವಸತಿನಿಲಯಗಳಿಗೆ ಹಣಕಾಸಿನ ನೆರವು ನೀಡಲು ಸಾಧ್ಯವಾಗಲಿಲ್ಲ.

ಇಲಾಖೆಯು ವಿಕಲಚೇತನ ಉದ್ಯೋಗಸ್ಥ ಮಹಿಳಾ ವಸತಿನಿಲಯಗಳ ಸ್ಥಾಪನೆ ಮತ್ತು ಕಾರ್ಯನಿರ್ವಹಣೆಗೆ ಅನುಮತಿ ನೀಡಿತ್ತು ಹಾಗೂ ವಸತಿ ನಿಲಯಗಳು ಪ್ರವೇಶದ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಲು ವಿಫಲವಾಗಿದ್ದರೂ ಸಹ ಪ್ರತಿ ವರ್ಷ ಅನುದಾನವನ್ನು ಬಿಡುಗಡೆ ಮಾಡುತ್ತಿತ್ತು.

ಸಾಮಾನ್ಯ ಮತ್ತು ವಿಕಲಚೇತನರಿಗಾಗಿನ ಪರೀಕ್ಷಾ–ತನಿಖೆ ನಡೆಸಲಾದ ಎಲ್ಲಾ ವಸತಿನಿಲಯಗಳು ನಿವಾಸಿಗಳಿಗೆ ಮೂಲಸೌಕರ್ಯ ಸೌಲಭ್ಯಗಳನ್ನು ದೊಡ್ಡ ಮಟ್ಟಿಗೆ ಒದಗಿಸಿವೆ. ಆದರೆ, ಸಾಮಾನ್ಯ ಉದ್ಯೋಗಸ್ಥ ಮಹಿಳಾ ವಸತಿನಿಲಯಗಳಲ್ಲಿ ಬಯೋಮೆಟ್ರಿಕ್ ಮತ್ತು ಡೇಕೇರ್ ಕೇಂದ್ರಗಳ ಅನುಪಸ್ಥಿತಿ ಮತ್ತು ವೈದ್ಯರ ಭೇಟಿಯ ಸೌಲಭ್ಯದ ಕೊರತೆ, ದೃಷ್ಟಿ ಮತ್ತು ಶ್ರವಣದೋಷವುಳ್ಳವರಿಗೆ ಪ್ರತ್ಯೇಕ ಗ್ರಂಥಾಲಯ ಮತ್ತು ವಿಕಲಚೇತನರಿಗಾಗಿ ವಸತಿನಿಲಯಗಳಲ್ಲಿ ವಾಷಿಂಗ್ ಮೆಷಿನ್‌ಗಳ ಸೌಲಭ್ಯಗಳ ಕೊರತೆಯಿದ್ದಿತು. ಇಲಾಖೆಯಿಂದ ಸಮರ್ಪಕ ಮೇಲ್ವಿಚಾರಣೆ ಇಲ್ಲದಿರುವುದು ಇದಕ್ಕೆ ಕಾರಣವಾಗಿತ್ತು.

### 2.1.7.2 ಶಿಫಾರಸುಗಳು

*1. ಯೋಜನೆಯ ಅಗತ್ಯತೆ ಆಧಾರಿತ ಮೌಲ್ಯಮಾಪನವನ್ನು ಕೈಗೊಂಡ ನಂತರವೇ ರಾಜ್ಯ ಸರ್ಕಾರವು ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು ಮತ್ತು ಅಸ್ತಿತ್ವದಲ್ಲಿರುವ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳ ಪರ್ಯಾಪ್ತತೆಯನ್ನು ಖಚಿತಪಡಿಸಿಕೊಳ್ಳಬೇಕು.*

*2. ಉದ್ಯೋಗಸ್ಥ ಮಹಿಳಾ ವಸತಿನಿಲಯಗಳ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರವು ಸಾರ್ವಜನಿಕ ಭೂಮಿಯನ್ನು ಮೀಸಲಿಡಬೇಕು ಮತ್ತು ಸಕಾಲದಲ್ಲಿ ಪೂರ್ಣಗೊಳಿಸಲು ಮತ್ತು ವಸತಿನಿಲಯಗಳನ್ನು ಸ್ಥಾಪಿಸಲು ಸಾಕಷ್ಟು ಆಯವ್ಯಯವನ್ನು ಒದಗಿಸಬೇಕು.*

*3. ರಾಜ್ಯ ಸರ್ಕಾರವು ಕಾರ್ಯ ನಿರ್ವಹಿಸುತ್ತಿರುವ ಪ್ರತಿಯೊಂದು ವಸತಿನಿಲಯಗಳ ಮೂಲಸೌಕರ್ಯ ಅಗತ್ಯತೆಗಳನ್ನು ನಿಯತಕಾಲಿಕವಾಗಿ ನಿರ್ಣಯಿಸಬೇಕು ಮತ್ತು ಅದರ ನಿರ್ವಹಣೆಗೆ ಸಾಕಷ್ಟು ಹಣವನ್ನು ಒದಗಿಸಬೇಕು.*

*4. ರಾಜ್ಯ ಸರ್ಕಾರವು ಎಲ್ಲಾ ವಸತಿನಿಲಯಗಳ ತಪಾಸಣೆಗೆ ನಿರ್ದಿಷ್ಟ ಗುರಿಗಳನ್ನು ನಿಗದಿಪಡಿಸಬೇಕು, ಲಭ್ಯತೆಗೆ ಸಂಬಂಧಿತ ನ್ಯೂನತೆಗಳನ್ನು ಪರಿಹರಿಸುವುದನ್ನು ಮತ್ತು ನಿಗದಿತ ಸಮಯದ ಮಿತಿಯೊಳಗೆ ಇತರ ಮೂಲಸೌಕರ್ಯಗಳನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳಲು ವಿಶೇಷವಾಗಿ ವಿಕಲಚೇತನರ ವಸತಿನಿಲಯಗಳ ತಪಾಸಣೆ ಮಾಡಬೇಕು*

*5. ವಸತಿನಿಲಯಗಳು ನಿಗದಿಪಡಿಸಿದಂತೆ ಕಾರ್ಯ ನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಮೇಲ್ವಿಚಾರಣಾ ಕಾರ್ಯವಿಧಾನವನ್ನು ಜಾರಿಗೆ ತರಬೇಕು ಮತ್ತು ಯಾವುದೇ ಲೋಪದೋಷಗಳಿಗೆ ಹೊಣೆಗಾರಿಕೆಯನ್ನು ನಿಗದಿ ಪಡಿಸಬೇಕು.*

*6. ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳಲ್ಲಿನ ಖಾಲಿ ಹುದ್ದೆಗಳು ಮತ್ತು ಸೌಲಭ್ಯಗಳ ಲಭ್ಯತೆಯನ್ನು ಇಲಾಖೆಯ ಡ್ಯಾಶ್‌ಬೋರ್ಡ್‌ನಲ್ಲಿ ಅಪ್‌ಲೋಡ್ ಮಾಡಲು ರಾಜ್ಯ ಸರ್ಕಾರವು ಸೂಚನೆಗಳನ್ನು ನೀಡಬೇಕು.*

# ಕೃಷಿ ಇಲಾಖೆ

## 2.2 ಪ್ರಧಾನಮಂತ್ರಿಗಳ ಕೃಷಿ ಸಿಂಚಯಿ ಯೋಜನೆಯಡಿ 'ಪ್ರತಿ ಹನಿಗೂ ಹೆಚ್ಚು ಬೆಳೆ' ಯೋಜನೆಯ ಅನುಷ್ಠಾನದ ಮೇಲಿನ ವಿಷಯಾಧಾರಿತ ಲೆಕ್ಕಪರಿಶೋಧನೆ

### 2.2.1 ಪರಿಚಯ

**2.2.1.1** ಕರ್ನಾಟಕ ಸರ್ಕಾರವು ಕೃಷಿಯಲ್ಲಿ ನೀರಿನ ಬಳಕೆಯ ದಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಸುಸ್ಥಿರ ಕೃಷಿಯ ರಾಷ್ಟ್ರೀಯ ಮಿಷನ್ (ಎನ್‌ಎಮ್‌ಎಸ್‌ಎ) ಅಡಿಯಲ್ಲಿ ಸೂಕ್ಷ್ಮ ನೀರಾವರಿ (ಹನಿ ನೀರಾವರಿ[16] ಮತ್ತು ತುಂತುರು ನೀರಾವರಿ[17]) ಉತ್ತೇಜನಕ್ಕಾಗಿ ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು[18] (CSS) ಅನುಷ್ಠಾನಗೊಳಿಸುತ್ತಿದೆ.

ಜುಲೈ 2015ರಲ್ಲಿ ಭಾರತ ಸರ್ಕಾರವು ಕೃಷಿ ಮಟ್ಟದಲ್ಲಿ ನೀರಿನ ಬಳಕೆಯ ದಕ್ಷತೆಯನ್ನು ಹೆಚ್ಚಿಸಲು ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆಯನ್ನು (ಪಿಎಮ್‌ಕೆಎಸ್‌ವೈ) ಪ್ರಾರಂಭಿಸಿತು. ಪಿಎಮ್‌ಕೆಎಸ್‌ವೈ ನೀರಾವರಿ ಪೂರೈಕೆ ಸರಪಳಿಯಲ್ಲಿ ಮೊದಲಿಂದ ಕೊನೆಯವರೆಗೆ ಪರಿಹಾರಗಳನ್ನು ಒದಗಿಸುವ ಗುರಿಯನ್ನು ಹೊಂದಿರುವ ನಾಲ್ಕು[19] ಘಟಕಗಳನ್ನು ಹೊಂದಿದೆ ಅವುಗಳೆಂದರೆ, ನೀರಿನ ಮೂಲಗಳು, ವಿತರಣಾ ಜಾಲ ಮತ್ತು ಕೃಷಿ ಮಟ್ಟದ ಅಪ್ಲಿಕೇಶನ್‌ಗಳು. ಪಿಎಮ್‌ಕೆಎಸ್‌ವೈ ಅಡಿಯಲ್ಲಿ ಸೂಕ್ಷ್ಮ ನೀರಾವರಿ ಘಟಕವನ್ನು 'ಪ್ರತಿ ಹನಿಗೂ ಹೆಚ್ಚು ಬೆಳೆ' ಎಂದು ಹೆಸರಿಸಲಾಗಿದೆ ಮತ್ತು ಅದು ಫಲಾನುಭವಿಗಳಿಗೆ (ಎ) ಹನಿ ನೀರಾವರಿ ವ್ಯವಸ್ಥೆ ಅಥವಾ (ಬಿ) ತುಂತುರು ನೀರಾವರಿ ವ್ಯವಸ್ಥೆಗಳನ್ನು ಒದಗಿಸುವುದನ್ನು ಒಳಗೊಂಡಿದೆ. ಎನ್‌ಎಂಎಸ್‌ಎ ಅಡಿಯಲ್ಲಿ ರಾಜ್ಯವು ಅಲ್ಲಿಯವರೆಗೆ ಜಾರಿಗೊಳಿಸಿದ ಸೂಕ್ಷ್ಮ ನೀರಾವರಿಯ ಘಟಕವನ್ನು ಪಿಎಂಕೆಎಸ್‌ವೈ ಅಡಿಯಲ್ಲಿ ವಿಲೀನಗೊಳಿಸಲಾಯಿತು.

ಭಾರತ ಸರ್ಕಾರವು ಅಕ್ಟೋಬರ್ 2015ರಲ್ಲಿ ಪಿಡಿಎಮ್‌ಸಿ ಘಟಕದ ಕಾರ್ಯಾಚರಣೆಯ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿತು ಮತ್ತು ಅದನ್ನು ಏಪ್ರಿಲ್ 2017ರಲ್ಲಿ ಮರು ಮಾರಿ ಮಾಡಲಾಯಿತು. ಅಂತರ್ಜಲ ಸ್ಥಿತಿಯ ಆಧಾರದ ಮೇಲೆ ಸೂಕ್ಷ್ಮ ನೀರಾವರಿಯನ್ನು ಉತ್ತೇಜಿಸುವುದು; ಪ್ರದೇಶದ ವ್ಯಾಪ್ತಿ, ಬೆಳೆಯ ಉತ್ಪಾದಕತೆ ಮತ್ತು ರೈತರ ಆದಾಯವನ್ನು ಹೆಚ್ಚಿಸುವುದು; ಹೆಚ್ಚಿನ ನೀರು

[16] ಹನಿ ನೀರಾವರಿಯಲ್ಲಿ, ನಿಗದಿತ ಪ್ರಮಾಣದಲ್ಲಿ ನೀರನ್ನು ಹೊರಹಾಕಲು ವಿನ್ಯಾಸಗೊಳಿಸಲಾದ ಪೈಪ್‌ಗಳು, ಡ್ರಿಪ್ಪರ್‌ಗಳು ಮತ್ತು ಎಮಿಟರ್‌ಗಳ ಜಾಲದ ಮೂಲಕ ಸಸ್ಯಗಳ ಬೇರಿನ ವಲಯಕ್ಕೆ ನೀರನ್ನು ಒದಗಿಸಲಾಗುತ್ತದೆ. ಹನಿ ನೀರಾವರಿಯ ನೀರಾವರಿ ದಕ್ಷತೆಯು ಶೇಕಡಾ 90ರಿಂದ 95ರಷ್ಟಿತ್ತು.

[17] ತುಂತುರು ನೀರಾವರಿಯಲ್ಲಿ, ಪೈಪ್‌ಗಳ ಜಾಲದೊಂದಿಗೆ ಅಳವಡಿಸಲಾದ ನಳಿಕೆಗಳ ಮೂಲಕ ಎಲೆಗಳ ಮೇಲೆ ಮಳೆಯ ರೂಪದಲ್ಲಿ ನೀರನ್ನು ಒತ್ತಡದಿಂದ ಚಿಮುಕಿಸಲಾಗುತ್ತದೆ. ತುಂತುರು ನೀರಾವರಿಯ ನೀರಾವರಿ ದಕ್ಷತೆಯು ಶೇಕಡಾ 70ರಿಂದ 80 ರಷ್ಟಿತ್ತು.

[18] 2006 ರಲ್ಲಿ ಪ್ರಾರಂಭಿಸಲಾದ ಕೇಂದ್ರ ಪ್ರಾಯೋಜಿತ ಯೋಜನೆಯನ್ನು 2010ರಲ್ಲಿ ಸೂಕ್ಷ್ಮ ನೀರಾವರಿ ರಾಷ್ಟ್ರೀಯ ಮಿಷನ್ ಮತ್ತು 2014ರಲ್ಲಿ ಸುಸ್ಥಿರ ಕೃಷಿಯ ರಾಷ್ಟ್ರೀಯ ಮಿಷನ್ ಎಂದು ಉನ್ನತೀಕರಿಸಲಾಯಿತು.

[19] (ಎ) ವೇಗವರ್ಧಿತ ನೀರಾವರಿ ಪ್ರಯೋಜನ ಕಾರ್ಯಕ್ರಮ (ಎಐಬಿಪಿ) ಚಾಲ್ತಿಯಲ್ಲಿರುವ ಪ್ರಮುಖ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವುದರ ಮೇಲೆ ಕೇಂದ್ರೀಕರಿಸುತ್ತದೆ, (ಬಿ) ಹರ್ ಖೇತ್ ಕೋ ಪಾನಿ ಯೋಜನೆಯು ನೀರಿನ ಮೂಲದ ವೃದ್ಧಿ, ಅಂತರ್ಜಲ ಅಭಿವೃದ್ಧಿ, ಏತ ನೀರಾವರಿ, ಹೆಚ್ಚು ನೀರಿರುವ ಪ್ರದೇಶದಿಂದ ನೀರಿನ ಕೊರತೆ ಇರುವ ಪ್ರದೇಶಕ್ಕೆ ನೀರಿನ ಮಾರ್ಗಪಲ್ಲಟ, (ಸಿ) ಜಲಾನಯನ ಅಭಿವೃದ್ಧಿಯು ಶಿಖರ ಪ್ರದೇಶಗಳ ಸಂಸ್ಕರಣೆ, ಒಳಚರಂಡಿ ಮಾರ್ಗ ಸಂಸ್ಕರಣೆ, ಮಣ್ಣು ಮತ್ತು ತೇವಾಂಶ ಸಂರಕ್ಷಣೆ, ನೀರು ಕೊಯ್ಲು ರಚನೆಗಳು ಮತ್ತು ಇತರೆ ಜಲಾನಯನ ಕಾಮಗಾರಿಗಳು, ಹಾಗೂ (ಡಿ) ಪ್ರತಿ ಹನಿಗೂ ಹೆಚ್ಚು ಬೆಳೆ ಯೋಜನೆಯು ಹನಿ ನೀರಾವರಿ ಮತ್ತು ತುಂತುರು ನೀರಾವರಿಗಳನ್ನು ಬಳಸಿಕೊಂಡು ಸೂಕ್ಷ್ಮ ನೀರಾವರಿಯ ಮೇಲೆ ಕೇಂದ್ರೀಕರಿಸುತ್ತವೆ.#

ಬೇಕಾಗುವ ಬೆಳೆಗಳಲ್ಲಿ ಸೂಕ್ಷ್ಮ ನೀರಾವರಿಯನ್ನು ಉತ್ತೇಜಿಸುವುದು, ಫಲವತ್ತತೆಯನ್ನು[20] ಉತ್ತೇಜಿಸಲು ಸೂಕ್ಷ್ಮ ನೀರಾವರಿ ವ್ಯವಸ್ಥೆಗಳ ಸಂಭಾವ್ಯ ಬಳಕೆ ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು, ಇವುಗಳು ಕಾರ್ಯಾಚರಣೆಯ ಮಾರ್ಗಸೂಚಿಗಳಡಿಯಲ್ಲಿ ಕಲ್ಪಿಸಲಾದ ಉದ್ದೇಶಗಳಾಗಿದ್ದವು.

### 2.2.1.2 ಹಣಕಾಸು ಒದಗಿಸುವಿಕೆ

ಕಾರ್ಯಾಚರಣೆ ಮಾರ್ಗಸೂಚಿಗಳ ಪ್ರಕಾರ, ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡರಿಂದಲೂ ಫಲಾನುಭವಿಗೆ ಲಭ್ಯವಿರುವ ಹಣಕಾಸಿನ ನೆರವು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ[21] ಶೇಕಡಾ 55ರಷ್ಟು ಮತ್ತು ಇತರ ರೈತರಿಗೆ ಶೇಕಡಾ 45 ರಷ್ಟಿತ್ತು. ಈ ಹಣವನ್ನು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು 60:40ರ ಅನುಪಾತದಲ್ಲಿ ಭರಿಸುತ್ತಿದ್ದವು.

ಆದರೆ, ರಾಜ್ಯ ಮಟ್ಟದ ಮಂಜೂರಾತಿ ಸಮಿತಿಯು (ಕಂಡಿಕೆ 2.2.2) ಎಲ್ಲಾ ರೈತರಿಗೆ ಎರಡು ಹೆಕ್ಟೇರ್‌ಗಳವರೆಗೆ ಶೇಕಡಾ 90ರಷ್ಟು ಸಹಾಯಧನವನ್ನು ಮತ್ತು ಎರಡು ಹೆಕ್ಟೇರ್‌ಗಳಿಂದ ಐದು ಹೆಕ್ಟೇರ್‌ಗಳವರೆಗೆ ಶೇಕಡಾ 45ರಷ್ಟು ಸಹಾಯಧನ ನೀಡಲು ನಿರ್ಧರಿಸಿತು (ಮಾರ್ಚ್ 2016/ಮೇ 2017). ಹೆಚ್ಚುವರಿ ಸಹಾಯಧನವನ್ನು ಕರ್ನಾಟಕ ಸರ್ಕಾರವು ಭರಿಸಬೇಕಾಗಿತ್ತು.

### 2.2.1.3 ನೀರಾವರಿ ಯೋಜನೆ

ಯೋಜನೆಯ ಕಾರ್ಯಾಚರಣೆ ಮಾರ್ಗಸೂಚಿಗಳು ಪಿಎಮ್‌ಕೆಎಸ್‌ವೈ ಯೋಜನೆ ಮತ್ತು ಅನುಷ್ಠಾನಕ್ಕಾಗಿ ರಾಜ್ಯ ನೀರಾವರಿ ಯೋಜನೆ ಮತ್ತು ಜಿಲ್ಲಾ ನೀರಾವರಿ ಯೋಜನೆಗಳನ್ನು ತಯಾರಿಸುವುದನ್ನು ಕಡ್ಡಾಯಗೊಳಿಸಿತ್ತು. ರಾಜ್ಯ ನೀರಾವರಿ ಯೋಜನೆ ಮತ್ತು ಜಿಲ್ಲಾ ನೀರಾವರಿ ಯೋಜನೆಗಳನ್ನು ರಾಜ್ಯ ಮಟ್ಟದ ಮಂಜೂರಾತಿ ಸಮಿತಿಯು ನವೆಂಬರ್ 2016 ರಲ್ಲಿ ಅನುಮೋದಿಸಿತ್ತು. ರಾಜ್ಯ ನೀರಾವರಿ ಯೋಜನೆಯು ಐದು ವರ್ಷಗಳಲ್ಲಿ (2017–21) ಸೂಕ್ಷ್ಮ ನೀರಾವರಿ ಅಡಿಯಲ್ಲಿ 15.70 ಲಕ್ಷ ಹೆಕ್ಟೇರ್ ಭೂಮಿಯನ್ನು ವ್ಯಾಪ್ತಿಗೊಳಪಡಿಸುವ ಗುರಿ ಹೊಂದಿತ್ತು.

### 2.2.1.4 ಅನುಷ್ಠಾನ ಇಲಾಖೆಗಳು

ರಾಜ್ಯದಲ್ಲಿ, ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳು ಪಿಡಿಎಮ್‌ಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತವೆ. ಅವುಗಳಲ್ಲಿ ತೋಟಗಾರಿಕೆ ಇಲಾಖೆಯು ಪಿಡಿಎಮ್‌ಸಿ[22], ಕಾರ್ಯಕ್ರಮಕ್ಕಾಗಿ ಭಾರತ ಸರ್ಕಾರದ ಕೃಷಿ ಮಂತ್ರಾಲಯ ಮತ್ತು ಕರ್ನಾಟಕ ಸರ್ಕಾರದ ನಡುವಿನ ಎಲ್ಲಾ ಸಂವಹನಗಳನ್ನು ನಡೆಸುವ ನೋಡಲ್ ಇಲಾಖೆಯಾಗಿತ್ತು.

### 2.2.1.5 ಫಲಾನುಭವಿಗಳಿಂದ ಅರ್ಜಿ ಸಲ್ಲಿಸುವ ಪ್ರಕ್ರಿಯೆ

ಯೋಜನೆಯಡಿ ಗುರಿಪಡಿಸಿದ ಫಲಾನುಭವಿಗಳು ಜಮೀನು ಹೊಂದಿರುವ ಮತ್ತು ನೀರಾವರಿಗೆ ನೀರಿನ ಮೂಲವನ್ನು ಹೊಂದಿರುವ ರೈತರಾಗಿದ್ದರು. ಕಾರ್ಯಕ್ರಮದಡಿಯಲ್ಲಿ ಪ್ರಯೋಜನಗಳನ್ನು ಪಡೆಯಲು ಉದ್ದೇಶಿಸಿರುವ ಫಲಾನುಭವಿಗಳು ತಮ್ಮ ಹನಿ ನೀರಾವರಿ ಅಥವಾ ತುಂತುರು ನೀರಾವರಿ ಆಯ್ಕೆಯನ್ನು ಹಾಗೂ ತಾವು ಪಡೆಯಲು ಉದ್ದೇಶಿಸಿರುವ ಸಿಸ್ಟಮ್ ಘಟಕಗಳ ನೋಂದಾಯಿತ ತಯಾರಕರನ್ನು ಸೂಚಿಸುವ ಅಗತ್ಯ ದಾಖಲೆಗಳನ್ನು ಲಗತ್ತಿಸಿರುವ ಅರ್ಜಿ ನಮೂನೆಯನ್ನು ಅನುಷ್ಠಾನ ಇಲಾಖೆಗಳಿಗೆ ಸಲ್ಲಿಸಬೇಕು (ಉಲ್ಲೇಖ: ಕಂಡಿಕೆ 2.2.9.1). ಹನಿ ನೀರಾವರಿ ವ್ಯವಸ್ಥೆಯನ್ನು ಅಳವಡಿಸಲು ಅಗತ್ಯವಿರುವ

[20] ನೀರು ಮತ್ತು ಪೋಷಕಾಂಶಗಳ ಬಳಕೆಯ ದಕ್ಷತೆಯನ್ನು ಸುಧಾರಿಸುವ ಮುಖ್ಯ ಉದ್ದೇಶದೊಂದಿಗೆ ನೀರಾವರಿ ನೀರಿನಲ್ಲಿ ಕರಗುವ ರಸಗೊಬ್ಬರಗಳನ್ನು ಪೂರೈಸುವುದನ್ನು ಫಲೀಕರಣವು ಸೂಚಿಸುತ್ತದೆ.

[21] ಭಾರತ ಸರ್ಕಾರದ ನಿಯಮಗಳ ಪ್ರಕಾರ, 1 ಹೆಕ್ಟೇರ್‌ವರೆಗೆ ಭೂಮಿಯನ್ನು ಹೊಂದಿರುವವರು ರೈತ; 1 ಹೆಕ್ಟೇರ್‌ನಿಂದ 2 ಹೆಕ್ಟೇರ್‌ಗಳ ಭೂಮಿಯನ್ನು ಹೊಂದಿರುವವನು ಸಣ್ಣ ರೈತ; 2 ಹೆಕ್ಟೇರ್‌ಗಳಿಗಿಂತ ಹೆಚ್ಚು ಭೂಮಿ ಹೊಂದಿರುವವರು ಇತರ ರೈತರು (ಮಧ್ಯಮ/ದೊಡ್ಡವರು) (1 ಹೆಕ್ಟೇರ್=2.47 ಎಕರೆಗಳು).

[22] #ಕರ್ನಾಟಕ ಸರ್ಕಾರವು ಸೂಕ್ಷ್ಮ ನೀರಾವರಿ ಯೋಜನೆಯನ್ನು ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಕಾರ್ಯಕ್ರಮ ಎಂದು ಹೆಸರಿಸಿತು.

ಸಿಸ್ಟಮ್ ಘಟಕಗಳಾದ ಸ್ಕ್ರೀನ್ ಫಿಲ್ಟರ್, ವೆಂಚುರಿ (ಒಂದು ಫಲೀಕರಣ ಸಾಧನ), ಪಾಲಿವಿನೈಲ್ ಕ್ಲೋರೈಡ್ (ಪಿವಿಸಿ) ಪೈಪ್‌ಗಳು, ಲ್ಯಾಟರಲ್‌ಗಳು, ಹೊರಸೂಸುವ ಪೈಪ್‌ಗಳು, ಎಮಿಟರ್‌ಗಳು ಮತ್ತು ಕವಾಟಗಳನ್ನು ರೈತರಿಗೆ ಒದಗಿಸಲಾಗುತ್ತದೆ. ಅಂತೆಯೇ, ತುಂತುರು ನೀರಾವರಿ ವ್ಯವಸ್ಥೆಗೆ ಸಂಬಂಧಿಸಿದಂತೆ, ರೈತರಿಗೆ ಹೆಚ್ಚಿನ ಸಾಂದ್ರತೆಯ ಪಾಲಿಥಿಲೀನ್ (ಹೆಚ್‌ಡಿಪಿಇ) ಪೈಪ್‌ಗಳು, ಸ್ಪ್ರಿಂಕ್ಲರ್ ಜೋಡಣೆ, ಸಂಯೋಜಕಗಳು ಮತ್ತು ಪ್ಲಗ್‌ಗಳನ್ನು ಒದಗಿಸಲಾಗುತ್ತದೆ. ಹನಿ ನೀರಾವರಿ ಅಥವಾ ತುಂತುರು ನೀರಾವರಿ ವ್ಯವಸ್ಥೆಗಳ ಆಯ್ಕೆ ಮತ್ತು ಗರಿಷ್ಠ ಐದು ಹೆಕ್ಟೇರ್ ಪ್ರದೇಶದ ವ್ಯಾಪ್ತಿಯ ಆಧಾರದ ಮೇಲೆ ರೈತರಿಗೆ ಈ ಸಿಸ್ಟಮ್ ಘಟಕಗಳನ್ನು ಒದಗಿಸಲಾಗುತ್ತದೆ.

ಹನಿ ನೀರಾವರಿ/ತುಂತುರು ನೀರಾವರಿ ಘಟಕಗಳ ಪೂರೈಕೆಗಾಗಿ ತಯಾರಕರ ನೋಂದಣಿ ಪ್ರಕ್ರಿಯೆಯನ್ನು ಕಂಡಿಕೆ 2.2.10ರಲ್ಲಿ ನೀಡಲಾಗಿದೆ.

#### 2.2.1.6 ಸೂಕ್ಷ್ಮ ನೀರಾವರಿ ನೀತಿ

ರಾಜ್ಯ ಸರ್ಕಾರವು ಸೂಕ್ಷ್ಮ ನೀರಾವರಿಯ ಅನುಷ್ಠಾನದ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ಸಲುವಾಗಿ, ಸೂಕ್ಷ್ಮ ನೀರಾವರಿ ನೀತಿ–2017ನ್ನು ಅನುಮೋದಿಸಿತು (ಜುಲೈ 2018). ಸೂಕ್ಷ್ಮ ನೀರಾವರಿಯಿಂದ ಬೆಂಬಲಿತವಾಗಿರುವ ಭೌಗೋಳಿಕ ವಿತರಣೆ ಮತ್ತು ಬೆಳೆಗಳ ಪ್ರಕಾರವನ್ನು ಗುರುತಿಸುವುದು, ವಿವಿಧ ಗುಂಪುಗಳಲ್ಲಿ ವ್ಯಾಪ್ತಿಗೆ ಆದ್ಯತೆ ನೀಡುವುದು, ಮಾಹಿತಿ ತಂತ್ರಜ್ಞಾನ ಬೆಂಬಲವನ್ನು ಒದಗಿಸುವುದು ಮತ್ತು ಸಾಂಸ್ಥಿಕ ಚೌಕಟ್ಟಿನೊಂದಿಗೆ ಪ್ರೋತ್ಸಾಹ ಪ್ರಕ್ರಿಯೆಗಳನ್ನು ವೃದ್ಧಿಸುವುದು ಸೂಕ್ಷ್ಮ ನೀರಾವರಿ ನೀತಿಯ ಉದ್ದೇಶಗಳಾಗಿದ್ದವು. ಸೂಕ್ಷ್ಮ ನೀರಾವರಿ ನೀತಿಯು ವಿವಿಧ ಇಲಾಖೆಗಳಲ್ಲಿ ಎಲ್ಲಾ ಸೂಕ್ಷ್ಮ ನೀರಾವರಿ ಯೋಜನೆಗಳ ತ್ವರಿತ ಅನುಷ್ಠಾನಕ್ಕಾಗಿ ನೋಡಲ್ ಏಜೆನ್ಸಿಯಾದ ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮವನ್ನು (ಕೆಎಎಮ್ಐಸಿ) ಸ್ಥಾಪಿಸುವುದನ್ನೂ ಸಹ ಆಲೋಚಿಸಿತ್ತು.

## 2.2.2 ಸಂಘಟನಾ ವ್ಯವಸ್ಥೆ

ಕೃಷಿ ಇಲಾಖೆಯು ಪ್ರಧಾನ ಕಾರ್ಯದರ್ಶಿಯವರ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತದೆ ಮತ್ತು ಕೃಷಿ ಆಯುಕ್ತರು ಅವರಿಗೆ ನೆರವು ನೀಡುತ್ತಾರೆ. ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯು ಪ್ರಧಾನ ಕಾರ್ಯದರ್ಶಿಯವರ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತದೆ ಮತ್ತು ಅನುಕ್ರಮವಾಗಿ ತೋಟಗಾರಿಕೆ ನಿರ್ದೇಶಕರು ಮತ್ತು ರೇಷ್ಮೆ ನಿರ್ದೇಶಕರು ಅವರಿಗೆ ನೆರವು ನೀಡುತ್ತಾರೆ.

ಪಿಡಿಎಂಸಿ ಯೋಜನೆಯ ಕಾರ್ಯನಿರ್ವಹಣಾ ಮಾರ್ಗಸೂಚಿಗಳ ಪ್ರಕಾರ, ಕಾರ್ಯಕ್ರಮದ ಅನುಷ್ಠಾನದ ಮೇಲ್ವಿಚಾರಣೆಗಾಗಿ ಕರ್ನಾಟಕ ಸರ್ಕಾರವು ಮೂರು ಸಮಿತಿಗಳನ್ನು ರಚಿಸಿತು (ಅಕ್ಟೋಬರ್ 2015), ಅವುಗಳೆಂದರೆ, ರಾಜ್ಯ ಮಟ್ಟದ ಮಂಜೂರಾತಿ ಸಮಿತಿ, ಅಂತರ ಇಲಾಖೆಗಳ ಕಾರ್ಯಕಾರಿ ಸಮಿತಿ ಮತ್ತು ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ (ಉಲ್ಲೇಖ: ಕಂಡಿಕೆ 2.2.11.1).

## 2.2.3 ಲೆಕ್ಕಪರಿಶೋಧನಾ ಚೌಕಟ್ಟು

ಈ ಕೆಳಗಿನವುಗಳನ್ನು ನಿರ್ಧರಿಸುವುದು ಲೆಕ್ಕಪರಿಶೋಧನಾ ಉದ್ದೇಶಗಳಾಗಿದ್ದವು:

(1) ಕಾರ್ಯಕ್ರಮದ ಯೋಜನೆ ಮತ್ತು ಹಣಕಾಸು ಒದಗಿಸುವಿಕೆಯು ಪರಿಣಾಮಕಾರಿಯಾಗಿತ್ತೆ.

(2) ಸೂಕ್ಷ್ಮ ನೀರಾವರಿ ಘಟಕಗಳ ತಯಾರಕರು ಮತ್ತು ಇಲಾಖೆಗಳು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ತಮ್ಮ ಕಾರ್ಯವನ್ನು ನಿರ್ವಹಿಸಿದವೆ.

(3) ಪ್ರದೇಶದ ವ್ಯಾಪ್ತಿ, ಉತ್ಪಾದಕತೆ, ರೈತರ ಆದಾಯ ಹೆಚ್ಚಿಸುವುದು ಮತ್ತು ಉದ್ಯೋಗ ಸೃಷ್ಟಿಯಂತಹ ಕಾರ್ಯಕ್ರಮದ ಉದ್ದೇಶಗಳನ್ನು ಸಾಧಿಸಲಾಯಿತೆ.

ಉದ್ದೇಶಗಳನ್ನು ಮೌಲ್ಯಮಾಪನ ಮಾಡಲು ಲೆಕ್ಕಪರಿಶೋಧನಾ ಮಾನದಂಡಗಳನ್ನು ಕಾರ್ಯಾಚರಣಾ ಮಾರ್ಗಸೂಚಿಗಳು/ಸುತ್ತೋಲೆಗಳು/ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಮತ್ತು ಸರ್ಕಾರಗಳ ಸಮಿತಿಗಳು ಜಾರಿಗೊಳಿಸಿದ ಆದೇಶಗಳು ಹಾಗೂ ಸೂಕ್ಷ್ಮ ನೀರಾವರಿ ನೀತಿ–2017, ರಾಜ್ಯ ಮತ್ತು ಜಿಲ್ಲಾ ನೀರಾವರಿ ಯೋಜನೆಗಳು, ಕೈಪಿಡಿಗಳು, ಕರ್ನಾಟಕ ಹಣಕಾಸು ಸಂಹಿತೆ, ಟೆಂಡರ್ ದಾಖಲೆಗಳು ಮತ್ತು ಒಪ್ಪಂದಗಳು ಹಾಗೂ ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮದ ಸಭೆಯ ನಡಾವಳಿಗಳು ಮುಂತಾದ ಮೂಲಗಳಿಂದ ಅಳವಡಿಸಿಕೊಳ್ಳಲಾಯಿತು.

2016–17ರಿಂದ 2020–21ರ ಅವಧಿಯಲ್ಲಿ ತೋಟಗಾರಿಕೆ, ಕೃಷಿ ಮತ್ತು ರೇಷ್ಮೆ ಇಲಾಖೆ, ಈ ಎಲ್ಲಾ ಮೂರು ಇಲಾಖೆಗಳಲ್ಲಿ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದಿಂದ ಪಡೆದ ಹಣದಿಂದ ಪಿಡಿಎಮ್‌ಸಿ ಕಾರ್ಯಕ್ರಮದ ಅನುಷ್ಠಾನವನ್ನು ಲೆಕ್ಕಪರಿಶೋಧನೆಯ ವ್ಯಾಪ್ತಿಗೆ ಒಳಪಡಿಸಲಾಯಿತು.

ರಾಜ್ಯ, ಜಿಲ್ಲೆ ಮತ್ತು ತಾಲೂಕು ಮಟ್ಟದ ಕಚೇರಿಗಳಲ್ಲಿ ದಾಖಲೆಗಳ ಪರೀಕ್ಷಾ–ತನಿಖೆಯನ್ನು ಲೆಕ್ಕಪರಿಶೋಧನಾ ವಿಧಾನವು ಒಳಗೊಂಡಿತ್ತು. ರಾಜ್ಯದ ಒಟ್ಟು 30 ಜಿಲ್ಲೆಗಳ ಪೈಕಿ ಆರು[23] ಜಿಲ್ಲೆಗಳನ್ನು ಆಯ್ಕೆ ಮಾಡಲಾಯಿತು. ಇದಲ್ಲದೆ ಈ ಆರು ಜಿಲ್ಲೆಗಳಿಂದ 12 ತಾಲ್ಲೂಕುಗಳನ್ನು ಶ್ರೇಣೀಕೃತ ಯಾದೃಚ್ಛಿಕ ಮಾದರಿಯ ಆಧಾರದ ಮೇಲೆ ಆಯ್ಕೆ (ಪ್ರದೇಶ ವ್ಯಾಪ್ತಿಯ ಆಧಾರದ ಮೇಲೆ) ಮಾಡಲಾಯಿತು. ಒಟ್ಟು 600 ಫಲಾನುಭವಿಗಳ ದಾಖಲೆಗಳನ್ನು ಪರಿಶೀಲಿಸಲಾಯಿತು ಮತ್ತು 125 ಜಂಟಿ ಭೌತಿಕ ತಪಾಸಣೆಗಳನ್ನು ನಡೆಸಲಾಯಿತು.

ಲೆಕ್ಕಪರಿಶೋಧನೆಯು ಜುಲೈ ಮತ್ತು ಆಗಸ್ಟ್ 2021ರಲ್ಲಿ ಇಲಾಖೆಗಳೊಂದಿಗೆ ಪ್ರವೇಶ ಸಭೆಗಳನ್ನು ನಡೆಸಿತು. ಆ ಸಭೆಗಳಲ್ಲಿ ಲೆಕ್ಕಪರಿಶೋಧನಾ ವ್ಯಾಪ್ತಿ, ಉದ್ದೇಶಗಳು ಮತ್ತು ಲೆಕ್ಕಪರಿಶೋಧನೆಯ ಮಾನದಂಡಗಳನ್ನು ತಿಳಿಸಲಾಯಿತು. ಅವಲೋಕನಗಳು ಮತ್ತು ಕರಡು ಲೆಕ್ಕಪರಿಶೋಧನಾ ವರದಿಯನ್ನು ಸಂಬಂಧಪಟ್ಟ ಇಲಾಖೆಗಳಿಗೆ ಮತ್ತು ಸರ್ಕಾರಕ್ಕೆ ನೀಡಲಾಯಿತು. ಕರಡು ಲೆಕ್ಕಪರಿಶೋಧನಾ ವರದಿಯನ್ನು ಚರ್ಚಿಸಲು 8 ಜೂನ್ 2022 ರಂದು ನಿರ್ಗಮನ ಸಭೆಯನ್ನು ಸರ್ಕಾರದೊಂದಿಗೆ ನಡೆಸಲಾಯಿತು ಮತ್ತು ಸ್ವೀಕರಿಸಿದ ಉತ್ತರಗಳನ್ನು ವರದಿಯಲ್ಲಿ ಸೂಕ್ತವಾಗಿ ಸೇರಿಸಲಾಗಿದೆ.

### 2.2.4 ಕೃತಜ್ಞತೆ

ಲೆಕ್ಕ ಪರಿಶೋಧನೆ ನಡೆಸಲು ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಅಧಿಕಾರಿಗಳು ಮತ್ತು ಅಧಿಕಾರಿಗಳು, ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ಮತ್ತು ಪ್ರಾದೇಶಿಕ ದೂರ ಸಂವೇದಿ ಪ್ರಾಧಿಕಾರ[24], ಬೆಂಗಳೂರು ಅವರು ನೀಡಿದ ಸಹಕಾರ ಮತ್ತು ಸಹಾಯವನ್ನು ಲೆಕ್ಕಪರಿಶೋಧನೆಯು ಸ್ಮರಿಸುತ್ತದೆ.

### 2.2.5 ಕಾರ್ಯಕ್ರಮದ ಭೌತಿಕ ಮತ್ತು ಆರ್ಥಿಕ ಪ್ರಗತಿ

ಭೌತಿಕ ಮತ್ತು ಆರ್ಥಿಕ ಪ್ರಗತಿಯ[25] ವಿವರಗಳನ್ನು ಕೆಳಗಿನ ಕಂಡಿಕೆಗಳಲ್ಲಿ ನೀಡಲಾಗಿದೆ:

#### 2.2.5.1 ಆರ್ಥಿಕ ಪ್ರಗತಿ

ಎಲ್ಲಾ ಮೂರು ಅನುಷ್ಠಾನ ಇಲಾಖೆಗಳ ಪಿಡಿಎಮ್‌ಸಿ ಕಾರ್ಯಕ್ರಮದ ಆರ್ಥಿಕ ಕಾರ್ಯಕ್ಷಮತೆಯನ್ನು ಕೆಳಗಿನ **ಕೋಷ್ಟಕ–2.7**ರಲ್ಲಿ ನೀಡಲಾಗಿದೆ:

---

[23] ಬೆಳಗಾವಿ, ಚಿಕ್ಕಬಳ್ಳಾಪುರ, ಕಲಬುರಗಿ, ಮೈಸೂರು, ಶಿವಮೊಗ್ಗ ಮತ್ತು ವಿಜಯಪುರ.

[24] ಕಾರ್ಯಕ್ರಮದ ಫಲಿತಾಂಶಗಳನ್ನು ಅಧ್ಯಯನ ಮಾಡಲು ಬೆಂಗಳೂರಿನ ದೇಶಿಕ ದೂರ ಸಂವೇದಿ ಪ್ರಾಧಿಕಾರದ ಸಹಾಯವನ್ನು ಲೆಕ್ಕಪರಿಶೋಧನೆಯು ಕೋರಿತ್ತು.

[25] ಇಲಾಖಾವಾರು ಹಾಗು ಜಿಲ್ಲಾವಾರು ವಿವರಗಳು ಅನುಬಂಧ–2.2ರಲ್ಲಿ ಇದೆ.

**ಕೋಷ್ಟಕ–2.7: ಕಾರ್ಯಕ್ರಮದ ಆರ್ಥಿಕ ಕಾರ್ಯಕ್ಷಮತೆ**

(₹ ಕೋಟಿಗಳಲ್ಲಿ)

| ವರ್ಷ | ಬಿಡುಗಡೆ ಮಾಡಿದ ಹಣ (ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ) | ವೆಚ್ಚ | ಬಳಕೆ ಮಾಡದ ಮೊತ್ತ (ಶೇಕಡಾ) |
|---|---|---|---|
| 2016–17 | 524.91 | 513.78 | 11.13 |
| 2017–18 | 714.50 | 710.90 | 3.60 |
| 2018–19 | 869.03 | 838.92 | 30.11 |
| 2019–20 | 792.11 | 774.39 | 17.72 |
| 2020–21 | 1,078.84 | 1,057.46 | 21.38 |
| **ಒಟ್ಟು** | **3,979.39** | **3,895.45** | **83.94 (2.11)** |

ಆಧಾರ: ಇಲಾಖೆಯು ಒದಗಿಸಿದ ಪ್ರಗತಿ ವರದಿಗಳ ಆಧಾರದ ಮೇಲೆ ಲೆಕ್ಕಪರಿಶೋಧನೆಯು ಸಂಕಲಿಸಿರುವುದು (ಆಡಳಿತಾತ್ಮಕ ವೆಚ್ಚವನ್ನು ಹೊರತುಪಡಿಸಿ)

### 2.2.5.2 ಭೌತಿಕ ಕಾರ್ಯಕ್ಷಮತೆ

ರಾಜ್ಯಮಟ್ಟದ ಮಂಜೂರಾತಿ ಸಮಿತಿ ನಿಗದಿಪಡಿಸಿ ರಾಜ್ಯ ನೀರಾವರಿ ಯೋಜನೆಯಲ್ಲಿ (ಎಸ್ಐಪಿ) ಆಲೋಚಿಸಿದ್ದ ಗುರಿಗಳಿಗೆ ಹೋಲಿಸಿ ಎಲ್ಲಾ ಮೂರು ಅನುಷ್ಠಾನ ಇಲಾಖೆಗಳ ಪಿಡಿಎಂಸಿ ಕಾರ್ಯಕ್ರಮದ ಭೌತಿಕ ಕಾರ್ಯಕ್ಷಮತೆಯನ್ನು ಕೆಳಗಿನ **ಕೋಷ್ಟಕ–2.8**ರಲ್ಲಿ ನೀಡಲಾಗಿದೆ:

**ಕೋಷ್ಟಕ–2.8: ಕಾರ್ಯಕ್ರಮದ ಭೌತಿಕ ಕಾರ್ಯಕ್ಷಮತೆ**

| ವರ್ಷ | ಪ್ರದೇಶ | | | | ಫಲಾನುಭವಿಗಳ ಸಂಖ್ಯೆ | | | |
|---|---|---|---|---|---|---|---|---|
| | ಎಸ್ಐಪಿಯ[26] ಪ್ರಕಾರ ಗುರಿ (ಲಕ್ಷ ಹೆಕ್ಟೇರ್) | ಸಾಧನೆ (ಲಕ್ಷ ಹೆಕ್ಟೇರ್) | ಕೊರತೆ (–) / ಅಧಿಕ (+) (ಲಕ್ಷ ಹೆಕ್ಟೇರ್) | ಸಾಧನೆ (ಶೇಕಡಾ) | ಎಸ್ಎಲ್ಇಸಿ ಪ್ರಕಾರ ಗುರಿ | ಸಾಧನೆ | ಕೊರತೆ (–) /ಅಧಿಕ (+) | ಸಾಧನೆ (ಶೇಕಡಾ) |
| 2016–17 | 3.14 | 1.64 | (–) 1.50 | 52 | 1,42,679 | 1,65,795 | –23,116 | 116 |
| 2017–18 | 3.14 | 2.10 | (–) 1.04 | 67 | 2,63,537 | 2,12,183 | 51,354 | 81 |
| 2018–19 | 3.14 | 2.34 | (–) 0.80 | 75 | 2,94,194 | 2,27,381 | 66,813 | 77 |
| 2019–20 | 3.14 | 2.51 | (–) 0.63 | 80 | 2,78,026 | 2,48,937 | 29,089 | 90 |
| 2020–21 | 3.14 | 3.22 | (+) 0.08 | 103 | 3,21,062 | 3,26,815 | –5,753 | 102 |
| **ಒಟ್ಟು** | **15.70** | **11.81** | **(–) 3.89** | **75** | **12,99,498** | **11,81,111** | **1,18,387** | **91** |

ಆಧಾರ: ಇಲಾಖೆಯು ಒದಗಿಸಿದ ಪ್ರಗತಿ ವರದಿಗಳ ಆಧಾರದ ಮೇಲೆ ಲೆಕ್ಕಪರಿಶೋಧನೆಯು ಸಂಕಲಿಸಿರುವುದು

## ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು

### 2.2.6 ಅನುಷ್ಠಾನ

2017–21ರಲ್ಲಿ ಒಟ್ಟಾರೆ ಪ್ರದೇಶದ ವ್ಯಾಪ್ತಿಯು 11.81 ಲಕ್ಷ ಹೆಕ್ಟೇರ್‌ಗಳಾಗಿದ್ದು, ಶೇಕಡಾ 75ರಷ್ಟು ಸಾಧನೆಯನ್ನು ಪ್ರತಿನಿಧಿಸುತ್ತದೆ ಮತ್ತು 3.89 ಲಕ್ಷ ಹೆಕ್ಟೇರ್‌ಗಳ ಕೊರತೆಯಿದ್ದಿತು (ಶೇಕಡಾ 25).

ಲೆಕ್ಕಪರಿಶೋಧನೆಯು ಕಾರ್ಯಕ್ರಮದ ಅನುಷ್ಠಾನದಲ್ಲಿ ನ್ಯೂನತೆಗಳನ್ನು ಗಮನಿಸಿತು. ಅವುಗಳನ್ನು ಕೆಳಗಿನ ನಕ್ಷೆಯಲ್ಲಿ ಸಂಕ್ಷೇಪಿಸಲಾಗಿದೆ ಮತ್ತು ನಂತರದ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ:

[26] ರಾಜ್ಯ ನೀರಾವರಿ ಯೋಜನೆಯಲ್ಲಿ ವರ್ಷವಾರು ಭೌತಿಕ ಗುರಿಗಳನ್ನು ಒದಗಿಸದ ಕಾರಣ ಒಟ್ಟು ಗುರಿಯನ್ನು ಐದು ವರ್ಷಗಳಿಗೆ ಸಮಾನವಾಗಿ ಹಂಚಲಾಗಿದೆ (ವರ್ಷವಾರು ನಿಧಿಯ ಅಗತ್ಯವನ್ನು ಪರಿಗಣಿಸಿ, ಇದು ಪ್ರತಿ ವರ್ಷಗಳಲ್ಲಿ ಸಮಾನವಾಗಿರುತ್ತದೆ).

**ಕಂಡಿಕೆ:2.4: ಕಾರ್ಯಕ್ರಮದ ಕಾರಣ ಮತ್ತು ಪರಿಣಾಮದ ರೇಖಾಚಿತ್ರ**




## 2.2.7 ಯೋಜನೆ

ಕಾರ್ಯಕ್ರಮದ ಯೋಜನೆಯು ಸೂಕ್ಷ್ಮ ನೀರಾವರಿಯ ನೀತಿ, ಕಾರ್ಯಾಚರಣೆಯ ಮಾರ್ಗಸೂಚಿಗಳು ಮತ್ತು ಕಾಲಕಾಲಕ್ಕೆ ಸರ್ಕಾರಗಳು ಮತ್ತು ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಹೊರಡಿಸಿದ ಸೂಚನೆಗಳಿಗೆ ಅನುಗುಣವಾಗಿರುವುದು ಮುಖ್ಯವಾಗಿತ್ತು.

ಕಳೆದ ಐದು ವರ್ಷಗಳಲ್ಲಿ ಪ್ರದೇಶದ ವ್ಯಾಪ್ತಿಯ ವಿಷಯದಲ್ಲಿನ ಸಾಧನೆಯು ಗುರಿಯ ಶೇಕಡಾ 75ರಷ್ಟು ಇರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಯೋಜನೆಯು ಈ ಕೆಳಗಿನ ನ್ಯೂನತೆಗಳನ್ನು ಹೊಂದಿತ್ತು.

**2.2.7.1** ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಕೇಂದ್ರೀಕರಿಸಬೇಕಾದ/ಆದ್ಯತೆ ನೀಡಬೇಕಾದ/ ಉತ್ತೇಜಿಸುವ ಹಲವಾರು ಕ್ಷೇತ್ರಗಳನ್ನು ನಿರ್ದಿಷ್ಟಪಡಿಸಿದ್ದವು ಆದರೆ ಆ ಕ್ಷೇತ್ರಗಳಿಂದ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾದ ಯಾವುದೇ ನಿರ್ದಿಷ್ಟ ಆದ್ಯತೆಯ ಕ್ರಮವನ್ನು ನಿಗದಿಪಡಿಸಿರಲಿಲ್ಲ.

ಆದರೆ, ರಾಜ್ಯವು ಆದ್ಯತೆಯ ಕ್ಷೇತ್ರಗಳನ್ನು ಹೊಂದಿರುವ ಸೂಕ್ಷ್ಮ ನೀರಾವರಿ ನೀತಿಯನ್ನು ಹೊಂದಿತ್ತು, ಇದು ಉಲ್ಲೇಖಿಸುತ್ತದೆ. ಬಹಳಷ್ಟು ಕ್ಷೇತ್ರಗಳನ್ನು 'ಮೊದಲ ಆದ್ಯತೆ' ಎಂದು ವರ್ಗೀಕರಿಸಲಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (**ಅನುಬಂಧ–2.3**ರ ಕ್ರಮಸಂಖ್ಯೆ .1 ರಿಂದ 3).

ನೋಡಲ್ ಇಲಾಖೆಯು ಈ ಕೇಂದ್ರೀಕೃತ/ಆದ್ಯತೆ/ಉತ್ತೇಜಿತ ಕ್ಷೇತ್ರಗಳ ನಡುವೆ ಅಂತರ ಆದ್ಯತೆಯ ಕುರಿತು ಯಾವುದೇ ಸೂಚನೆಗಳನ್ನು ನೀಡಿಲ್ಲ.

ನೋಡಲ್ ಇಲಾಖೆಯು ಈ ಕೇಂದ್ರೀಕರಿಸಬೇಕಾದ/ಆದ್ಯತೆ ನೀಡಬೇಕಾದ/ಉತ್ತೇಜಿಸುವ ಕ್ಷೇತ್ರಗಳ ನಡುವೆ ಅಂತರ ಆದ್ಯತೆಯ ಕುರಿತು ಯಾವುದೇ ಸೂಚನೆಗಳನ್ನು ನೀಡಿರಲಿಲ್ಲ.

ಕಾರ್ಯಾಚರಣಾ ಮಾರ್ಗಸೂಚಿಗಳು ಮತ್ತು ಸೂಕ್ಷ್ಮ ನೀರಾವರಿ ನೀತಿಯ ಪ್ರಕಾರ ಕೇಂದ್ರೀಕರಿಸಬೇಕಾದ/ಆದ್ಯತೆ ನೀಡಬೇಕಾದ/ಉತ್ತೇಜಿಸುವ ಕ್ಷೇತ್ರಗಳ ವ್ಯಾಪ್ತಿಯ ಸ್ಥಿತಿಯನ್ನು **ಕೋಷ್ಟಕ–2.9**ರಲ್ಲಿ ನೀಡಲಾಗಿದೆ ಮತ್ತು **ಅನುಬಂಧ–2.3**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–2.9: ಕೇಂದ್ರೀಕೃತ ಕ್ಷೇತ್ರಗಳ ಅನುಷ್ಠಾನದ ಸ್ಥಿತಿ**

| ಕೇಂದ್ರೀಕರಿಸಬೇಕಾದ/ಆದ್ಯತೆ ನೀಡಬೇಕಾದ/ಉತ್ತೇಜನದ ಅಗತ್ಯವಿರುವ ಕ್ಷೇತ್ರಗಳು | ಸ್ಥಿತಿ |
|---|---|
| ಅಂತರ್ಜಲ ಸ್ಥಿತಿಯನ್ನು ಆಧರಿಸಿರಬೇಕು | ವ್ಯಾಪ್ತಿಯ ಮತ್ತು ಬಾಕಿ ಉಳಿದಿರುವ ವ್ಯಾಪ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಿರ್ವಹಿಸಿರಲಿಲ್ಲ. |
| ಹೆಚ್ಚಿನ ಮೌಲ್ಯದ ತೋಟಗಾರಿಕೆ ಬೆಳೆಗಳು ಮತ್ತು ಇತರ ಬೆಳೆಗಳು | |
| ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಗಳು | ಫಲಾನುಭವಿಗಳ ದತ್ತಸಂಚಯವನ್ನು ಸಂಗ್ರಹಿಸಲಾಗಿದೆ, ಆದರೆ ಜಿಲ್ಲೆಗಳು ನಂತರ ಯಾವುದೇ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. |
| ಇತರ ಯೋಜನೆಗಳೊಂದಿಗೆ ವಿಲೀನ | ಕೃಷಿ ಭಾಗ್ಯ ಯೋಜನೆಯೊಂದಿಗೆ ಕನಿಷ್ಠ ವಿಲೀನ |
| ಬೋರ್‌ವೆಲ್‌ಗಳಿಗೆ ಹೊಸ ವಿದ್ಯುತ್ ಸಂಪರ್ಕ ನೀಡಲು ಸೂಕ್ಷ್ಮ ನೀರಾವರಿ ವ್ಯವಸ್ಥೆಯನ್ನು ಕಡ್ಡಾಯಗೊಳಿಸಬೇಕು | ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಅಭಿಪ್ರಾಯವನ್ನು ಪಡೆದಿದೆ ಆದರೆ ನೀತಿ ನಿರ್ಣಯವನ್ನು ಇನ್ನೂ ತೆಗೆದುಕೊಳ್ಳಬೇಕಾಗಿದೆ. |
| ಉದ್ಯಮದ ಭಾಗವಹಿಸುವಿಕೆ | ಇನ್ನೂ ಪ್ರಾರಂಭಿಸಿಲ್ಲ |
| ಸೂಕ್ಷ್ಮ ನೀರಾವರಿ ನೀತಿಯ ಅನ್ವಯ ಸ್ಲ್ಯಾಬ್‌ವಾರು ಸಹಾಯಧನ | ಆದೇಶಗಳನ್ನು ಜಾರಿ ಮಾಡಲಾಗಿತ್ತು ಆದರೆ ಸರ್ಕಾರದಿಂದ ಹಿಂತೆಗೆದುಕೊಳ್ಳಲಾಯಿತು |
| ಜಿಲ್ಲಾ ನೀರಾವರಿ ಯೋಜನೆಯ ಪ್ರಕಾರ ಹಣವನ್ನು ಹಂಚಿಕೆ ಮಾಡಬೇಕು. | ಹಂಚಿಕೆಯು ಜಿಲ್ಲಾ ನೀರಾವರಿ ಯೋಜನೆಯ ಪ್ರಕಾರ ಇರಲಿಲ್ಲ |
| ಸೂಕ್ಷ್ಮ ನೀರಾವರಿಯನ್ನು ಅನುಷ್ಠಾನಗೊಳಿಸಲು ಸಾರ್ವಜನಿಕ ವಲಯ ಉದ್ಯಮವಾಗಿ ಕೆಎಎಮ್‌ಐಸಿಯನ್ನು ಸ್ಥಾಪಿಸಬೇಕು. | ಕೆಎಎಮ್‌ಐಸಿಯನ್ನು ಸ್ಥಾಪಿಸಲಾಯಿತು ಆದರೆ ಕಾರ್ಯಾಚರಣೆ ಮಾಡುತ್ತಿರಲಿಲ್ಲ. ಈಗ ಅದನ್ನು ಮುಚ್ಚಲು ಪ್ರಸ್ತಾವಿಸಲಾಗಿದೆ. |

**2.2.7.2** ಕಾರ್ಯಾಚರಣೆಯ ಮಾರ್ಗಸೂಚಿಗಳ ಪ್ರಕಾರ, ರಾಜ್ಯ ನೀರಾವರಿ ಯೋಜನೆ (ಎಸ್‌ಐಪಿ) ಮತ್ತು ಜಿಲ್ಲಾ ನೀರಾವರಿ ಯೋಜನೆಗಳನ್ನು (ಡಿಐಪಿ) ಸಿದ್ಧಪಡಿಸಲಾಗಿತ್ತು ಮತ್ತು ಯೋಜನೆ ಮತ್ತು ಅನುಷ್ಠಾನಕ್ಕೆ ಡಿಐಪಿ ಮೂಲಾಧಾರವಾಗಿರಬೇಕು.ರಾಜ್ಯ ನೀರಾವರಿ ಯೋಜನೆ ಮತ್ತು ಜಿಲ್ಲಾ ನೀರಾವರಿ ಯೋಜನೆಗಳಲ್ಲಿ ತಾಲೂಕುಗಳಿಗೆ ನಿಧಿಯ ಹಂಚಿಕೆಯು ನಿಗದಿಪಡಿಸಿದಂತೆ ಇರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಅನುಬಂಧ–2.3ರ ಕ್ರಮಸಂಖ್ಯೆ.9 ನೋಡಿ). ಆಯ್ಕೆ ಮಾಡಿದ ಕೃಷಿ ಇಲಾಖೆಯ ಆರು ಜಿಲ್ಲೆಗಳಲ್ಲಿ ಒಂದು ಜಿಲ್ಲೆ (ಬೆಳಗಾವಿ) ಮಾತ್ರ ತಾಲೂಕುಗಳಿಗೆ ಹಣ ಮಂಜೂರು ಮಾಡುವಾಗ ಅಪಾಯದ ವ್ಯೂಹವನ್ನು[27] ಅಳವಡಿಸಿಕೊಂಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ರಾಜ್ಯ ನೀರಾವರಿ

[27] ನಿವ್ವಳ ಕೃಷಿ ಪ್ರದೇಶ, ನೀರಾವರಿ ಪ್ರದೇಶ, ಕಬ್ಬು ಬೆಳೆಯುವ ಪ್ರದೇಶ, ಎಣ್ಣೆಬೀಜಗಳ ಅಡಿಯಲ್ಲಿರುವ ಪ್ರದೇಶ, ದ್ವಿದಳ ಧಾನ್ಯಗಳ ಅಡಿಯಲ್ಲಿರುವ ಪ್ರದೇಶ, ಬೇಸಿಗೆ ಬೆಳೆಗಳ ಅಡಿಯಲ್ಲಿರುವ ಪ್ರದೇಶ, ಸಣ್ಣ ಮತ್ತು ಅತಿ ಸಣ್ಣ ರೈತರ ಸಂಖ್ಯೆ, ವಾರ್ಷಿಕ ಮಳೆ ಹಾಗು ನಾಲ್ಕು ವರ್ಷಗಳ ಖರ್ಚು, ಇದೆಲ್ಲವನ್ನು ಆಧರಿಸಿ ತೂಕವನ್ನು ನಿಗದಿಪಡಿಸಿರುವುದು.

ಯೋಜನೆ ಮತ್ತು ಜಿಲ್ಲಾ ನೀರಾವರಿ ಯೋಜನೆಗಳು 2016–2021ರ ಅವಧಿಗೆ ಮಾತ್ರ ಅನ್ವಯಿಸುತ್ತವೆ ಎಂಬುಎದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಆದರೆ ಅದನ್ನು ಇನ್ನೂ ಇಂದೀಕರಿಸಲಾಗಿಲ್ಲ (ಜೂನ್ 2022).

**2.2.7.3** ಫಲಾನುಭವಿಗಳ ಆಯ್ಕೆಯು ಅವರು ಯಾವ ಕೇಂದ್ರೀಕೃತ, ಆದ್ಯತೆ ಅಥವಾ ಪ್ರಚಾರದ ಕ್ಷೇತ್ರಗಳಡಿಯಲ್ಲಿ ಬರುತ್ತಾರೆ ಎಂಬ ಅಂಶವನ್ನು ಲೆಕ್ಕಿಸದೆ ಅವರ ಅರ್ಜಿಗಳ ಸ್ವೀಕೃತಿಯ ಕಾಲಾನುಕ್ರಮ ಪಟ್ಟಿಯನ್ನು ಆಧರಿಸಿತ್ತು. ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತಮ್ಮದೇ ಆದ ಪ್ರತ್ಯೇಕ ತಂತ್ರಾಂಶಗಳನ್ನು ನಿರ್ವಹಿಸಿದ್ದರೆ, ರೇಷ್ಮೆ ಇಲಾಖೆಯು ಫಲಾನುಭವಿಗಳ ಭೌತಿಕ ನೋಂದಣಿ ಮೂಲಕ ಕಾರ್ಯಕ್ರಮವನ್ನು ಜಾರಿಗೊಳಿಸಿತು (ಕಂಡಿಕೆ 2.2.9.1 ಅನ್ನು ನೋಡಿ). ನೋಡಲ್ ಇಲಾಖೆಯು ಸೂಕ್ಷ್ಮ ನೀರಾವರಿ ಅಗತ್ಯವಿರುವ ಪ್ರದೇಶಗಳ ಜೊತೆಗೆ ಕೇಂದ್ರೀಕೃತ/ಆದ್ಯತೆ ನೀಡಿದ/ಉತ್ತೇಜಿತ ಪ್ರದೇಶಗಳಲ್ಲಿ ವ್ಯಾಪಿಸಿರುವ ಪ್ರದೇಶಗಳ ವಿವರಗಳೊಂದಿಗೆ ಎಲ್ಲಾ ಮೂರು ಇಲಾಖೆಗಳ ಅನುಷ್ಠಾನದ ಸಮಗ್ರ ದತ್ತ ಸಂಚಯವನ್ನು ಹೊಂದಿರಲಿಲ್ಲ ಏಕೆಂದರೆ ಅನುಷ್ಠಾನದಲ್ಲಿ ಒಂದು ಸಾಮರಸ್ಯ ವಿಧಾನವಿರಬೇಕಿತ್ತು.

ಕರ್ನಾಟಕದಲ್ಲಿ ಹೆಚ್ಚಿನ ಪ್ರದೇಶಗಳು ಮಳೆಯಾಶ್ರಿತ ಮತ್ತು ಬರಪೀಡಿತ ಪ್ರದೇಶಗಳಾಗಿವೆ ಮತ್ತು ಸೂಕ್ಷ್ಮ ನೀರಾವರಿಯನ್ನು ಎಲ್ಲಿ ಅಳವಡಿಸಿಕೊಂಡರೂ ಅದು ಕೇಂದ್ರೀಕೃತ ಪ್ರದೇಶದಡಿಯಲ್ಲಿ ಬರುತ್ತದೆ ಎಂದು ಸರ್ಕಾರವು ತಿಳಿಸಿತು (ಜೂನ್ 2022). ಇದಲ್ಲದೆ, ರಾಜ್ಯದ ಬಹುತೇಕ ಎಲ್ಲಾ ಕೃಷಿ ಬೆಳೆಗಳು ಉಲ್ಲೇಖಿಸಲಾದ ವರ್ಗಗಳಿಗೆ ಸೇರಿದ್ದವು ಮತ್ತು ಹಂಚಿಕೆಯನ್ನು ಮಾಡಲಾಯಿತು ಆದರೆ ಅನುಷ್ಠಾನವು ರೈತರ ಬೇಡಿಕೆಯನ್ನು ಅವಲಂಬಿಸಿತ್ತು ಎಂದೂ ಕೂಡ ತಿಳಿಸಲಾಯಿತು.

ಕೇಂದ್ರೀಕೃತ/ಆದ್ಯತೆ ನೀಡಿದ/ಉತ್ತೇಜಿತ ಪ್ರದೇಶಗಳ ವ್ಯಾಪ್ತಿಯ ಪರಿಶೀಲನೆಗಾಗಿ ಯಾವುದೇ ಪರಿಮಾಣಾತ್ಮಕ ದತ್ತಾಂಶ ಇಲ್ಲದೆಯೇ ಉತ್ತರವನ್ನು ನೀಡಲಾಗಿದೆ. ಅಲ್ಲದೆ, ಸೂಕ್ಷ್ಮ ನೀರಾವರಿ ನೀತಿ ಮತ್ತು ಕಾರ್ಯಾಚರಣೆಯ ಮಾರ್ಗಸೂಚಿಗಳ ಪ್ರಕಾರ, ವರ್ಗೀಕರಣವು ಅಂತರ್ಜಲ ಸ್ಥಿತಿಯನ್ನು ಆಧರಿಸಿತ್ತು (ಅತಿ–ಶೋಷಿತ, ನಿರ್ಣಾಯಕ ಮತ್ತು ಅರೆ ನಿರ್ಣಾಯಕ ತಾಲ್ಲೂಕುಗಳು) ಮತ್ತು ಮೇಲೆ ತಿಳಿಸಿದಂತೆ ಮಳೆಯಾಶ್ರಿತ ಮತ್ತು ಬರಪೀಡಿತ ಪ್ರದೇಶಗಳನ್ನಲ್ಲ. ಸೂಕ್ಷ್ಮ ನೀರಾವರಿ ನೀತಿ ಮತ್ತು ಕಾರ್ಯಾಚರಣಾ ಮಾರ್ಗಸೂಚಿಗಳಲ್ಲಿ ಆಲೋಚಿಸಿದಂತೆ ಕೇಂದ್ರೀಕೃತ/ಆದ್ಯತೆ ನೀಡಿದ/ಉತ್ತೇಜಿತ ಪ್ರದೇಶಗಳಲ್ಲಿನ ಫಲಾನುಭವಿ ವ್ಯಾಪ್ತಿಗೆ ಬದಲಾಗಿ, ಬೇಡಿಕೆಯ ಆಧಾರದ ಮೇಲೆ ಇಲಾಖೆಯು ಕಾರ್ಯಕ್ರಮವನ್ನು ಜಾರಿಗೊಳಿಸಿದೆ ಎಂಬುದು ಮೇಲಿನ ಉತ್ತರದಿಂದ ಸ್ಪಷ್ಟವಾಗುತ್ತದೆ.

*ಶಿಫಾರಸು–1: ಇಲಾಖೆಗಳು ತಾಲೂಕು ಮಟ್ಟದಲ್ಲಿ/ಕೆಳಮಟ್ಟದಲ್ಲಿ ದತ್ತಾಂಶವನ್ನು ಪಡೆಯುವ ಮೂಲಕ ಆದ್ಯತೆಯ/ಕೇಂದ್ರೀಕೃತ ಪ್ರದೇಶಗಳ ಅಪಾಯದ ವ್ಯೂಹವನ್ನು ಸಿದ್ಧಪಡಿಸಬೇಕು ಮತ್ತು ಅಂತಹ ವಿಶ್ಲೇಷಣೆಯ ಆಧಾರದ ಮೇಲೆ ಹಣವನ್ನು ಹಂಚಿಕೆ ಮಾಡಬೇಕು. ಇಲಾಖೆ ಬೆಳೆ ಸಮೀಕ್ಷೆಯ ಸಮಯದಲ್ಲಿ ನೀರಾವರಿ (ಹನಿ/ತುಂತುರು/ಪ್ರವಾಹ) ಪದ್ಧತಿ ಮತ್ತು ಬೇಸಾಯದ ಮೂಲವನ್ನು (ಕೊಳವೆಬಾವಿ/ತೆರೆದ ಬಾವಿ/ಏತ ನೀರಾವರಿ ಯೋಜನೆ/ಕೃಷಿ ಹೊಂಡ ಇತ್ಯಾದಿ) ಸೆರೆಹಿಡಿಯಲು ಗಳು ಇ–ಆಡಳಿತ ಇಲಾಖೆಯನ್ನು ವಿನಂತಿಸಬೇಕು ಮತ್ತು ಮಾಹಿತಿಯನ್ನು ಯೋಜನೆ ಪ್ರಕ್ರಿಯೆಯಲ್ಲಿ ಮತ್ತು ಜಿಲ್ಲೆಗಳು/ತಾಲ್ಲೂಕುಗಳಿಗೆ ನಿಧಿ ಹಂಚಿಕೆಯಲ್ಲಿ ಹೂಡುವಳಿಯಾಗಿ ಬಳಸಿಕೊಳ್ಳಬೇಕು. ಸೂಕ್ಷ್ಮ ನೀರಾವರಿ ನೀತಿ ಮತ್ತು ಕಾರ್ಯಾಚರಣೆಯ ಮಾರ್ಗಸೂಚಿಗಳಲ್ಲಿ ಆಲೋಚಿಸಿದಂತೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಇಲಾಖೆಯು ಸೂಚನೆಗಳನ್ನು ನೀಡಬೇಕು.*

*ಶಿಫಾರಸು–2: ಹೊಸ ರಾಜ್ಯ ಮತ್ತು ಜಿಲ್ಲಾ ನೀರಾವರಿ ಯೋಜನೆಗಳನ್ನು ತಯಾರಿಸಲು ಅಥವಾ ಇಂದೀಕರಿಸಲು ಮತ್ತು ಅದರ ಅನುಷ್ಠಾನಕ್ಕಾಗಿ ಪರಿಷ್ಕೃತ ಕಾರ್ಯ ಯೋಜನೆಯನ್ನು ತಯಾರಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕು.*

### 2.2.8 ಹಣಕಾಸು ನಿರ್ವಹಣೆ

ಯಾವುದೇ ಕಾರ್ಯಕ್ರಮ/ಯೋಜನೆಯ ಸೂಕ್ತವಾದ ಅನುಷ್ಠಾನಕ್ಕೆ ಸಾಕಷ್ಟು ಮತ್ತು ಸಮಯೋಚಿತವಾಗಿ ಹಣವನ್ನು ಒದಗಿಸುವುದು ಅತ್ಯಗತ್ಯವಾಗಿದೆ. ಕಾರ್ಯಾಚರಣೆಯ ಮಾರ್ಗಸೂಚಿಗಳ ಪ್ರಕಾರ, ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡರಿಂದಲೂ ಫಲಾನುಭವಿಗೆ ಲಭ್ಯವಿರುವ ಒಟ್ಟು ಹಣಕಾಸಿನ ನೆರವು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ[28] ಶೇಕಡಾ 55ರಷ್ಟು ಮತ್ತು ಇತರ ರೈತರಿಗೆ ಶೇಕಡಾ 45 ರಷ್ಟಿತ್ತು ಮತ್ತು ಇದನ್ನು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು 60:40 ಅನುಪಾತದಲ್ಲಿ ಭರಿಸುತ್ತವೆ. ಆದಾಗ್ಯೂ, ಕರ್ನಾಟಕ ಸರ್ಕಾರವು (ಮಾರ್ಚ್ 2016/ಮೇ 2017) ಎರಡು ಹೆಕ್ಟೇರ್‌ಗಳವರೆಗಿನ ಎಲ್ಲಾ ವರ್ಗದ ರೈತರಿಗೆ ಶೇಕಡಾ 90ರಷ್ಟು ಮತ್ತು ಎರಡು ಹೆಕ್ಟೇರ್‌ಗಳಿಂದ ಐದು ಹೆಕ್ಟೇರ್‌ಗಳವರೆಗೆ ಶೇಕಡಾ 45ರಷ್ಟು ಸಹಾಯಧನವನ್ನು ಒದಗಿಸಿತ್ತು. ಹೆಚ್ಚುವರಿ ಸಹಾಯಧನವನ್ನು ಭಾರತ ಸರ್ಕಾರ ಭರಿಸಿತ್ತು.

ಭಾರತ ಸರ್ಕಾರದ ಸಹಾಯಧನದೊಂದಿಗೆ ತನ್ನ ಪಾಲನ್ನು (ಹೆಚ್ಚುವರಿ ಸಹಾಯಧನ ಸೇರಿದಂತೆ) ರಾಜ್ಯವು ತನ್ನ ಆಯವ್ಯಯದಲ್ಲಿ ಒದಗಿಸಿತ್ತು. ನಂತರ ಈ ಮೊತ್ತವನ್ನು ತೋಟಗಾರಿಕೆ, ಕೃಷಿ ಮತ್ತು ರೇಷ್ಮೆ ಇಲಾಖೆಗಳಿಗೆ ಬಿಡುಗಡೆ ಮಾಡಲಾಯಿತು. ಇಲಾಖೆಗಳು ಅನುಮೋದಿತ ಕಾರ್ಯ ಯೋಜನೆಗಳ ಆಧಾರದ ಮೇಲೆ ಹೆಚ್ಚಿನ ಅನುಷ್ಠಾನಕ್ಕಾಗಿ ಜಿಲ್ಲೆಗಳಿಗೆ ಮೊತ್ತವನ್ನು ಬಿಡುಗಡೆ ಮಾಡಿದವು. ಹಣಕಾಸು ನಿರ್ವಹಣೆಯ ಮೇಲೆ ಲೆಕ್ಕಪರಿಶೋಧನಾ ಅವಲೋಕನಗಳನ್ನು ಕೆಳಗೆ ನೀಡಲಾಗಿದೆ:

(1) ರಾಜ್ಯ ನೀರಾವರಿ ಯೋಜನೆಯು 2016–17 ರಿಂದ 2020–21ರ ಅವಧಿಯಲ್ಲಿ 15.70 ಲಕ್ಷ ಹೆಕ್ಟೇರ್‌ಗಳನ್ನು ಸೂಕ್ಷ್ಮ ನೀರಾವರಿ ಅಡಿಯಲ್ಲಿ ತರಲು ಉದ್ದೇಶಿಸಿತ್ತು ಮತ್ತು ಇದಕ್ಕಾಗಿ ಹಣದ ಅವಶ್ಯಕತೆಯು ₹ 10,909 ಕೋಟಿಗಳಾಗಿದ್ದಿತು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳು ಒಟ್ಟಾಗಿ 2016–17ರಿಂದ 2020–21 ರ ಅವಧಿಯಲ್ಲಿ ಕೇವಲ ₹ 3,979 ಕೋಟಿಗಳನ್ನು ಒದಗಿಸಿದ್ದವು. ಹೀಗೆ, ರಾಜ್ಯ ನೀರಾವರಿ ಯೋಜನೆ/ ಜಿಲ್ಲಾ ನೀರಾವರಿ ಯೋಜನೆ ಅಥವಾ ಸೂಕ್ಷ್ಮ ನೀರಾವರಿ ನೀತಿಯಲ್ಲಿ ಕಲ್ಪಿಸಿದಂತೆ ಕಾರ್ಯಕ್ರಮದ ಅನುಷ್ಠಾನಕ್ಕೆ ಸಾಕಷ್ಟು ಹಣವನ್ನು ಒದಗಿಸದಿದ್ದುದು ಗುರಿಗಳನ್ನು ಸಾಧಿಸದಿರುವಲ್ಲಿ ಪರಿಣಮಿಸಿತು. ಸರ್ಕಾರವು (ಜೂನ್ 2022) ರಾಜ್ಯ ನೀರಾವರಿ ಯೋಜನೆ/ಜಿಲ್ಲಾ ನೀರಾವರಿ ಯೋಜನೆಯನ್ನು ಭಅರತ ಸರ್ಕಾರದ ಪಿಎಮ್‌ಕೆಎಸ್‌ವೈ ಪೋರ್ಟಲ್‌ಗೆ ಅಪ್‌ಲೋಡ್ ಮಾಡಿರುವುದರಿಂದ ಭಾರತ ಸರ್ಕಾರಕ್ಕೆ ರಾಜ್ಯ ರಾಜ್ಯ ನೀರಾವರಿ ಯೋಜನೆಯ ಬಗ್ಗೆ ತಿಳಿದಿತ್ತು ಎಂದು ಸರ್ಕಾರವು ತಿಳಿಸಿತು (ಜೂನ್ 2022). ರಾಜ್ಯ ನೀರಾವರಿ ಯೋಜನೆಯಡಿಯಲ್ಲಿ ಅಗತ್ಯವಿರುವಷ್ಟು ಹಣವನ್ನು ಲಭ್ಯವಾಗುವಂತೆ ಮಾಡುವುದು ಕರ್ನಾಟಕ ಸರ್ಕಾರದ ಜವಾಬ್ದಾರಿಯಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

(2) ಒಟ್ಟು ಶೇಕಡಾ 90ರ ಸಹಾಯಧನದಲ್ಲಿ ಭಾರತ ಸರ್ಕಾರದ ಪಾಲು ಶೇಕಡಾ 33ರಷ್ಟಿದ್ದರೆ ಉಳಿದ ಶೇಕಡಾ 57ರಷ್ಟನ್ನು ರಾಜ್ಯವು ನೀಡಬೇಕಾಗಿತ್ತು (ಶೇಕಡಾ 22 ಕಡ್ಡಾಯ ಮತ್ತು ಶೇಕಡಾ 35 ಹೆಚ್ಚುವರಿ ಸಹಾಯಧನ). ಒದಗಿಸಬೇಕಿದ್ದ ಸಹಾಯಧನದಲ್ಲಿ ಭಾರತ ಸರ್ಕಾರದ ಮತ್ತು ಕರ್ನಾಟಕ ಸರ್ಕಾರದ ಪಾಲಿನ ವಿವರಗಳು, ಮತ್ತು ಕಳೆದ ಮೂರು ವರ್ಷಗಳಲ್ಲಿ ವಾಸ್ತವವಾಗಿ ಒದಗಿಸಿದ ಸಹಾಯಧನದ ವಿವರಗಳನ್ನು ಕೆಳಗಿನ **ಕೋಷ್ಟಕ–2.10** ನೀಡಲಾಗಿದೆ:

[28] ಭಾರತ ಸರ್ಕಾರದ ನಿಯಮಗಳ ಪ್ರಕಾರ, 1 ಹೆಕ್ಟೇರ್‌ವರೆಗೆ ಭೂಮಿಯನ್ನು ಹೊಂದಿರುವವರು ಅತಿ ಸಣ್ಣ ರೈತ; 1 ಹೆಕ್ಟೇರ್‌ನಿಂದ 2 ಹೆಕ್ಟೇರ್‌ಗಳನ್ನು ಹೊಂದಿರುವವನು ಸಣ್ಣ ರೈತ; 2 ಹೆಕ್ಟೇರ್‌ಗಳಿಗಿಂತ ಹೆಚ್ಚು (1 ಹೆಕ್ಟೇರ್: 2.47 ಎಕರೆ) ಹೊಂದಿರುವವರು. ಇತರ ರೈತರು (ಮಧ್ಯಮ/ದೊಡ್ಡವರು).

**ಕೋಷ್ಟಕ–2.10: ಸಹಾಯಧನದ ಬಿಡುಗಡೆಯಲ್ಲಿ ಕೊರತೆ**

(₹ ಕೋಟಿಗಳಲ್ಲಿ)

| ವರ್ಷ | ಮರುಮೌಲ್ಯಮಾಪನದ ಮೊತ್ತ (ಶೇಕಡಾ 33) ಸೇರಿದಂತೆ ಬಿಡುಗಡೆ ಮಾಡಿದ ಭಾರತ ಸರ್ಕಾರದ ಪಾಲು | ಕರ್ನಾಟಕ ಸರ್ಕಾರವು ಒದಗಿಸಬೇಕಿದ್ದ ಪಾಲು (ಶೇಕಡಾ 57ರಷ್ಟು) | ಬಿಡುಗಡೆ ಮಾಡಬೇಕಿದ್ದ ಒಟ್ಟು ಮೊತ್ತ | ಬಿಡುಗಡೆ ಮಾಡಿದ ಮೊತ್ತ | ಕರ್ನಾಟಕ ಸರ್ಕಾರದಿಂದ ಬಿಡುಗಡೆಯಲ್ಲಿ ಕೊರತೆ |
|---|---|---|---|---|---|
| 2018–19 | 331.81 | 573.13 | 904.94 | 872.99 | 31.95 |
| 2019–20 | 380.22 | 656.74 | 1,036.96 | 780.51 | 256.45 |
| 2020–21 | 451.94 | 780.62 | 1,232.56 | 1,080.54 | 152.02 |
| **ಒಟ್ಟು** | **1,163.97** | **2,010.49** | **3,174.46** | **2,734.04** | **440.42** |

ಆಧಾರ: ಪ್ರಗತಿ ವರದಿಗಳು, ಸಿಎ ವರದಿಗಳು ಮತ್ತು ಇಲಾಖೆಯು ಒದಗಿಸಿದ ಎಸ್‌ಎಲ್‌ಎಸ್‌ಸಿ ನಡಾವಳಿಗಳು.

ಭಾರತ ಸರ್ಕಾರದ ಬಿಡುಗಡೆಗಳಿಗೆ (ಶೇಕಡಾ 33) ಹೊಂದಿಕೆಯಾಗುವಂತೆ ಕರ್ನಾಟಕ ಸರ್ಕಾರ ಶೇಕಡಾ 57ರಷ್ಟನ ತನ್ನ ಪಾಲನ್ನು ಪೂರ್ಣವಾಗಿ ಬಿಡುಗಡೆ ಮಾಡದಿದ್ದುದು ಗುರಿಗಳನ್ನು ಸಾಧಿಸದಿರುವಲ್ಲಿ ಪರಿಣಮಿಸಿತು ಎಂದು ಲೆಕ್ಕಪರಿಶೋಧನೆಯು ಗಮನಿಸಿತು. ರಾಜ್ಯ ಸರ್ಕಾರವು ಭಾರತ ಸರ್ಕಾರದ ಮಾನದಂಡಗಳ ಪ್ರಕಾರ ಶೇಕಡಾ 22ರಷ್ಟು ಸಹಾಯಧನವನ್ನು ಒದಗಿಸುತ್ತಿದೆ, ಆದರೆ ರಾಜ್ಯವು ತನ್ನ ನೀತಿಯ ಪ್ರಕಾರ (ಒಟ್ಟು 57 ಪ್ರತಿಶತ) ಹೆಚ್ಚುವರಿ ಸಹಾಯಧನವನ್ನು ಒದಗಿಸಬೇಕಿದ್ದರಿಂದ ಅದರಲ್ಲಿ ಕೊರತೆಯಿದ್ದಿತು ಎಂದು ನಿರ್ಗಮನ ಸಭೆಯಲ್ಲಿ ಸರ್ಕಾರವು ತಿಳಿಸಿತು (ಜೂನ್ 2022).

ಶೇಕಡಾ 90ರಷ್ಟು ಸಹಾಯಧನವನ್ನು ಒದಗಿಸಲು ಬದ್ಧವಾಗಿರುವ ಸರ್ಕಾರ, ಆಯವ್ಯಯದಲ್ಲಿ ಅದಕ್ಕೆ ಸಾಕಷ್ಟು ಅವಕಾಶ ಮಾಡಿ ಹಣವನ್ನು ಬಿಡುಗಡೆ ಮಾಡಬೇಕಿತ್ತು.

(3) ರಾಜ್ಯದಲ್ಲಿ ಮುಖ್ಯ ಬೆಳೆಗೆ ಮುಂಗಾರು ಮಳೆಯ ಅವಧಿ ಜುಲೈನಿಂದ ಅಕ್ಟೋಬರ್‌ವರೆಗೆ ಇರುತ್ತದೆಯಾದ್ದರಿಂದ ಸೂಕ್ಷ್ಮ ನೀರಾವರಿಗೆ ಬೇಡಿಕೆಯು ಏಪ್ರಿಲ್‌ನಿಂದ ಜೂನ್‌ವರೆಗೆ ಇರುತ್ತದೆ. ಆದರೆ, ಎಸ್‌ಎಲ್‌ಎಸ್‌ಸಿ ವಾರ್ಷಿಕ ಕಾರ್ಯ ಯೋಜನೆಗಳನ್ನು ವರ್ಷದ ಜೂನ್/ಆಗಸ್ಟ್[29] ತಿಂಗಳಲ್ಲಿ ಮಾತ್ರ ಅನುಮೋದಿಸಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದಲ್ಲದೆ, ಕೃಷಿ ಇಲಾಖೆಯ 2020–21ರ ದತ್ತಾಂಶದ ವಿಶ್ಲೇಷಣೆಯು ಕಾರ್ಯಕ್ರಮದ ಅನುಷ್ಠಾನವು (ಕಾರ್ಯಾದೇಶ ವಿತರಣೆ ದಿನಾಂಕ) ಆಗಸ್ಟ್/ಸೆಪ್ಟೆಂಬರ್‌ನಿಂದ ಪ್ರಾರಂಭವಾಗಿತ್ತು ಎಂದು ತೋರಿಸಿತು. ಇದು ಕಾರ್ಯಕ್ರಮದ ನಿಧಾನಗತಿಯ ಪ್ರಾರಂಭವನ್ನು ಸೂಚಿಸುತ್ತದೆ. ಅಲ್ಲದೆ, ಮಾರ್ಚ್‌ನಲ್ಲಿ ವಿಪರೀತ ವೆಚ್ಚಗಳಿದ್ದವು ಮತ್ತು ವರ್ಷದ ಕೊನೆಯ ದಿನದಂದು (ಮಾರ್ಚ್ 31) ಸಹ ಹಣವನ್ನು ಬಿಡುಗಡೆ ಮಾಡಲಾಗಿತ್ತು. 2018–19ರಲ್ಲಿ ₹ 31.59 ಕೋಟಿ, 2019–20ರಲ್ಲಿ ₹ 5.95 ಕೋಟಿ ಹಾಗೂ 2020–21ರಲ್ಲಿ ₹ 21.26 ಕೋಟಿ ಹಣ ಬಳಕೆಯಾಗದೇ ಉಳಿದಿರುವುದನ್ನು ಗಮನಿಸಲಾಯಿತು. ಸರ್ಕಾರವು (ಜೂನ್ 2022) ಸರ್ಕಾರವು ಮಾರ್ಗೋಪಾಯಗಳನ್ನು ಹೊಂದಿದ್ದರಿಂದ ಹಣ ಬಿಡುಗಡೆಯಲ್ಲಿ ವಿಳಂಬವಾಗಿರುವ ಯಾವುದೇ ಪ್ರಕರಣವಿಲ್ಲ ಎಂದು ಸರ್ಕಾರವು ತಿಳಿಸಿತು (ಜೂನ್ 2022). ಮುಖ್ಯ ಬೆಳೆಯ ಅವಧಿಯಲ್ಲಿ ಹಣವನ್ನು ಒದಗಿಸಿರಲಿಲ್ಲ ಮತ್ತು ವರ್ಷಾಂತ್ಯದಲ್ಲಿ ವಿಪರೀತ ವೆಚ್ಚಗಳಿದ್ದವು ಎಂಬುದು ವಾಸ್ತವಾಂಶವಾಗಿದೆ.

(4) ತೋಟಗಾರಿಕೆ ಇಲಾಖೆಯಲ್ಲಿ, 2020–21ರ ಅವಧಿಯಲ್ಲಿ, ಮಂಜೂರಾತಿ ಆದೇಶಗಳಿಲ್ಲದೆ ಪರಿಶಿಷ್ಟ ಜಾತಿ ಕಾರ್ಯಕ್ರಮದ (ಎಸ್‌ಸಿಪಿ) ಘಟಕದಡಿಯಲ್ಲಿ ₹ 7.35 ಕೋಟಿ ವೆಚ್ಚ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 7,882 ಅರ್ಜಿಗಳು ಬಾಕಿ ಇದ್ದರೂ ಇಲಾಖೆಯು ₹ 9.00

[29] 2020–21: ಆಗಸ್ಟ್ 2020; 2019–20: ಜೂನ್ 2019; 2018–19: ಜೂನ್ 2018, ಮತ್ತು 2017–18: ಮೇ 2017.

ಕೋಟಿಯನ್ನು ಅಧ್ಯರ್ಪಣೆ ಮಾಡಿರುವುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಮಂಜೂರಾತಿ ಆದೇಶಗಳಿಲ್ಲದೆ, ಖಜಾನೆಯು ಪಾವತಿಗಳನ್ನು ಬಿಡುಗಡೆ ಮಾಡುವುದಿಲ್ಲ ಮತ್ತು ಬಾಕಿ ಉಳಿದಿರುವ ಅರ್ಜಿಗಳನ್ನು ಮುಂದಿನ ಹಣಕಾಸು ವರ್ಷದಲ್ಲಿ ಪರಿಗಣಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಜೂನ್ 2022) ₹ 7.35 ಕೋಟಿ ಮೊತ್ತದ ಪಾವತಿಗೆ ಸಂಬಂಧಿಸಿದಂತೆ ಇಲಾಖೆಯು ಒದಗಿಸಿದ ತ:ಖ್ತೆಯಲ್ಲಿ ಮಂಜೂರಾತಿ ಆದೇಶಗಳು ಇಲ್ಲದಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಅಲ್ಲದೆ ಅರ್ಜಿಗಳು ಬಾಕಿ ಇರುವಾಗ ಹಣವನ್ನು ಅಧ್ಯರ್ಪಣೆ ಮಾಡುವುದು ಸಮರ್ಥನೀಯವಲ್ಲ.

*ಶಿಫಾರಸು–3: ನಿಗದಿಪಡಿಸಿದ ಗುರಿಗಳನ್ನು ಸಾಧಿಸಲು ರಾಜ್ಯ ನೀರಾವರಿ ಯೋಜನೆಯ ಪ್ರಕಾರ ಹಣವನ್ನು ಬಿಡುಗಡೆ ಮಾಡಲಾಗಿದೆ ಎಂಬುದನ್ನು ಸರ್ಕಾರಗಳು ಖಚಿತಪಡಿಸಿಕೊಳ್ಳಬೇಕು. ಅಲ್ಲದೆ, ರಾಜ್ಯ ಸರ್ಕಾರವು ಹೆಚ್ಚಿನ ಸಹಾಯಧನವನ್ನು (ಶೇಕಡಾ 90) ವಿಸ್ತರಿಸಿರುವುದರಿಂದ ಹೆಚ್ಚುವರಿ ವಂತಿಗೆಯನ್ನು ಒದಗಿಸುವ ಅಗತ್ಯವಿದೆ.*

### 2.2.9 ಫಲಾನುಭವಿಗಳ ಆಯ್ಕೆ

**2.2.9.1** ಕಾರ್ಯನಿರ್ವಹಣಾ ಮಾರ್ಗಸೂಚಿಗಳ ಕಂಡಿಕೆ 13.5ರ ಪ್ರಕಾರ, ಅನುಷ್ಠಾನ ಇಲಾಖೆಗಳು ಫಲಾನುಭವಿಗಳ ಆಯ್ಕೆಯಲ್ಲಿ ಏಕರೂಪದ ಕಾರ್ಯವಿಧಾನ ಮತ್ತು ಪಾರದರ್ಶಕತೆಯನ್ನು ಅನುಸರಿಸಬೇಕು. ಕಾರ್ಯಕ್ರಮದ ಅನುಷ್ಠಾನಕ್ಕಾಗಿ ವೆಬ್ ಆಧಾರಿತ ಮಾಹಿತಿ ತಂತ್ರಜ್ಞಾನ ಮಾದರಿಯನ್ನು ಅಳವಡಿಸಿಕೊಳ್ಳುವ ಮೂಲಕ ಫಲಾನುಭವಿಗಳಿಗೆ ನೇರವಿನ ಬಿಡುಗಡೆಯನ್ನು ಸಮರ್ಥ ರೀತಿಯಲ್ಲಿ ಮಾಡಬೇಕು.

ರಾಜ್ಯದ ರೈತರು, 'ಫ್ರೂಟ್ಸ್'[30] ಅಡಿಯಲ್ಲಿ ನೋಂದಾಯಿಸಿರುವ ಹಾಗೂ ಭೂಮಿ ಮತ್ತು ನೀರಿನ ಮೂಲಗಳನ್ನು (ಕೊಳವೆಬಾವಿ/ಬಾವಿ/ನಾಲೆ ಇತ್ಯಾದಿ) ಹೊಂದಿರುವವರು ಅಗತ್ಯ ದಾಖಲೆಗಳೊಂದಿಗೆ (ಭೂಮಿಯ ವಿವರಗಳು, ನೀರಿನ ಮೂಲ, ನಿರಾಕ್ಷೇಪಣಾ ಪ್ರಮಾಣಪತ್ರ) ಅನುಷ್ಠಾನ ಇಲಾಖೆಗಳ ಹತ್ತಿರದ ಕೇಂದ್ರದಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು. ರೈತರು ಅರ್ಜಿಯಲ್ಲಿ ಸೂಕ್ಷ್ಮ ನೀರಾವರಿಯ ವಿಧ (ಹನಿ/ತುಂತುರು) ಮತ್ತು ತಯಾರಕರ (ನೋಂದಾಯಿತ) ಆಯ್ಕೆಯನ್ನು ನಮೂದಿಸಬೇಕು.

ಎಲ್ಲಾ ಮೂರು ಇಲಾಖೆಗಳು 2017–18ರವರೆಗೆ ನೋಂದಣಿ ಮತ್ತು ಆಯ್ಕೆಗಾಗಿ ಹಸ್ತ ಚಾಲಿತ ವ್ಯವಸ್ಥೆಯನ್ನು ಹೊಂದಿದ್ದವು. ತೋಟಗಾರಿಕೆ ಇಲಾಖೆಯು ಹಸಿರು ತಂತ್ರಾಂಶ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಿತು ಮತ್ತು 2018–19ರಿಂದ ಅದನ್ನು ಬಳಸಿದರೆ, ಕೃಷಿ ಇಲಾಖೆಯು 2019–20ರಿಂದ ಕೆ-ಕಿಸಾನ್ ಎಂಬ ಮತ್ತೊಂದು ಅಪ್ಲಿಕೇಶನ್‌ಅನ್ನು ಅಭಿವೃದ್ಧಿಪಡಿಸಿತು. ರೇಷ್ಮೆ ಇಲಾಖೆಯು ಹಸ್ತಚಾಲಿತ ರೆಜಿಸ್ಟರ್‌ಗಳು/ಪ್ರಕ್ರಿಯೆಯ ಮೂಲಕ ಕಾರ್ಯಕ್ರಮವನ್ನು ನೋಂದಾಯಿಸುವುದನ್ನು/ಅನುಷ್ಠಾನಗೊಳಿಸುವುದನ್ನು ಮುಂದುವರೆಸಿತ್ತು.

ಹಣದ ಲಭ್ಯತೆಯ ಆಧಾರದ ಮೇಲೆ ಎಲ್ಲಾ ವರ್ಗಗಳಿಗೆ ಪ್ರತ್ಯೇಕವಾಗಿ ಹಣವನ್ನು ಪಡೆಯುವುದರಿಂದ ಅನುಕ್ರಮವಾಗಿ ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಗಳ ಅಡಿಯಲ್ಲಿ ತುಂತುರು ಮತ್ತು ಹನಿ ನೀರಾವರಿಗಾಗಿ ರೈತರ ಆಯ್ಕೆಯನ್ನು ನೋಂದಣಿಯ ಆಧಾರದ ಮೇಲೆ ಮಾಡಲಾಗಿತ್ತು.

ಆಯ್ಕೆಯ ನಂತರ, ರೈತರು ತಮ್ಮ ಶೇಕಡಾ 10ರಷ್ಟು ಪಾಲನ್ನು ತಯಾರಕರಿಗೆ ಪಾವತಿಸಬೇಕು. ನಂತರ ಇಲಾಖೆಯು ತುಂತುರು ನೀರಾವರಿ ಸೆಟ್‌ಗಳಿಗೆ ಅಥವಾ ರೈತರ ಹೊಲಗಳಲ್ಲಿ ಹನಿ ನೀರಾವರಿ ಅಳವಡಿಸಲು ಕಾರ್ಯಾದೇಶಗಳನ್ನು ನೀಡುತ್ತದೆ. ತುಂತುರು ನೀರಾವರಿ ಸೆಟ್‌ಗಳನ್ನು ಯಶಸ್ವಿಯಾಗಿ

[30] ರೈತರ ನೋಂದಣಿ ಮತ್ತು ಏಕೀಕೃತ ಫಲಾನುಭವಿ ಮಾಹಿತಿ ವ್ಯವಸ್ಥೆ (ಫ್ರೂಟ್ಸ್) ರಾಜ್ಯದ ಇ-ಆಡಳಿತ ಇಲಾಖೆಯಿಂದ ಅಭಿವೃದ್ಧಿಪಡಿಸಲಾದ ವ್ಯವಸ್ಥೆಯಾಗಿದ್ದು, ಇದರಲ್ಲಿ ರೈತರು ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯಲು ನೋಂದಾಯಿಸಿಕೊಳ್ಳಬೇಕು

ಪೂರೈಸಿದ ನಂತರ ಅಥವಾ ರೈತರ ಹೊಲಗಳಲ್ಲಿ ಹನಿ ನೀರಾವರಿ ಅಳವಡಿಕೆ ಪೂರ್ಣಗೊಂಡ ನಂತರ, ತಯಾರಕರು ದಾಖಲೆಗಳನ್ನು (ಇ–ವೇ ಬಿಲ್‌ಗಳು, ಇನ್‌ವಾಯ್ಸ್‌ಗಳು, ರೈತರ ತೃಪ್ತಿ ಪ್ರಮಾಣಪತ್ರ, ರೈತರ ತರಬೇತಿ ಪ್ರಮಾಣಪತ್ರಗಳು) ಸಂಬಂಧಿಸಿದ ಇಲಾಖೆಗೆ ಸಲ್ಲಿಸುತ್ತಾರೆ ಮತ್ತು ಇಲಾಖೆಯು ದಾಖಲೆಗಳನ್ನು ಪರಿಶೀಲಿಸಿ ಉತ್ಪಾದಕರಿಗೆ ಉಳಿದ ಮೊತ್ತವನ್ನು (ಶೇಕಡಾ 90)[31] ಪಾವತಿ ಮಾಡುತ್ತಾರೆ.

ಫಲಾನುಭವಿಗಳ ಆಯ್ಕೆ ಮತ್ತು ದಾಖಲೆಗಳ ನಿರ್ವಹಣೆಯ ಮೇಲಿನ ಲೆಕ್ಕಪರಿಶೋಧನಾ ಅವಲೋಕನಗಳನ್ನು ಕೆಳಗೆ ನೀಡಲಾಗಿದೆ:

### *2.2.9.1.1* ಕೃಷಿ ಇಲಾಖೆ – ತಂತ್ರಾಂಶ ನ್ಯೂನತೆಗಳು

ಕೃಷಿ ಇಲಾಖೆಯಲ್ಲಿ ನೀಡಲಾದ ನಿರ್ದೇಶನಗಳ ಪ್ರಕಾರ, ಕಾರ್ಯಕ್ರಮದಡಿಯಲ್ಲಿ ಅರ್ಜಿಗಳನ್ನು ಪ್ರತಿ ಹೋಬಳಿಗಳಲ್ಲಿನ (ತಾಲ್ಲೂಕಿನ ಉಪಘಟಕ) ರೈತ ಸಂಪರ್ಕ ಕೇಂದ್ರಗಳಲ್ಲಿ (ಆರ್‌ಎಸ್‌ಕೆ) ಸ್ವೀಕರಿಸಬೇಕು ಮತ್ತು ರಿಜಿಸ್ಟರ್‌ನಲ್ಲಿ ಜೇಷ್ಠತೆಯ ಆಧಾರದ ಮೇಲೆ (ದಿನಾಂಕ ಅಥವಾ ನೋಂದಣಿಯ ಕ್ರಮ) ನಮೂದಿಸಬೇಕು. ಅರ್ಜಿಗಳನ್ನು ಕೆ–ಕಿಸಾನ್ ಪೋರ್ಟಲ್‌ನಲ್ಲಿ ನಮೂದಿಸಬೇಕು. ಲೆಕ್ಕಪರಿಶೋಧನೆಯು ಕೆಳಗಿನ ಅಂಶಗಳನ್ನು ಗಮನಿಸಿತು.

(1) ಆಧಾರ್‌ಗೆ ಲಿಂಕ್ ಮಾಡಲಾದ ರೈತರ ಗುರುತಿನ ಸಂಖ್ಯೆಗಳಿಗೆ (ಎಫ್‌ಐಡಿ)[32] ಲಿಂಕ್ ಮಾಡುವ ಮೂಲಕ ಕಾರ್ಯಕ್ರಮದ ನೋಂದಣಿ ಮತ್ತು ಅನುಷ್ಠಾನದಲ್ಲಿ ಹೆಚ್ಚು ಅಗತ್ಯವಿರುವ ಪಾರದರ್ಶಕತೆಯನ್ನು ಕೆ–ಕಿಸಾನ್ ತಂದಿತು. ಆದರೆ, ಕೆ–ಕಿಸಾನ್ ಪೋರ್ಟಲ್‌ನಲ್ಲಿನ ನ್ಯೂನತೆಯಿಂದಾಗಿ ಫಲಾನುಭವಿಗಳ ಆಯ್ಕೆಯು ನೋಂದಣಿಯ ಕಾಲಾನುಕ್ರಮದ ದಿನಾಂಕವನ್ನು ಆಧರಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸಹಾಯಕ ನಿರ್ದೇಶಕರ ಲಾಗಿನ್ ನಲ್ಲಿ, ಆಯ್ಕೆಗಾಗಿ ಅರ್ಜಿಗಳು ಫಲಾನುಭವಿಗಳ ನೋಂದಣಿಯ ಕಾಲಾನುಕ್ರಮದಲ್ಲಿ (ಅವರಿಗೆ) ಲಭ್ಯವಿರದಿದ್ದುದು ನ್ಯೂನತೆಯಾಗಿತ್ತು. ಸಹಾಯಕ ನಿರ್ದೇಶಕರು ಕೆ–ಕಿಸಾನ್ ಪೋರ್ಟಲ್‌ನಲ್ಲಿ ಕಾಣಿಸಿಕೊಂಡ ಕ್ರಮದಲ್ಲಿ ಆಯ್ಕೆ ಮಾಡಬೇಕಾಗಿರುವುದರಿಂದ, ಫಲಾನುಭವಿಯ ನೋಂದಣಿ ದಿನಾಂಕದ ಆಧಾರದ ಮೇಲೆ ಜೇಷ್ಠತೆಯನ್ನು ಕಾಯ್ದುಕೊಳ್ಳಲಾಗಿದೆ ಎಂಬ ಭರವಸೆಯನ್ನು ಲೆಕ್ಕಪರಿಶೋಧನೆಯು ಪಡೆಯಲು ಸಾಧ್ಯವಾಗಲಿಲ್ಲ.

ಪರೀಕ್ಷಾ–ತನಿಖೆ ನಡೆಇಸದ 12ರ ಪೈಕಿ ಎಂಟು[33] ತಾಲ್ಲೂಕುಗಳಲ್ಲಿ, ಅರ್ಜಿ ಸ್ವೀಕೃತಿ ರಿಜಿಸ್ಟರ್‌ಗಳನ್ನು ನಿರ್ವಹಿಸಿರಲಿಲ್ಲ ಮತ್ತು ಅವುಗಳಲ್ಲಿ ದಿನಾಂಕಗಳನ್ನು ಸಹ ದಾಖಲಿಸಿರಲಿಲ್ಲ ಎಂಬುದನ್ನೂ ಲೆಕ್ಕಪರಿಶೋಧನೆಯು ಗಮನಿಸಿತು. ಅರ್ಜಿಗಳಲ್ಲಿ ಸ್ವೀಕೃತಿಯ ದಿನಾಂಕಗಳನ್ನು ದಾಖಲಿಸಿರಲಿಲ್ಲ. ವಿಶಿಷ್ಟ ವಹಿವಾಟಿನ ಉಲ್ಲೇಖ ಸಂಖ್ಯೆಗಳ ವಿವರಗಳನ್ನು ನಮೂದಿಸದ ಕಾರಣ ರಿಜಿಸ್ಟರ್‌ಗಳನ್ನು ಇಂದೀಕರಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

---

[31] ಗುಜರಾತ್ ಗ್ರೀನ್ ರೆವಲ್ಯಾಷನ್ ಕಂಪನಿಯು ನಿಗದಿಪಡಿಸಲಾಗಿದ್ದ ದರಗಳನ್ನು ಕರ್ನಾಟಕ ಸರ್ಕಾರವು ಸೂಕ್ಷ್ಮ–ನೀರಾವರಿಯ ವಿವಿಧ ಘಟಕಗಳಿಗೆ ಹಾಗು ಪಿಡಿಎಂಸಿ ಕಾರ್ಯಕ್ರಮದ ನಿಯತಕಾಲಿಕ ಪರಿಷ್ಕರಣೆಗಳ ಅನುಷ್ಠಾನಕ್ಕಾಗಿ ಅಳವಡಿಸಿಕೊಂಡಿತ್ತು (ನವೆಂಬರ್ 2014). ವಿವಿಧ ಪ್ರದೇಶಗಳಿಗೆ ಒಟ್ಟು ಸೂಚಕ ವೆಚ್ಚ ಹಾಗು ಬೆಳೆಗಳ ಅಂತರವನ್ನು ಕಾರ್ಯಾಚರಣೆಯ ಮಾರ್ಗಸೂಚಿಗಳಲ್ಲಿ ನೀಡಲಾಗಿತ್ತು ಮತ್ತು ಕಾರ್ಯಕ್ರಮದ ಸಹಾಯಧನವನ್ನು ಸೂಚಕ ವೆಚ್ಚಕ್ಕೆ ಸೀಮಿತಗೊಳಿಸಲಾಗಿತ್ತು.

[32] ರಾಜ್ಯದ ರೈತರು ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯಲು ರಾಜ್ಯದ ಇ–ಆಡಳಿತ ಇಲಾಖೆಯು ಅಭಿವೃದ್ಧಿಪಡಿಸಿದ ರೈತ ನೋಂದಣಿ ಮತ್ತು ಏಕೀಕೃತ ಫಲಾನುಭವಿ ಮಾಹಿತಿ ವ್ಯವಸ್ಥೆ (ಫ್ರೂಟ್ಸ್) ಅಡಿಯಲ್ಲಿ ನೋಂದಾಯಿಸಿಕೊಳ್ಳಬೇಕು.

[33] (1) ಯರಗಟ್ಟಿ ಆರ್‌ಎಸ್‌ಕೆ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ (2) ಕತಿ ಆರ್‌ಎಸ್‌ಕೆ, ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆ (3) ಬಾಗೇಪಲ್ಲಿ ಆರ್‌ಎಸ್‌ಕೆ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ; (4) ಗೌರಿಬಿದನೂರು ಆರ್‌ಎಸ್‌ಕೆ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ (5) ಆಳಂದ ಆರ್‌ಎಸ್‌ಕೆ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ (6) ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ (7) ಬಬಲೇಶ್ವರ ಆರ್‌ಎಸ್‌ಕೆ, ವಿಜಯಪುರ ತಾಲ್ಲೂಕು, ವಿಜಯಪುರ ಜಿಲ್ಲೆ (8) ಸಿಂಧಗಿ ಆರ್‌ಎಸ್‌ಕೆ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ.

ಆಯ್ಕೆ ಪ್ರಕ್ರಿಯೆಯಲ್ಲಿನ ನ್ಯೂನತೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸರ್ಕಾರವು ತಿಳಿಸಿತು (ಜೂನ್ 2022).

(2) ಪರೀಕ್ಷೆ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಕೆ–ಕಿಸಾನ್‌ನಲ್ಲಿ ಇತರ ನ್ಯೂನತೆಗಳನ್ನು ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಇವುಗಳಲ್ಲಿ ಕಾರಣಗಳನ್ನು ನೀಡದೆ ಕೆ–ಕಿಸಾನ್‌ನಲ್ಲಿ 'ಬಾಕಿ ಉಳಿದಿವೆ'[34] ಹಂತದ ಅರ್ಜಿಗಳನ್ನು[35] ಮತ್ತು 'ತಪಾಸಣೆ ಪೂರ್ಣಗೊಂಡ ನಂತರದ' ಹಂತದಿಂದ 'ಅರ್ಜಿ ಸ್ವೀಕಾರ' ಹಂತಕ್ಕೆ (ಆರಂಭಿಕ ಹಂತ) ಅರ್ಜಿಗಳನ್ನು ಹಿಂತಿರುಗಿಸಿರುವ ಪ್ರಕರಣಗಳು ಸೇರಿದ್ದವು. ಕೆ–ಕಿಸಾನ್ ಪೋರ್ಟಲ್‌ನಲ್ಲಿ ಕಾರಣಗಳನ್ನು ನಿರ್ವಹಿಸಲು ಜಿಲ್ಲಾ ಮುಖ್ಯಸ್ಥರಿಗೆ ಸೂಚನೆಗಳನ್ನು ನೀಡಲಾಗುವುದು ಎಂದು ಸರ್ಕಾರವು ತಿಳಿಸಿತು (ಜೂನ್ 2022).

(3) 2020–21ರ[36] ಕೆ–ಕಿಸಾನ್ ದತ್ತಸಂಚಯದ ವಿಶ್ಲೇಷಣೆಯು ಅಂತಿಮ ಬಿಲ್‌ಗಳನ್ನು ರಚಿಸಲಾದ 2,21,513 ದಾಖಲೆಗಳಲ್ಲಿ, 11,678 ನಮೂದುಗಳು ದತ್ತ ಸಂಚಯದ 'ಚಲನ್ ದಿನಾಂಕ' ದಲ್ಲಿ ಶೂನ್ಯ/ಖಾಲಿ/ತಪ್ಪಾದ ದಿನಾಂಕಗಳನ್ನು ಹೊಂದಿದ್ದವು ಎಂದು ತೋರಿಸಿತು. 21 ಪ್ರಕರಣಗಳಲ್ಲಿ, ಅರ್ಜಿಯ ದಿನಾಂಕವು ಕಾರ್ಯಾದೇಶದ ದಿನಾಂಕಕ್ಕಿಂತ ಮೊದಲು ಇದ್ದರೆ, 3,361 ಪ್ರಕರಣಗಳಲ್ಲಿ ತಪಾಸಣೆಯ ದಿನಾಂಕವು ಕಾರ್ಯಾದೇಶದ ದಿನಾಂಕಕ್ಕಿಂತ ಮೊದಲು ಇದ್ದಿತು. ಇವು ತಾರ್ಕಿಕವಾಗಿ ಅಸಮಂಜಸವಾಗಿದ್ದು, ಅಪ್ಲಿಕೇಶನ್ ನಿಯಂತ್ರಣಗಳ ಅನುಪಸ್ಥಿತಿಯನ್ನು ತೋರಿಸುತ್ತದೆ. ಸಿಸ್ಟಂನಲ್ಲಿ ದತ್ತಾಂಶವನ್ನು ನಮೂದಿಸುವಾಗ ಆಗಿರುವ ಮಾನವ ದೋಷಗಳಿಗೆ ಸರ್ಕಾರವು ಇದನ್ನು ಅಧ್ಯಾರೋಪಿಸಿತು (ಜೂನ್ 2022). ಕೆ–ಕಿಸಾನ್ ಪೋರ್ಟಲ್‌ನ ಅಪ್ಲಿಕೇಶನ್ ನಿಯಂತ್ರಣಗಳಲ್ಲಿ ನ್ಯೂನತೆಗಳಿದ್ದುದು ಅಂತಹ ನಮೂದುಗಳಿಗೆ ಕಾರಣವಾಯಿತು ಎಂಬುದು ವಾಸ್ತವಾಂಶವಾಗಿದೆ.

(4) ಕೃಷಿ ಇಲಾಖೆಯ ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಪರಿಶೀಲಿಸಿದ 305 ಅರ್ಜಿಗಳಲ್ಲಿ, 14 ಪ್ರಕರಣಗಳಲ್ಲಿ ಜಾತಿ ಪ್ರಮಾಣ ಪತ್ರಗಳಿರಲಿಲ್ಲ (10 ಪರಿಶಿಷ್ಟ ಜಾತಿ, 4 ಪರಿಶಿಷ್ಟ ಪಂಗಡ), 26 ಹನಿ ನೀರಾವರಿ ಪ್ರಕರಣಗಳಲ್ಲಿ ನಿರಾಕ್ಷೇಪಣಾ ಪ್ರಮಾಣಪತ್ರಗಳಿರಲಿಲ್ಲ[37], 37 ಪ್ರಕರಣಗಳಲ್ಲಿ ಜಲಮೂಲ ಪ್ರಮಾಣ ಪತ್ರಗಳಿರಲಿಲ್ಲ ಮತ್ತು 22 ಪ್ರಕರಣಗಳಲ್ಲಿ ರೈತರ ಸಂತೃಪ್ತಿ ಪ್ರಮಾಣ ಪತ್ರಗಳಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಅಪೂರ್ಣ ದಾಖಲೆಗಳೊಂದಿಗೆ ಕಾರ್ಯಕ್ರಮದ ಪ್ರಯೋಜನಗಳನ್ನು ವಿಸ್ತರಿಸುವುದು ಅಕ್ರಮವಾಗಿತ್ತು. ಉಳಿದ ಅರ್ಜಿಗಳು ಅಗತ್ಯ ದಾಖಲೆಗಳನ್ನು ಹೊಂದಿದ್ದವು. ಈ ವಿಷಯವನ್ನು ಪರಿಶೀಲಿಸಲಾಗುವುದು ಮತ್ತು ಅನುಸರಣೆಯನ್ನು ಒದಗಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಜೂನ್ 2022).

#### *2.2.9.1.2* ತೋಟಗಾರಿಕೆ ಇಲಾಖೆ

2018–19ರಿಂದ, ಹಸಿರು ವ್ಯವಸ್ಥೆಯನ್ನು ಇಲಾಖೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. 2018–21ರಲ್ಲಿ ನೋಂದಾಯಿಸಲಾದ 1,99,812 ಅರ್ಜಿಗಳ ಪೈಕಿ 16,681 ಅರ್ಜಿಗಳು (ಶೇಕಡಾ 8) ಬಾಕಿ ಉಳಿದಿದ್ದವು, (ಮಾರ್ಚ್ 2022) ಅವುಗಳಲ್ಲಿ 14,062 ಅರ್ಜಿಗಳು (ಶೇಕಡಾ 84) ಇಲಾಖೆಯಿಂದ ಪೂರ್ವ ತಪಾಸಣೆ ಮತ್ತು ನಂತರದ ತಪಾಸಣೆ ನಡೆಸದ ಕಾರಣ ಹಾಗೂ 2018–19ರ 944 ಅರ್ಜಿಗಳಿದ್ದವು. ನೋಂದಾಯಿತ ಅರ್ಜಿಗಳ ಸಂಖ್ಯೆ, ನೀಡಿದ ಕಾರ್ಯಾದೇಶಗಳು, ತಿರಸ್ಕರಿಸಿದ ಪ್ರಕರಣಗಳನ್ನು ಪರಿಗಣಿಸಿ

[34] ಇದು ಕೆ–ಕಿಸಾನ್ ಪೋರ್ಟಲ್‌ನಲ್ಲಿ ಒಂದು ಹಂತವಾಗಿದ್ದು, ತಮ್ಮ ಪಾಲನ್ನು ಪಾವತಿಸಲು ಮುಂದೆ ಬರದ ಫಲಾನುಭವಿಗಳ ಅರ್ಜಿಗಳು ಅಥವಾ ಅರ್ಜಿ ಪ್ರಕ್ರಿಯೆಯಲ್ಲಿ ಜಾತಿ ಪ್ರಮಾಣಪತ್ರದ ವಿವರಗಳನ್ನು ಲಿಂಕ್ ಮಾಡದ ಪ್ರಕರಣಗಳನ್ನು ಸ್ಥಳಾಂತರಿಸಲಾಗುತ್ತದೆ.

[35] 2019–21ಕ್ಕೆ ಬೆಳಗಾವಿಯಲ್ಲಿ 5,280 ಮತ್ತು ಕಲಬುರಗಿಯಲ್ಲಿ 13,818

[36] ಕೆ–ಕಿಸಾನ್‌ನಿಂದ 2019–20ಕ್ಕೆ ಸಂಬಂಧಿಸಿದಂತೆ ದತ್ತಾಂಶ ಲಭ್ಯವಿಲ್ಲ/ಒದಗಿಸಿಲ್ಲ.

[37] ಯೋಜನೆಯ ಅಡಿಯಲ್ಲಿ ಬೇರೆ ಇಲಾಖೆಗಳಿಂದ ಇದೇ ರೀತಿಯ ಪ್ರಯೋಜನೆಗಳನ್ನು ಪಡೆದಿಲ್ಲವೆಂದು.

(ಲೆಕ್ಕಪರಿಶೋಧನೆ ಮೂಲಕ) 30,900 ಅರ್ಜಿಗಳು ಬಾಕಿ ಇರುವುದನ್ನು ತೋರಿಸಿತು ಎಂಬುದನ್ನು ಇಲ್ಲಿ ಉಲ್ಲೇಖಿಸಬೇಕು. ಹೀಗೆ, ಹಸಿರು ವ್ಯವಸ್ಥೆಯಲ್ಲಿ 14,219 ಬಾಕಿಯಿರುವ ಅರ್ಜಿಗಳ ವ್ಯತ್ಯಾಸವಿದ್ದು, ಅದನ್ನು ಇನ್ನೂ ಸಮನ್ವಯಗೊಳಿಸಿರಲಿಲ್ಲ. ಈ ಫಲಾನುಭವಿಗಳು ಯೋಜನೆಯಡಿ ಸೌಲಭ್ಯಗಳಿಂದ ವಂಚಿತರಾಗುತ್ತಾರೆ.

ತಂತ್ರಾಂಶದ ಇಂದೀಕರಣವನ್ನು ಮಾಡಲಾಗುವುದು ಮತ್ತು ಎಲ್ಲಾ ಹಂತಗಳಲ್ಲಿ ಬಾಕಿ ಉಳಿದಿರುವ ಅರ್ಜಿಗಳನ್ನು ಮೇಲ್ವಿಚಾರಣೆ ಮಾಡಿ ಇತ್ಯರ್ಥಗೊಳಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಜೂನ್ 2022).

*ಶಿಫಾರಸು–4: ಫಲಾನುಭವಿಗಳ ಆಯ್ಕೆಯು ಜೇಷ್ಠತೆಗೆ ಅನುಗುಣವಾಗಿದೆ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಕೃಷಿ ಇಲಾಖೆಯು ಕಿಸಾನ್ ತಂತ್ರಾಂಶಕ್ಕೆ ಸೂಕ್ತ ಬದಲಾವಣೆಗಳನ್ನು ಮಾಡಬೇಕು. ಸ್ವೀಕರಿಸಿದ ಎಲ್ಲಾ ಅರ್ಜಿಗಳು ಮತ್ತು ಅರ್ಜಿಗಳ ಸ್ಥಿತಿಯನ್ನು ರಿಜಿಸ್ಟರ್‌ಗಳು ಮತ್ತು ತಂತ್ರಾಂಶ ವ್ಯವಸ್ಥೆಯಲ್ಲಿ ಎರಡೂ ಇಲಾಖೆಗಳಲ್ಲಿ ಸಮಯಕ್ಕೆ ಸರಿಯಾಗಿ ಇಂದೀಕರಿಸಬೇಕು.*

### 2.2.10 ಅನುಷ್ಠಾನದಲ್ಲಿ ತಯಾರಕರ ಪಾತ್ರ

ಕಾರ್ಯಕ್ರಮದ ಅನುಷ್ಠಾನದಲ್ಲಿ ಸೂಕ್ಷ್ಮ ನೀರಾವರಿ ತಯಾರಕರ ಪಾತ್ರವು ನಿರ್ಣಾಯಕವಾಗಿತ್ತು. ಕಾರ್ಯಕ್ರಮದಡಿ ಫಲಾನುಭವಿಗಳಿಗೆ ತುಂತುರು/ಹನಿ ನೀರಾವರಿ ವ್ಯವಸ್ಥೆಗಳನ್ನು ಪೂರೈಸಬೇಕು. ಭಾರತ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಹನಿ/ತುಂತುರು ವ್ಯವಸ್ಥೆಗಳನ್ನು ಸ್ಥಾಪಿಸಲು ಮತ್ತು ರೈತರ ಕ್ಷೇತ್ರದಲ್ಲಿ ಮಾರಾಟ ನಂತರದ ಸೇವೆ ಸಲ್ಲಿಸಲು ನೋಡಲ್ ಇಲಾಖೆ (ತೋಟಗಾರಿಕೆ) ತಯಾರಕರ ನೋಂದಣಿಗಾಗಿ ಅರ್ಜಿಗಳನ್ನು ಆಹ್ವಾನಿಸಿತು. ತಯಾರಕರು ಅಗತ್ಯವಿರುವ ಶುಲ್ಕವನ್ನು ಪಾವತಿಸುವ ಮೂಲಕ ವರ್ಷವಿಡೀ ನೋಂದಣಿಗಾಗಿ ಅರ್ಜಿಗಳನ್ನು ಸಲ್ಲಿಸಬಹುದಿತ್ತು. ಸಲ್ಲಿಸಿರುವ ಅರ್ಜಿಗಳನ್ನು ಪ್ರತಿ ಎರಡು ತಿಂಗಳಿಗೊಮ್ಮೆ ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯು ಪರಿಶೀಲನೆ ನಡೆಸಿ ಅನುಮೋದನೆಗಾಗಿ ಸರಕಾರಕ್ಕೆ ಶಿಫಾರಸು ಮಾಡುತ್ತದೆ. ಅನುಮೋದನೆಯ ನಂತರ, ನೋಂದಾಯಿತ ತಯಾರಕರೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳಲಾಗುತ್ತದೆ.

ತಯಾರಕರು ಈ ಕೆಳಗಿನವುಗಳಲ್ಲಿ ತಮ್ಮ ಬಾಧ್ಯತೆಗಳನ್ನು ಪೂರೈಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು:

(ಎ) ಅನುಷ್ಠಾನಕ್ಕೆ ಮೊದಲು ಪ್ರತಿ ರೈತರಿಗೆ ವ್ಯವಸ್ಥೆಯ ದಕ್ಷತೆಯ ವಿವರಗಳೊಂದಿಗೆ ತಾಂತ್ರಿಕ ಯೋಜನೆಯನ್ನು ಸಿದ್ಧಪಡಿಸುವುದು,

(ಬಿ) ಸ್ಥಳೀಯ ಭಾಷೆಯಲ್ಲಿ ಕೈಪಿಡಿಗಳನ್ನು ಒದಗಿಸುವುದು,

(ಸಿ) ಟೋಲ್–ಫ್ರೀ ಸಂಖ್ಯೆಯನ್ನು ಒದಗಿಸುವುದು,

(ಡಿ) ಬಿಐಎಸ್/ಅನುಮೋದಿತ ಮುದ್ರೆಗಳೊಂದಿಗೆ ಸಾಮಗ್ರಿಗಳ ಪೂರೈಕೆ, ಮತ್ತು

(ಇ) ಕಾರ್ಯಕ್ರಮದ ಜಾಗೃತಿಗಾಗಿ ವಿಸ್ತರಣಾ ಅಭಿಯಾನಗಳನ್ನು ನಡೆಸುವುದು.

ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿನ ಅವಲೋಕನದ ವಿವರಗಳನ್ನು **ಅನುಬಂಧ–2.4**ರಲ್ಲಿ ನೀಡಲಾಗಿದೆ.

ತಾಂತ್ರಿಕ ಯೋಜನೆಯನ್ನು ತಯಾರಿಸದ ಪರಿಣಾಮವಾಗಿ ಅಳವಡಿಸಲಾದ ಸೂಕ್ಷ್ಮ ನೀರಾವರಿ ವ್ಯವಸ್ಥೆಯ ದಕ್ಷತೆಯನ್ನು ಪರಿಶೀಲಿಸಲಾಗಲಿಲ್ಲ. ಅಲ್ಲದೆ, ಸ್ಥಳೀಯ ಭಾಷೆಯಲ್ಲಿ ಕೈಪಿಡಿಗಳನ್ನು ಮತ್ತು ಟೋಲ್–ಫ್ರೀ ಸಂಖ್ಯೆಯನ್ನು ಒದಗಿಸದಿರುವುದು ಫಲಾನುಭವಿಗಳಿಗೆ ಸೂಕ್ಷ್ಮ ನೀರಾವರಿ ವ್ಯವಸ್ಥೆಯ ಬಳಕೆಯ ಸುಲಭತೆಯ ಮತ್ತು ಸೇವಾ ಬೆಂಬಲದ ಮೇಲೆ ಪರಿಣಾಮ ಬೀರುತ್ತದೆ. ಇದಲ್ಲದೆ, ಬಿಐಎಸ್ ಘಟಕಗಳ

ಪೂರೈಕೆಯನ್ನು ಖಚಿತಪಡಿಸಿಕೊಳ್ಳದಿರುವುದು ಸೂಕ್ಷ್ಮ ನೀರಾವರಿ ಘಟಕಗಳ ಜೀವಿತಾವಧಿಯನ್ನು ಕಡಿಮೆ ಮಾಡುತ್ತದೆ.

ಇಲಾಖೆಯು ಸಹ ಇವುಗಳನ್ನು ಮೇಲ್ವಿಚಾರಣಾ ಸಮಿತಿಗಳ ಗಮನಕ್ಕೆ ತರಲಿಲ್ಲ ಮತ್ತು ಬಾಧ್ಯತೆಗಳನ್ನು ಅನುಸರಿಸದಿದ್ದಕ್ಕಾಗಿ ದಂಡವನ್ನು ವಿಧಿಸಲು ಕ್ರಮ ಕೈಗೊಂಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಪ್ರಸ್ತುತ ವರ್ಷದಲ್ಲಿ ಉತ್ಪಾದಕರಿಂದ ಬಾಧ್ಯತೆಗಳ ಮೇಲಿನ ಕ್ರಮವನ್ನು ಪರಿಹರಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಜೂನ್ 2022).

***ಶಿಫಾರಸು-5: ಕಾರ್ಯಕ್ರಮದ ಅಡಿಯಲ್ಲಿ ತಾಂತ್ರಿಕ ಯೋಜನೆಗಳನ್ನು ತಯಾರಿಸುವುದು, ಘಟಕಗಳ ಮೇಲೆ ಅಗತ್ಯವಿರುವ ಬಿಐಎಸ್ ಗುರುತುಗಳನ್ನು ಹಾಕುವುದು, ದೇಶೀಯ ಭಾಷೆಯಲ್ಲಿ ಕೈಪಿಡಿಗಳನ್ನು ಒದಗಿಸುವುದು, ವಿಸ್ತರಣಾ ಅಭಿಯಾನಗಳನ್ನು ನಡೆಸುವುದು ಮತ್ತು ಸೇವಾ ಕರೆಗಳಿಗೆ ಟೋಲ್-ಫ್ರೀ ಸಂಖ್ಯೆಯನ್ನು ಒದಗಿಸುವ ತಮ್ಮ ಜವಾಬ್ದಾರಿಗಳನ್ನು ಅನುಸರಿಸಲು ತಯಾರಕರಿಗೆ ನಿರ್ದೇಶಿಸಬೇಕು.***

## 2.2.11 ಅನುಷ್ಠಾನದಲ್ಲಿ ಇಲಾಖೆಗಳ ಪಾತ್ರ

ಕಾರ್ಯಕ್ರಮದ ಅನುಷ್ಠಾನದಲ್ಲಿ ಅನುಷ್ಠಾನ ಇಲಾಖೆಗಳ ಪಾತ್ರ ನಿರ್ಣಾಯಕವಾಗಿರುತ್ತದೆ. ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯಿಂದ (ಡಿಎಲ್ಐಸಿ) ಮೇಲ್ವಿಚಾರಣೆಯು ಸಮರ್ಪಕವಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆ, ಗುಣಮಟ್ಟ ನಿಯಂತ್ರಣ ಕಾರ್ಯವಿಧಾನ, ಮೂರನೇ ವ್ಯಕ್ತಿಯ ತಪಾಸಣೆ ಮತ್ತು ಇಲಾಖಾ ತಪಾಸಣೆಗಳಲ್ಲಿ ನ್ಯೂನತೆಗಳಿದ್ದವು. ಇಲಾಖೆಗಳಲ್ಲಿ ಸಿಬ್ಬಂದಿಯ ಕೊರತೆಯೂ ಇದ್ದಿತು. ಅವುಗಳನ್ನು ಈ ಕೆಳಗಿನ ಕಂಡಿಕೆಗಳಲ್ಲಿ ಹೊರತರಲಾಗಿದೆ:

### 2.2.11.1 ಸಮಿತಿಗಳ ಕಾರ್ಯ ನಿರ್ವಹಣೆ

ಕಾರ್ಯಾಚರಣೆಯ ಮಾರ್ಗಸೂಚಿಗಳ ಪ್ರಕಾರ, ಸರ್ಕಾರವು (ಅಕ್ಟೋಬರ್ 2015) ರಾಜ್ಯ ಮಟ್ಟದ ಮಂಜೂರಾತಿ ಸಮಿತಿ (ಎಸ್ಎಲ್ಎಸ್ಸಿ), ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಅಂತರ ಇಲಾಖೆ ಕಾರ್ಯಕಾರಿ ಸಮಿತಿ (ಐಡಿಡಬ್ಲ್ಯೂಜಿ) ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತು ಇಲಾಖೆಗಳ ಜಿಲ್ಲಾ ಮುಖ್ಯಸ್ಥರನ್ನು ಒಳಗೊಂಡ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಗಳನ್ನು (ಡಿಎಲ್ಐಸಿ) ರಚಿಸಿತು.

ಕಾರ್ಯನಿರ್ವಹಣಾ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿರುವಂತೆ ವರ್ಷದಲ್ಲಿ ಮೂರು ಬಾರಿ ಸಭೆ ಸೇರುವುದಕ್ಕೆ ಪ್ರತಿಯಾಗಿ ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಒಮ್ಮೆ ಮಾತ್ರ ಸಭೆ ಸೇರಿತ್ತು. ವಾರ್ಷಿಕ ಕಾರ್ಯ ಯೋಜನೆಯನ್ನು ಮಾರ್ಚ್‌ನಲ್ಲಿ ಅನುಮೋದಿಸುವುದಕ್ಕೆ (ಮಾರ್ಗಸೂಚಿಗಳ ಪ್ರಕಾರ) ಪ್ರತಿಯಾಗಿ ಮೇ-ಆಗಸ್ಟ್‌ನಲ್ಲಿ[38] ಅನುಮೋದಿಸಲಾಗಿತ್ತು. ನಿರ್ಧಾರ ತೆಗೆದುಕೊಳ್ಳಲು ಹಿಂದಿನ ವರ್ಷದ ನಿಖರವಾದ ದತ್ತಾಂಶವು ಲಭ್ಯವಿರುತ್ತದೆಯಾದ್ದರಿಂದ ಮಾರ್ಚ್‌ನ ನಂತರ ಕಾರ್ಯ ಯೋಜನೆಗಳನ್ನು ಅನುಮೋದಿಸಲಾಯಿತು ಎಂದು ಸರ್ಕಾರವು ತಿಳಿಸಿತು (ಜೂನ್ 2022).

ಎಲ್ಲಾ ವರ್ಷಗಳಲ್ಲಿ (2016-17ರಿಂದ 2020-21) ಪರೀಕ್ಷಾ-ತನಿಖೆ ನಡೆಸಿದ ಆರು ಜಿಲ್ಲೆಗಳ ಪೈಕಿ ಐದು ಜಿಲ್ಲೆಗಳಲ್ಲಿ ಡಿಎಲ್ಐಸಿ ಸಭೆಗಳು (ಜಿಲ್ಲಾ ಮಟ್ಟದಲ್ಲಿ) ನಡೆದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಲಬುರಗಿ ಜಿಲ್ಲೆಯಲ್ಲಿ ಸಭೆಗಳ ನಡಾವಳಿಯನ್ನು ದಾಖಲಿಸಿರಲಿಲ್ಲ. ಮೈಸೂರು ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ಅನುಷ್ಠಾನದ ಸ್ಥಿತಿಗತಿಗಳ ಬಗ್ಗೆ ಮಾತ್ರ ಚರ್ಚಿಸಲಾಗಿದ್ದು, ಕೃಷಿ ಇಲಾಖೆಯ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿರಲಿಲ್ಲ. ಪರೀಕ್ಷಾ-ತನಿಖೆ ನಡೆಸಿದ ಇತರ ನಾಲ್ಕು ಜಿಲ್ಲೆಗಳಲ್ಲಿ ಕೃಷಿ

[38] ಮೇ (2017-18), ಜೂನ್ (2016-17, 2018-19, 2019-20) ಮತ್ತು ಆಗಸ್ಟ್ (2020-21).

ಮತ್ತು ತೋಟಗಾರಿಕೆ ಇಲಾಖೆಗಳು ಮಾಡಿದ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಡಿಎಲ್‌ಐಸಿ ಚರ್ಚಿಸಿತ್ತು ಆದರೆ ಕೇಂದ್ರೀಕೃತ ಪ್ರದೇಶಗಳು ಮತ್ತು ಕಾರ್ಯಕ್ರಮದ ಅನುಷ್ಠಾನದ ಇತರ ಅಂಶಗಳನ್ನು ಚರ್ಚಿಸಿರಲಿಲ್ಲ. ರೇಷ್ಮೆ ಇಲಾಖೆಯು ಒಂದು ಅನುಷ್ಠಾನ ಇಲಾಖೆಯಾಗಿದ್ದರೂ ಸಹ ಡಿಎಲ್‌ಐಸಿಯಲ್ಲಿ ಆ ಇಲಾಖೆಯಿಂದ ಪ್ರತಿನಿಧಿ ಇಲ್ಲದಿರುವುದು ಕಂಡುಬಂದಿತು. ಡಿಎಲ್‌ಐಸಿ ಸಭೆಗಳನ್ನು ನಿಯಮಿತವಾಗಿ ನಡೆಸುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಎಸ್‌ಎಲ್‌ಎಸ್‌ಸಿಗೆ ವರದಿ ಮಾಡಲು ನೋಡಲ್ ಇಲಾಖೆಯು (ತೋಟಗಾರಿಕೆ) ವಿಫಲವಾಗಿತ್ತು. ನಿಯಮಿತವಾಗಿ ಡಿಎಲ್‌ಐಸಿ ಸಭೆಗಳನ್ನು ನಡೆಸಲು ಸೂಚನೆಗಳನ್ನು ನೀಡಲಾಗುವುದು ಎಂದು ಸರ್ಕಾರವು ತಿಳಿಸಿತು (ಜೂನ್ 2022). ರೇಷ್ಮೆ ಇಲಾಖೆಯ ಉಪನಿರ್ದೇಶಕರನ್ನು ಡಿಎಲ್‌ಐಸಿ ಸದಸ್ಯರನ್ನಾಗಿ ಸೇರಿಸಲಾಗುವುದು ಎಂದೂ ಸಹ ತಿಳಿಸಲಾಯಿತು.

### 2.2.11.2 ಗುಣಮಟ್ಟ ನಿಯಂತ್ರಣ ಪರೀಕ್ಷೆಗಳು ಪರ್ಯಾಪ್ತವಾಗಿರಲಿಲ್ಲ

ಕಾರ್ಯನಿರ್ವಹಣಾ ಮಾರ್ಗಸೂಚಿಗಳು 2017ರ ಕಂಡಿಕೆ 17.2ರ ಪ್ರಕಾರ, ಕ್ಷೇತ್ರ ಪರಿಶೀಲನೆಗಾಗಿ ರಾಜ್ಯ ಮಟ್ಟದ ಮಂಜೂರಾತಿ ಸಮಿತಿಯು ಜಂಟಿ ತಪಾಸಣಾ ತಂಡಗಳನ್ನು ರಚಿಸಬೇಕಾಗಿತ್ತು ಮತ್ತು ಕಾರ್ಯಕ್ರಮದಡಿಯಲ್ಲಿ ತಪಾಸಣಾ ತಂಡಗಳಿಂದ ನಿಯಮಿತವಾಗಿ ತಪಾಸಣೆಗಳು ನಡೆಯುತ್ತಿರಬೇಕು. ಎರಡು ವರ್ಷಗಳ ನಂತರ ಅಂದರೆ ಜೂನ್ 2019ರಲ್ಲಿ ರಾಜ್ಯ ಮಟ್ಟದ ಮಂಜೂರಾತಿ ಸಮಿತಿಯು ರಾಜ್ಯ ಮಟ್ಟದ ಗುಣಮಟ್ಟ ನಿಯಂತ್ರಣ ಸಮಿತಿ ಮತ್ತು ಜಿಲ್ಲಾ ಮಟ್ಟದ ಜಂಟಿ ತಪಾಸಣೆ[39] ಸಮಿತಿಗಳ ರಚನೆಗೆ ಅನುಮೋದನೆ ನೀಡಿತು. ಆಗಸ್ಟ್ 2019ರಲ್ಲಿ ರಾಜ್ಯ ಮಟ್ಟದ ಗುಣಮಟ್ಟ ನಿಯಂತ್ರಣ ಸಮಿತಿ ಮತ್ತು ಜಿಲ್ಲಾ ಮಟ್ಟದ ಜಂಟಿ ತಪಾಸಣೆ ಸಮಿತಿಗಳ ರಚನೆಗೆ ಸರ್ಕಾರವು ಆದೇಶಗಳನ್ನು ಹೊರಡಿಸಿತು. ಗುಣಮಟ್ಟದ ವಿಶ್ಲೇಷಣೆಗಾಗಿ ಜಿಲ್ಲಾ ಮಟ್ಟದ ಜಂಟಿ ತಪಾಸಣೆ ಸಮಿತಿ ಸಲ್ಲಿಸಿದ ಸೂಕ್ಷ್ಮ ನೀರಾವರಿ ಘಟಕಗಳ ಕೆಲವು ಮಾದರಿಗಳನ್ನು ರಾಜ್ಯ ಮಟ್ಟದ ಗುಣಮಟ್ಟ ನಿಯಂತ್ರಣ ಸಮಿತಿ ಯಾದೃಚ್ಛಿಕವಾಗಿ ಆಯ್ಕೆಮಾಡಿ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ಸ್/ಇಂಡಿಯನ್ ಕೌನ್ಸಿಲ್ ಫಾರ್ ಅಗ್ರಿಕಲ್ಚರಲ್ ರೀಸರ್ಚ್ ಇವುಗಳ ಮಾನ್ಯತೆ ಪಡೆದ ಪ್ರಯೋಗಾಲಯಗಳಿಗೆ ಕಳುಹಿಸಬೇಕಾಗಿತ್ತು. ಜಿಲ್ಲಾ ಮಟ್ಟದ ಜಂಟಿ ತಪಾಸಣೆ ಸಮಿತಿಯು 2016–17ರಿಂದ ಸ್ಥಾಪಿಸಲಾದ ಸೂಕ್ಷ್ಮ ನೀರಾವರಿ ಘಟಕಗಳನ್ನು ಪ್ರತಿ ಜಿಲ್ಲೆಗೆ ಕನಿಷ್ಠ 10 ಮಾದರಿಗಳನ್ನು ಸೆಳೆಯುವ ಮೂಲಕ ಪರಿಶೀಲಿಸಬೇಕಾಗಿತ್ತು, ಅದನ್ನು ಪ್ರತಿ ಜಿಲ್ಲೆಗೆ ಐದು ಮಾದರಿಗಳಿಗೆ ಇಳಿಸಲಾಯಿತು (ಡಿಸೆಂಬರ್ 2020).

4,950 ಮಾದರಿಗಳನ್ನು (ಮಾರ್ಚ್ 2019ರಿಂದ ಡಿಸೆಂಬರ್ 2021ರವರೆಗೆ) ಪರೀಕ್ಷೆಗೆ ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ಕೇವಲ 897 ಮಾದರಿಗಳನ್ನು ಮಾತ್ರ ತೆಗೆದುಕೊಂಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತೆಗೆದುಕೊಳ್ಳಲಾದ ಮಾದರಿಗಳಲ್ಲಿ, ಕೇವಲ 535 ಮಾದರಿಗಳನ್ನು ಪರೀಕ್ಷೆಗಾಗಿ ಪ್ರಯೋಗಾಲಯಗಳಿಗೆ ಕಳುಹಿಸಲಾಗಿತ್ತು ಮತ್ತು 261 ಮಾದರಿಗಳಿಗೆ ಸಂಬಂಧಿಸಿದಂತೆ ಫಲಿತಾಂಶಗಳನ್ನು ಸ್ವೀಕರಿಸಲಾಗಿತ್ತು (ಡಿಸೆಂಬರ್ 2021). ಉಳಿದ ಮಾದರಿಗಳ ಫಲಿತಾಂಶಗಳನ್ನು ನಿರೀಕ್ಷಿಸಲಾಗಿದೆ (ಮಾರ್ಚ್ 2022).

ಮಾದರಿಗಳನ್ನು ತೆಗೆದುಕೊಂಡು ಪರೀಕ್ಷಿಸಲಾಗುತ್ತಿದೆ ಮತ್ತು ಪರೀಕ್ಷೆಗೆ ಹೆಚ್ಚಿನ ವೆಚ್ಚವಾಗುವ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಪರೀಕ್ಷಾ ಪ್ರಯೋಗಾಲಯವನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಜೂನ್ 2022). ಆದರೆ, ಮಾನದಂಡಗಳ ಪ್ರಕಾರ ಅಗತ್ಯವಿದ್ದಷ್ಟು ಮಾದರಿಗಳನ್ನು ತೆಗೆದುಕೊಂಡಿರಲಿಲ್ಲ ಎಂಬುದು ವಾಸ್ತವಾಂಶವಾಗಿದೆ.

[39] ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ.

### 2.2.11.3 ಮೂರನೇ ವ್ಯಕ್ತಿಯ ತಪಾಸಣೆಗಳು ಸಾಕಷ್ಟಿರಲಿಲ್ಲ

ಕಾರ್ಯನಿರ್ವಹಣಾ ಮಾರ್ಗಸೂಚಿಗಳ ಕಂಡಿಕೆ–20.4ರ ಪ್ರಕಾರ, ರಾಜ್ಯದಿಂದ ಮಂಜೂರಾದ ಯೋಜನೆಗಳಲ್ಲಿ ಶೇಕಡಾ 25ರಷ್ಟನ್ನು ಅನುಷ್ಠಾನಗೊಳಿಸುವ ರಾಜ್ಯಗಳು ಮೂರನೇ ವ್ಯಕ್ತಿಯ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕಾಗಿ ಕಡ್ಡಾಯವಾಗಿ ನಡೆಸಬೇಕು.

2016–17ರ ಅವಧಿಗೆ ಕಾರ್ಯಕ್ರಮದ ಅನುಷ್ಠಾನದ ಮೌಲ್ಯಮಾಪನಕ್ಕಾಗಿ ಕೃಷಿ ಇಲಾಖೆಯು ವಿವಿಧ ಜಿಲ್ಲೆಗಳಿಗೆ ಮೂರು ಮೂರನೇ ವ್ಯಕ್ತಿ ತಪಸಣಾ ಏಜೆನ್ಸಿಗಳೊಂದಿಗೆ[40] (ಟಿಪಿಐ) ಒಪ್ಪಂದ ಮಾಡಿಕೊಂಡಿರುವುದನ್ನು (ಫೆಬ್ರವರಿ 2018) ಲೆಕ್ಕಪರಿಶೋಧನೆಯು ಗಮನಿಸಿತು. 2016–17ರಲ್ಲಿ 47,755 ಅನುಷ್ಠಾನಗಳನ್ನು ತಪಾಸಣೆ ಮಾಡಲಾಗಿದೆ ಎಂದು ಟಿಪಿಐ ವರದಿ ಮಾಡಿದ್ದರೆ ಮೂರು ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳು (ಬೆಳಗಾವಿ, ಚಿಕ್ಕಬಳ್ಳಾಪುರ ಮತ್ತು ಶಿವಮೊಗ್ಗ) ಲೆಕ್ಕಪರಿಶೋಧನೆಗೆ ಯಾವುದೇ ವಿವರಗಳನ್ನು ನೀಡಿಲಿಲ್ಲ ಹಾಗೂ ಮೂರು ಜಿಲ್ಲೆಗಳು (ಮೈಸೂರು, ಕಲಬುರಗಿ ಮತ್ತು ವಿಜಯಪುರ) ವಿವರವಾದ ವರದಿಗಳಿಲ್ಲದೆ ಮತ್ತು ವರದಿಗಳ ಮೇಲೆ ತೆಗೆದುಕೊಂಡ ಕ್ರಮಗಳಿಲ್ಲದೇ ಪರಿಶೀಲನೆಯ ಸಾರಾಂಶವನ್ನು ಮಾತ್ರ ಒದಗಿಸಿದ್ದವು. 2017–18ರಿಂದ 2020–21ರವರೆಗೆ ಕೃಷಿ ಇಲಾಖೆಯು ಟೆಂಡರ್ ಗಳನ್ನೂ ಆಹ್ವಾನಿಸಿರಲಿಲ್ಲ ಅಥವಾ ಮೂರನೇ ವ್ಯಕ್ತಿಯ ಏಜೆನ್ಸಿಗಳನ್ನೂ ನೇಮಿಸಿರಲಿಲ್ಲ (ಮಾರ್ಚ್ 2022).

ತೋಟಗಾರಿಕೆ ಇಲಾಖೆಯಲ್ಲಿ 2018–19ರವರೆಗಿನ ಅವಧಿಗೆ ಮೂರನೇ ವ್ಯಕ್ತಿಯ ಏಜೆನ್ಸಿಗಳನ್ನು ನೇಮಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 2019–20ರ ಅವಧಿಗೆ ಇಲಾಖೆಯು ಮೆ.ಶೋಭಾ ಟೆಕ್ನಾಲಜಿ ಸಲ್ಯೂಷನ್ಸ್, ಮೈಸೂರು, ಇವರನ್ನು ಶೇಕಡಾ 5ರಷ್ಟು ಅನುಷ್ಠಾನಗಳ ತಪಾಸಣೆ ಮಾಡಲು ಮೂರನೇ ವ್ಯಕ್ತಿ ಏಜೆನ್ಸಿಯಾಗಿ ನೇಮಿಸಿತು (ಜೂನ್ 2021). ಆದರೆ, ಅವರ ಅಂತಿಮ ವರದಿಯನ್ನು ನಿರೀಕ್ಷಿಸಲಾಗಿದೆ (ಮಾರ್ಚ್ 2022). ರೇಷ್ಮೆ ಇಲಾಖೆಗೆ ಸಂಬಂಧಿಸಿದಂತೆ, 2017–2021ರ ಅವಧಿಯಲ್ಲಿ ಮೂರನೇ ವ್ಯಕ್ತಿಯ ತಪಾಸಣೆಯನ್ನು ನಡೆಸಿರಲಿಲ್ಲ.

ಯೋಜನೆಯ ಪ್ರಭಾವದ ಮೌಲ್ಯಮಾಪನವನ್ನು ಭಾರತ ಸರ್ಕಾರದ ನೀತಿಯ ಪ್ರಕಾರ ಮೂರನೇ ವ್ಯಕ್ತಿಯಿಂದ ಮಾಡಲು ಪ್ರಸ್ತಾವಿಸಲಾಗಿದೆ ಎಂದು ಸರ್ಕಾರವು ತಿಳಿಸಿತು (ಜೂನ್ 2022). ಕಾರ್ಯಾಚರಣೆಯ ಮಾರ್ಗಸೂಚಿಗಳು ಸಮಕಾಲೀನ ಮೌಲ್ಯಮಾಪನ (ಮೂರನೇ ವ್ಯಕ್ತಿಯ ತಪಾಸಣೆ) ಮತ್ತು ಸೂಕ್ತ ಏಜೆನ್ಸಿಗಳನ್ನು ತೊಡಗಿಸಿಕೊಳ್ಳುವ ಮೂಲಕ ಮಧ್ಯಾವಧಿ/ಅಂತ್ಯಾವಧಿಯ ಮೌಲ್ಯಮಾಪನವನ್ನು (ಮೂರನೇ ವ್ಯಕಿಯ ಮೌಲ್ಯಮಾಪನ) ನಿಗದಿಪಡಿಸಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

### 2.2.11.4 ಸಾಕಷ್ಟಿಲ್ಲದ ಇಲಾಖಾ ತಪಾಸಣೆಗಳು

ಸಹಾಯಕ ನಿರ್ದೇಶಕರು, ಉಪನಿರ್ದೇಶಕರು ಮತ್ತು ಜಂಟಿ ನಿರ್ದೇಶಕರು ಆ ವರ್ಷದಲ್ಲಿ ಅನುಷ್ಠಾನ ಮಾಡಿದ ಘಟಕಗಳಲ್ಲಿ ಅನುಕ್ರಮವಾಗಿ ಶೇಕಡಾ 25, ಶೇಕಡಾ 5 ಮತ್ತು ಶೇಕಡಾ 2ರಷ್ಟು ಪರಿಶೀಲಿಸಬೇಕು ಎಂದು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಕೃಷಿ ಇಲಾಖೆಯು ಪ್ರತಿ ವರ್ಷದ ಆರಂಭದಲ್ಲಿ ಹೊರಡಿಸಿದ ಸೂಚನೆಗಳು ನಿಗದಿಪಡಿಸುತ್ತವೆ. ಆಯ್ದ ಆರು ಜಿಲ್ಲೆಗಳಲ್ಲಿ 16 ತಾಲ್ಲೂಕುಗಳು ನಡೆಸಿದ ತಪಾಸಣೆಯ ಬಗ್ಗೆ ಮಾಹಿತಿಯನ್ನು ಒದಗಿಸದಿದ್ದರೆ 17 ತಾಲ್ಲೂಕುಗಳು ಕೆಲವು ವರ್ಷಗಳಿಗೆ ಮಾತ್ರ ಮಾಹಿತಿಯನ್ನು

[40] ಮೆ.ಶ್ರೀ ಮಹಾಲಕ್ಷ್ಮಿ ಮಕ್ಕಳ ಮತ್ತು ಮಹಿಳೆಯರ ಕಲ್ಯಾಣ ಸೊಸೈಟಿ, ಮೆ.ಸಿರಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೆ.ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್ ಲರ್ನಿಂಗ್ ಅಂಡ್ ವೆಲ್‌ಫೇರ್ ಸೊಸೈಟಿ

ಒದಗಿಸಿದವು (**ಅನುಬಂಧ–2.5**). ನೀಡಿರುವ ಸೂಚನೆಗಳ ಪ್ರಕಾರ ಮಾನದಂಡಗಳಿಗೆ ಹೋಲಿಸಿದರೆ ನಡೆಸಿದ ತಪಾಸಣೆಗಳ ಸಂಖ್ಯೆಯು ಶೇಕಡಾ ಒಂದಕ್ಕಿಂತ ಕಡಿಮೆಯಿರುವುದನ್ನು ಗಮನಿಸಲಾಯಿತು.

ಇದಲ್ಲದೆ, ಕೃಷಿ ಇಲಾಖೆಯು ಮೇಲ್ವಿಚಾರಣಾ ಮತ್ತು ಮೌಲ್ಯಮಾಪನ ವಿಭಾಗವನ್ನು ಹೊಂದಿದ್ದು ಯಾದೃಚ್ಛಿಕ ತಪಾಸಣೆ ಮತ್ತು ಇಲಾಖೆಯಲ್ಲಿನ ಕಾರ್ಯಕ್ರಮಗಳ ಮೌಲ್ಯಮಾಪನ ಮಾಡುವುದು ವಿಭಾಗದ ಕರ್ತವ್ಯವಾಗಿತ್ತು. ಪರೀಕ್ಷಾ–ತನಿಖೆ ನಡೆಸಿದ ಆರು ಜಿಲ್ಲೆಗಳ ಪೈಕಿ ಒಂದರಲ್ಲಿ ಮಾತ್ರ ಶಿವಮೊಗ್ಗದಲ್ಲಿ (2020–21ರ ಅವಧಿಯಲ್ಲಿ 14 ತಪಾಸಣೆಗಳು) ಮೇಲ್ವಿಚಾರಣಾ ಮತ್ತು ಮೌಲ್ಯಮಾಪನ ವಿಭಾಗವು ತಪಾಸಣೆ ನಡೆಸಿತ್ತು ಹಾಗೂ ಇತರ ಐದು ಜಿಲ್ಲೆಗಳಾದ ಬೆಳಗಾವಿ, ಚಿಕ್ಕಬಳ್ಳಾಪುರ, ಕಲಬುರಗಿ, ಮೈಸೂರು ಮತ್ತು ವಿಜಯಪುರಗಳಲ್ಲಿ 2016–21ರ ಅವಧಿಯಲ್ಲಿ ತಪಾಸಣೆಗಳನ್ನು ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕ್ಷೇತ್ರ ಮಟ್ಟದ ಅಧಿಕಾರಿಗಳು ಹಾಗೂ ಮೇಲ್ವಿಚಾರಣಾ ಮತ್ತು ಮೌಲ್ಯಮಾಪನ ವಿಭಾಗಗಳು ನಿಗದಿಪಡಿಸಿದ ಶೇಕಡಾವಾರು ಅನುಷ್ಠಾನಗಳನ್ನು ಪರಿಶೀಲಿಸಬೇಕು ಆದರೆ ಅದನ್ನು ಹೆಚ್ಚಾಗಿ ಉಲ್ಲಂಘಿಸಲಾಗಿದೆ ಹಾಗೂ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಗಿದೆ ಎಂದು ಸರ್ಕಾರವು ತಿಳಿಸಿತು (ಜೂನ್ 2022).

### 2.2.11.5 ಅರ್ಜಿಗಳನ್ನು ಸಂಸ್ಕರಿಸುವಲ್ಲಿ ವಿಳಂಬಗಳು

ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ಅರ್ಜಿಗಳನ್ನು ಸಮಯೋಚಿತವಾಗಿ ಸಂಸ್ಕರಿಸುವುದು ಅಗತ್ಯವಾಗಿದೆ. ಮಂಜೂರಾತಿ ಆದೇಶವನ್ನು ನೀಡಲು ನೋಂದಣಿ ದಿನಾಂಕದಿಂದ ಒಟ್ಟಾರೆ ಅನುಮತಿಸುವ 75 ದಿನಗಳ ಮಿತಿಗೆ ಪ್ರತಿಯಾಗಿ ಇಲಾಖೆ ಮತ್ತು ತಯಾರಕರು ತೆಗೆದುಕೊಂಡ ಸಮಯವು 617 ದಿನಗಳವರೆಗಿನ ವ್ಯಾಪ್ತಿಯಲ್ಲಿರುವುದನ್ನು ತೋಟಗಾರಿಕಾ ಇಲಾಖೆಯ 300 ಅರ್ಜಿಗಳ ಪರೀಕ್ಷಾ–ತನಿಖೆಯಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು. ಇದು ಫಲಾನುಭವಿಗಳಿಗೆ ಪ್ರಯೋಜನಗಳನ್ನು ಒದಗಿಸುವಲ್ಲಿ ವಿಳಂಬವಾಗುವಲ್ಲಿ ಪರಿಣಮಿಸಿತು. ಆದರೂ ನೋಂದಣಿ, ಕಾರ್ಯಾದೇಶದ ವಿತರಣೆ ಮತ್ತು ಅರ್ಜಿಯ ಸಂಸ್ಕರಣೆಯನ್ನು ಒಂದೇ ದಿನದಲ್ಲಿ ಪೂರ್ಣಗೊಳಿಸಿರುವ ನಿದರ್ಶನಗಳನ್ನು ಲೆಕ್ಕಪರಿಶೋಧನೆಯು ಗಮನಿಸಿದ್ದರಿಂದ ಪ್ರಕ್ರಿಯೆಯನ್ನು ತ್ವರಿತಗೊಳಿಸಬಹುದು ಎಂದು ಇದು ಸೂಚಿಸುತ್ತದೆ., ಕಾರ್ಯಾದೇಶಗಳಲ್ಲಿ ನಮೂದಿಸಲಾದ ಹೆಸರು, ವಿಳಾಸ ಇತ್ಯಾದಿ ವಿವರಗಳು ಅಪೂರ್ಣವಾಗಿರುವುದನ್ನು ಅರ್ಜಿಗಳ ಪರಿಶೀಲನೆಯ ಸಮಯದಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು. ವಿವರಗಳ ಅಪೂರ್ಣತೆಗೆ ಕಾರಣವನ್ನು ಕೆಲವು ಅನುಷ್ಠಾನ ಮಾಡುವ ಅಧಿಕಾರಿಗಳ ಅಸಮರ್ಪಕತೆಗೆ. ಸರ್ಕಾರವು ಅಧ್ಯಾರೋಪಿಸಿತು (ಜೂನ್ 2022). ಮಂಜೂರಾತಿ ಆದೇಶದ ದಿನಾಂಕದಿಂದ ಪಾವತಿಗಳನ್ನು ಮಾಡಲು ಇಲಾಖೆಯು ಸಮಯದ ಮಿತಿಯನ್ನು ನಿಗದಿಪಡಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪಾವತಿ ಮಾಡಲು ಇಲಾಖೆಯು ತೆಗೆದುಕೊಂಡ ಸಮಯವು ಮಂಜೂರಾತಿ ಆದೇಶದ ದಿನಾಂಕದಿಂದ 1 ದಿನದಿಂದ 285 ದಿನಗಳ ವ್ಯಾಪ್ತಿಯಲ್ಲಿರುವುದನ್ನು ಗಮನಿಸಲಾಯಿತು. ಮಂಜೂರಾತಿ ಆದೇಶದ ದಿನಾಂಕದಿಂದ ಪಾವತಿ ಮಾಡಲು ಸಮಯವನ್ನು ನಿಗದಿಪಡಿಸಲು ಸರ್ಕಾರವು ಒಪ್ಪಿಕೊಂಡಿತು (ಜೂನ್ 2022).

### 2.2.11.6 ಮಾನವ ಸಂಪನ್ಮೂಲ ಅಭಿವೃದ್ಧಿ

ಕಾರ್ಯಾಚರಣೆಯ ಮಾರ್ಗಸೂಚಿಗಳ ಕಂಡಿಕೆ 18ರ ಪ್ರಕಾರ, ಮಾನವ ಸಂಪನ್ಮೂಲ ಅಭಿವೃದ್ಧಿಯು ಕಾರ್ಯಕ್ರಮದ ಪ್ರಮುಖ ಅಂಶವಾಗಿತ್ತು. ಸಿಬ್ಬಂದಿ ಮತ್ತು ರೈತರಿಗೆ ಕೃಷಿ ಮತ್ತು ವಿಸ್ತರಣಾ ಚಟುವಟಿಕೆಗಳ ವಿವಿಧ ಅಂಶಗಳ ಕುರಿತು ತರಬೇತಿಗಳನ್ನು ನೀಡಬೇಕಾಗಿದ್ದ ಕೃಷಿ ತಂತ್ರಜ್ಞಾನ ನಿರ್ವಹಣಾ ಏಜೆನ್ಸಿ ಮತ್ತು ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಸೂಕ್ಷ್ಮ ನೀರಾವರಿ/ಫಲೀಕರಣದ ಮೇಲೆ 33 ತರಬೇತಿಗಳನ್ನು ನೀಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪರೀಕ್ಷಾ–ತನಿಖೆ

ನಡೆಸಿದ ಆರು ಜಿಲ್ಲೆಗಳಲ್ಲಿ, ಒಂದು ಜಿಲ್ಲೆಯಲ್ಲಿ (ಶಿವಮೊಗ್ಗ) 2016–17ರಲ್ಲಿ 3,973 ರೈತರಿಗೆ ತರಬೇತಿ ನೀಡುವುದಕ್ಕೆ ವೆಚ್ಚ ಮಾಡಿದ್ದ ₹ 8.20 ಲಕ್ಷವನ್ನು ಒದಗಿಸಿರುವುದನ್ನು ಹೊರತುಪಡಿಸಿ ಪಿಎಮ್‌ಕೆಎಸ್‌ವೈ ಅಡಿಯಲ್ಲಿ ಸೂಕ್ಷ್ಮ ನೀರಾವರಿ ತರಬೇತಿಗಾಗಿ ಕಳೆದ ಐದು ವರ್ಷಗಳಲ್ಲಿ (2016–21) ಯಾವುದೇ ನಿರ್ದಿಷ್ಟ ಹಣವನ್ನು ಒದಗಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕಾರ್ಯಾಚರಣಾ ಮಾರ್ಗಸೂಚಿಗಳು ಆಲೋಚಿಸಿದ್ದ ಪಾಲುದಾರರ ತರಬೇತಿ[41], ಅನುಭವ ಭೇಟಿಗಳು[42] ಮತ್ತು ತಾಂತ್ರಿಕ ಸಿಬ್ಬಂದಿಯ ಅಧ್ಯಯನ ಪ್ರವಾಸ[43], ಕಾರ್ಯಾಗಾರ/ಸಮ್ಮೇಳನ[44] ಇವುಗಳಲ್ಲಿ ಆರು ಪರೀಕ್ಷಾ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಯಾವುದನ್ನೂ ನಡೆಸಿರಲಿಲ್ಲ ಅಥವಾ ಅದಕ್ಕೆ ಹಣವನ್ನು ಒದಗಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ರೈತರಿಗೆ ತರಬೇತಿ ನೀಡಲು ಮತ್ತು ಜಾಗೃತಿಯನ್ನು ಮೂಡಿಸಲು ಭವಿಷ್ಯದಲ್ಲಿ ಪ್ರತ್ಯೇಕ ಹಂಚಿಕೆಗಳನ್ನು ನೀಡಲು ಸರ್ಕಾರವು ಒಪ್ಪಿಕೊಂಡಿತು (ಜೂನ್ 2022).

ಮಾರ್ಚ್ 2022ರಲ್ಲಿದ್ದಂತೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಲ್ಲಿ ಹೆಚ್ಚಿನ ಹುದ್ದೆಗಳು ಖಾಲಿ ಇರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕೃಷಿ ಅಧಿಕಾರಿಗಳ ಹುದ್ದೆಯಲ್ಲಿ ಶೇಕಡಾ 39, ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಯಲ್ಲಿ ಶೇಕಡಾ 63, ಮತ್ತು ಸಹಾಯಕ ತೋಟಗಾರಿಕಾ ಅಧಿಕಾರಿಗಳ ಹುದ್ದೆಗಳಲ್ಲಿ ಶೇಕಡಾ 38ರಷ್ಟು ಖಾಲಿ ಹುದ್ದೆಗಳಿದ್ದವು. ಸರ್ಕಾರವು ಲೆಕ್ಕಪರಿಶೋಧನಾ ಅವಲೋಕನಗಳು ಅತ್ಯಂತ ಸಮಯೋಚಿತ ಮತ್ತು ಮಾನ್ಯವಾಗಿದೆ ಮತ್ತು ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು ಎಂದು ತಿಳಿಸಿತು (ಜೂನ್ 2022).

***ಶಿಫಾರಸು–6: ಯಾದೃಚ್ಛಿಕ ತಪಾಸಣೆ, ಗುಣಮಟ್ಟ ನಿಯಂತ್ರಣ ಮತ್ತು ಮೂರನೆ ವ್ಯಕ್ತಿಯಿಂದ ತಪಾಸಣೆಗಳನ್ನು ಯಾದೃಚ್ಛಿಕ ಪ್ರಕ್ರಿಯೆಯ ಮೂಲಕ ಕಡ್ಡಾಯವಾಗಿ ನಡೆಸಲು ಇಲಾಖೆಗಳು ಕ್ರಮ ಕೈಗೊಳ್ಳಬೇಕು. ಅಂತಹ ತಪಾಸಣೆ/ಗುಣಮಟ್ಟ ನಿಯಂತ್ರಣ ಸಮಯದಲ್ಲಿ, ಕ್ಷೇತ್ರಗಳ ಬಹುಭುಜಾಕೃತಿಯ ದತ್ತಾಂಶವನ್ನು ಸಹ ಸೆರೆಹಿಡಿಯಲು ಸೂಚನೆಗಳನ್ನು ನೀಡಬಹುದು ಏಕೆಂದರೆ ಅದನ್ನು ಭವಿಷ್ಯದಲ್ಲಿ ವಿಶ್ಲೇಷಣೆಗೆ ಬಳಸಬಹುದು.***

***ಶಿಫಾರಸು–7: ಕೃಷಿ ಅಧಿಕಾರಿಗಳು ಮತ್ತು ಸಹಾಯಕ ಕೃಷಿ ಅಧಿಕಾರಿಗಳ ಪದವೃಂದಕ್ಕೆ ನೇಮಕಾತಿ ಬಾಕಿಯಿರುವುದರಿಂದ ಕೃಷಿ ಚಟುವಟಿಕೆಗಳು ಮತ್ತು ಕಂಪ್ಯೂಟರ್‌ಗಳ ಬಗ್ಗೆ ಸಾಕಷ್ಟು ಜ್ಞಾನ ಹೊಂದಿರುವ ಗುತ್ತಿಗೆ ಸಿಬ್ಬಂದಿಯ ಸೇವೆಗಳನ್ನು ಪರಿಗಣಿಸಬಹುದು.***

### 2.2.12 ಕಾರ್ಯಕ್ರಮದ ಪರಿಣಾಮಗಳ ಜಂಟಿ ಭೌತಿಕ ಪರಿಶೀಲನೆಯ ಫಲಿತಾಂಶಗಳು

ಕೆಳಗಿನ **ಕೋಷ್ಟಕ–2.11**ರಲ್ಲಿ ವಿವರಿಸಿದಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ 125 ಫಲಾನುಭವಿಗಳ ಜಂಟಿ ಭೌತಿಕ ಪರಿಶೀಲನೆಯನ್ನು ಇಲಾಖೆಯ ಅಧಿಕಾರಿಗಳೊಂದಿಗೆ ಲೆಕ್ಕಪರಿಶೋಧನೆಯು ನಡೆಸಿತು.

[41] ತರಬೇತಿಗಾಗಿ ರಾಜ್ಯದ ಪ್ರತಿ ರೈತರಿಗೆ ದಿನಕ್ಕೆ ₹ 1,000 ಮತ್ತು ರಾಜ್ಯದ ಹೊರಗಿನವರಿಗೆ ವಾಸ್ತವಿಕ ವೆಚ್ಚ.

[42] ಹೊರಗಿನ ರಾಜ್ಯದವರಿಗೆ ವಾಸ್ತವ ವೆಚ್ಚ ಮತ್ತು ಭಾರತದ ಹೊರಗಿನವರಿಗೆ ಪ್ರತಿಯೊಬ್ಬರಿಗೆ ₹ 4 ಲಕ್ಷ.

[43] ರಾಜ್ಯದವರಿಗೆ ಪ್ರತಿ ದಿನಕ್ಕೆ ₹ 300 ಭಾರತದ ಹೊರಗಿನವರಿಗೆ ಪ್ರತಿಯೊಬ್ಬರಿಗೆ ₹ 4 ಲಕ್ಷ.

[44] ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿ ಕಾರ್ಯಕ್ರಮಕ್ಕೆ ₹ 7.50 ಲಕ್ಷ, ರಾಷ್ಟ್ರೀಯ ಮಟ್ಟದಲ್ಲಿ ₹ 5 ಲಕ್ಷ, ರಾಜ್ಯ ಮಟ್ಟದಲ್ಲಿ ₹ 3 ಲಕ್ಷ ಮತ್ತು ಜಿಲ್ಲಾ ಮಟ್ಟದಲ್ಲಿ ₹ 2 ಲಕ್ಷಕ್ಕೆ ಸೀಮಿತವಾಗಿದೆ .

**ಕೋಷ್ಟಕ–2.11: ಜಂಟಿ ಭೌತಿಕ ತಪಾಸಣೆಯ ಫಲಿತಾಂಶಗಳು**

| ವಿವರಣೆ | ಇಳುವರಿ | ಪ್ರದೇಶ | ಫಲೀಕರಣ |
|---|---|---|---|
| ವೃದ್ಧಿ | 106 | 78 | ಎಲ್ಲಾ ಹನಿ ನೀರಾವರಿ ಫಲಾನುಭವಿಗಳು ಫಲೀಕರಣವನ್ನು ಬಳಸಿದ್ದರು |
| ಬದಲಾವಣೆ ಇಲ್ಲ | 8 | 33* | |
| ಫಲಾನುಭವಿಗಳು ಹಾಜರಿರಲಿಲ್ಲ | 11 | 14 | |

ಆಧಾರ: ಜಂಟಿ ಭೌತಿಕ ಪರಿಶೀಲನೆಯ ಫಲಿತಾಂಶಗಳು.

*ಈಗಾಗಲೇ ಪೂರ್ಣ ಪ್ರದೇಶವು ಕೃಷಿ ಪ್ರದೇಶವಾಗಿತ್ತು.

ಶೇಕಡಾ 10ರಿಂದ 70[45] ರಷ್ಟು ಉತ್ಪಾದಕತೆಯ (ಇಳುವರಿ) ಹೆಚ್ಚಳವನ್ನು ವರದಿ ಮಾಡಿದ ಫಲಾನುಭವಿಗಳಿಗೆ ಕಾರ್ಯಕ್ರಮವು ಪ್ರಯೋಜನಕಾರಿಯಾಗಿತ್ತು ಎಂಬುದು ಕಂಡುಬಂದಿತು. ಇದಲ್ಲದೆ, ಗುಣಮಟ್ಟದ ದತ್ತಾಂಶ ಮತ್ತು ಕ್ಷೇತ್ರಗಳ ಬಹುಭುಜಾಕೃತಿಯ ದತ್ತಾಂಶವು ಲಭ್ಯತೆಯಿಲ್ಲದ ಕಾರಣ, ಉಪಗ್ರಹ ಚಿತ್ರಣ ದತ್ತಾಂಶವನ್ನು ಬಳಸಿಕೊಂಡು ಇಳುವರಿ ಮತ್ತು ಪ್ರದೇಶದ ಹೆಚ್ಚಳದ ದೃಷ್ಟಿಯಿಂದ ಫಲಿತಾಂಶಗಳನ್ನು ವಿಶ್ಲೇಷಿಸಲು ಲೆಕ್ಕಪರಿಶೋಧನೆಯು ಮಾಡಿದ ಪ್ರಯತ್ನಗಳು ಫಲಪ್ರದವಾಗಲಿಲ್ಲ. ಅಲ್ಲದೆ, ಉತ್ಪನ್ನಗಳ ಮಾರಾಟದ ಬೆಲೆಯು ಮಾರುಕಟ್ಟೆ ದರಗಳು/ಅಂಶಗಳ ಮೇಲೆ ಅವಲಂಬಿತವಾಗಿರುವುದರಿಂದ ರೈತರ ಆದಾಯದ ಹೆಚ್ಚಳವನ್ನು ಸಮರ್ಪಕವಾಗಿ ನಿರ್ಣಯಿಸಲು ಸಾಧ್ಯವಾಗಲಿಲ್ಲ. ಕಾರ್ಯಕ್ರಮದ ಉದ್ದೇಶಗಳಲ್ಲಿ ಒಂದಾಗಿದ್ದ ನುರಿತ ಮತ್ತು ಕೌಶಲ್ಯರಹಿತ ವ್ಯಕ್ತಿಗಳಿಗೆ ತಯಾರಕರಿಂದ ಉದ್ಯೋಗ ಸೃಷ್ಟಿಯ ವಿವರಗಳನ್ನು ನೋಡಲ್ ಇಲಾಖೆಯು ಹೊಂದಿರಲಿಲ್ಲ. ಆದರೆ ಒಂದು ನುರಿತ ವ್ಯಕ್ತಿ ದಿನ ಮತ್ತು ಎರಡು ಕೌಶಲ್ಯರಹಿತ ವ್ಯಕ್ತಿ ದಿನಗಳನ್ನು ಉದ್ಯೋಗದಲ್ಲಿ ಸೃಷ್ಟಿಸಲಾಗಿದೆ ಎಂದು ತಿಳಿಸಿತು (ಜೂನ್ 2022).

## ನಿರ್ಣಯ ಮತ್ತು ಶಿಫಾರಸುಗಳು

ರಾಜ್ಯ ನೀರಾವರಿ ಯೋಜನೆಯಲ್ಲಿ ಉದ್ದೇಶಿಸಿದ್ದ ಪ್ರದೇಶದ ವ್ಯಾಪ್ತಿಯ ಗುರಿಗಳಲ್ಲಿ ಶೇಕಡಾ 75ರಷ್ಟನ್ನು ಅನುಷ್ಠಾನ ಇಲಾಖೆಗಳು ಸಾಧಿಸಲು ಸಾಧ್ಯವಾಯಿತು. ಇಳುವರಿ ಮತ್ತು ವಿಸ್ತೀರ್ಣದ ಹೆಚ್ಚಳದ ದೃಷ್ಟಿಯಿಂದ ರೈತರಿಗೆ ಪ್ರಯೋಜನಗಳಾಗುತ್ತಿವೆ ಎಂಬುದನ್ನು ಜಂಟಿ ಭೌತಿಕ ಪರಿಶೀಲನೆಗಳು ತೋರಿಸಿದವು. ಸಾಧನೆಯು ಉತ್ತಮವಾಗಿ ಕಂಡುಬಂದರೂ, ಅನುಷ್ಠಾನದ ಯೋಜನೆಯಲ್ಲಿನ ನ್ಯೂನತೆಗಳಿಂದಾಗಿ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಸೂಕ್ಷ್ಮ ನೀರಾವರಿ ನೀತಿಯಲ್ಲಿ ನಿರ್ದಿಷ್ಟಪಡಿಸಿದ ಆದ್ಯತೆ ನೀಡಬೇಕಾದ/ಕೇಂದ್ರಿತ ಪ್ರದೇಶಗಳನ್ನು ಒಳಗೊಳ್ಳುವ ಆಧಾರದ ಮೇಲೆ ಅನುಷ್ಠಾನವು ಆಧಾರಿತವಾಗಿರಲಿಲ್ಲ. ಸಕಾಲದಲ್ಲಿ ಸಮರ್ಪಕವಾಗಿ ಹಣ ಒದಗಿಸದಿರುವುದು ಸಾಧನೆಯಲ್ಲಿ ಕೊರತೆಗೆ ಕಾರಣವಾಗಿತ್ತು.

ಮೇಲ್ವಿಚಾರಣಾ ವಿಷಯದಲ್ಲಿ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ತನ್ನ ಪಾತ್ರವನ್ನು ನಿರ್ವಹಿಸಲಿಲ್ಲ. ಕಾರ್ಯಕ್ರಮದ ಅನುಷ್ಠಾನವನ್ನು ತ್ವರಿತಗೊಳಿಸಲು ಮತ್ತು ಸುಧಾರಿಸಲು 2018 ರಲ್ಲಿ ರಚಿಸಲಾದ ಕೆಎಎಮ್ಐಸಿ ಕಂಪನಿಯನ್ನು ಮುಚ್ಚಲು ಪ್ರಸ್ತಾಪವಿಸಲಾಗಿದೆ.

ಗುಣಮಟ್ಟ ನಿಯಂತ್ರಣ ತಪಾಸಣೆ ಮೂರನೆ ವ್ಯಕ್ತಿ ತಪಾಸಣೆ ಮತ್ತು ಇಲಾಖಾ ಪರಿಶೀಲನೆಗಳ ವ್ಯಾಪ್ತಿಯು ದುರ್ಬಲವಾಗಿತ್ತು ಏಕೆಂದರೆ ಕಡ್ಡಾಯವಾದಷ್ಟು ತಪಾಸಣೆಗಳನ್ನು ನಡೆಸಿರಲಿಲ್ಲ. ಸೂಕ್ಷ್ಮ ನೀರಾವರಿ

[45] ಇಳುವರಿಯು ಶೇಕಡ 10ರ ವರೆಗೂ ಹೆಚ್ಚಳವಾಯಿತು ( 12 ಫಲಾನುಭವಿಗಳು), ಶೇಕಡ 11–30 (40 ಫಲಾನುಭವಿಗಳು) , ಶೇಕಡ 31–50 (48 ಫಲಾನುಭವಿಗಳು), ಶೇಕಡ 51–70 (6 ಫಲಾನುಭವಿಗಳು) ಮತ್ತು ಏನೂ ಬದಲಾವಣೆ ಇಲ್ಲ/ಏನೂ ಮಾಹಿತಿ ಇಲ್ಲ ( 19 ಫಲಾನುಭವಿಗಳು ).

ವ್ಯವಸ್ಥೆಗಳ ತಯಾರಕರು ಸ್ಥಳೀಯ ಭಾಷೆಯಲ್ಲಿ ಕೈಪಿಡಿಗಳನ್ನು ಒದಗಿಸುವುದು, ಸಹಾಯಕ್ಕಾಗಿ ಟೋಲ್–ಫ್ರೀ ಸಂಖ್ಯೆಯನ್ನು ಒದಗಿಸುವುದು ಮತ್ತು ಕಡ್ಡಾಯ ಪ್ರಚಾರಗಳನ್ನು ನಡೆಸುವುದು ಮುಂತಾದ ಕೆಲವು ಬಾಧ್ಯತೆಗಳನ್ನು ಅನುಸರಿಸಲಿಲ್ಲ. ವಿಸ್ತರಣಾ ಚಟುವಟಿಕೆಗಳ ಬಗ್ಗೆ ನಿಯಮಿತವಾಗಿ ತರಬೇತಿಗಳನ್ನು ನಡೆಸುತ್ತಿದ್ದರೂ ಸಹ ಹಣವನ್ನು ಒದಗಿಸದ ಕಾರಣ ಸೂಕ್ಷ್ಮ ನೀರಾವರಿ ಮತ್ತು ಫಲೀಕರಣದ ಬಗ್ಗೆ ನಿರ್ದಿಷ್ಟವಾಗಿ ತರಬೇತಿಗಳು ವಿರಳವಾಗಿದ್ದವು. ಇಲಾಖೆಗಳಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ತಾಂತ್ರಿಕ ವರ್ಗಗಳಲ್ಲಿ ಹೆಚ್ಚಿನ ಹುದ್ದೆಗಳು ಖಾಲಿಯಿದ್ದವು.

***ಶಿಫಾರಸುಗಳು:***

***ಮೇಲ್ಕಂಡ ನ್ಯೂನತೆಗಳನ್ನು ಕುರಿತು ಸರಕಾರಕ್ಕೆ ಏಳು ಶಿಫಾರಸುಗಳನ್ನು ಮಾಡಲಾಗಿದ್ದು, ಅವುಗಳನ್ನು ವರದಿಯಲ್ಲಿ ಸೇರಿಸಲಾಗಿದೆ. ಸರ್ಕಾರವು ಆರು ಶಿಫಾರಸುಗಳನ್ನು ಅಂಗೀಕರಿಸಿತು (ಜೂನ್ 2022). ಹೆಚ್ಚುವರಿ ಸಹಾಯಧನ ನೀಡುವ ಶಿಫಾರಸಿನ (ನಂ.3) ಮೇಲೆ, ಸರ್ಕಾರವು ಭಾರತ ಸರ್ಕಾರದ ಮಾನದಂಡಗಳ ಪ್ರಕಾರ ಕಡ್ಡಾಯವಾದ ಸಹಾಯಧನವನ್ನು ನೀಡುತ್ತಿದ್ದು ಭಾರತ ಸರ್ಕಾರದ ಮಾನದಂಡಗಳ ಮೇಲೆ ಹೆಚ್ಚಿನ ಸಹಾಯಧನವನ್ನು ನೀಡಬೇಕಾಗಿರುವ ಅದರ ನೀತಿಯಿಂದಾಗಿ ಕೊರತೆ ಉಂಟಾಗಿದೆ ಎಂದು ಸರ್ಕಾರವು ತಿಳಿಸಿತು.***

## ಉನ್ನತ ಶಿಕ್ಷಣ ಇಲಾಖೆ

### 2.3 ಪರಿಶಿಷ್ಟ ಜಾತಿಗಳ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಹಂಚಿಕೆಯಡಿಯಲ್ಲಿ ಅನುತ್ಪಾತಕ ವೆಚ್ಚ

**ವಸತಿನಿಲಯಗಳ ನಿರ್ಮಾಣದ ಬೇಡಿಕೆಯನ್ನು ನಿರ್ಣಯಿಸುವಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರ ವಿಫಲತೆ ಮತ್ತು ವಸತಿ ಸೌಕರ್ಯವನ್ನು ಒದಗಿಸದಿರುವುದು ಪರಿಶಿಷ್ಟ ಜಾತಿಗಳ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ನಿಧಿಯಡಿಯಲ್ಲಿ ₹ 43.82 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ವಸತಿನಿಲಯಗಳು ಖಾಲಿ ಉಳಿಯುವಲ್ಲಿ ಪರಿಣಮಿಸಿತು. ಈ ಖಾಲಿ ವಸತಿನಿಲಯಗಳಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸುವ ಅನುಚಿತ ನಿರ್ಧಾರವು ಹೆಚ್ಚುವರಿಯಾಗಿ ಬಿಡುಗಡೆಯಾದ ₹ 27.90 ಕೋಟಿಯು ಅನುತ್ಪಾದಕ ವೆಚ್ಚವಾಗುವಲ್ಲಿ ಪರಿಣಮಿಸಿತು.**

ಕರ್ನಾಟಕ ಸರ್ಕಾರವು ರಾಜ್ಯದಲ್ಲಿನ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) ಜನಸಂಖ್ಯೆಗೆ ಅನುಗುಣವಾಗಿ ವಾರ್ಷಿಕವಾಗಿ ಆಯವ್ಯಯ ಹಂಚಿಕೆಯನ್ನು ಖಚಿತಪಡಿಸಿಕೊಳ್ಳಲು ಕರ್ನಾಟಕ ಪರಿಶಿಷ್ಟ ಜಾತಿಗಳ ಉಪ–ಹಂಚಿಕೆ ಮತ್ತು ಬುಡಕಟ್ಟು–ಉಪ ಹಂಚಿಕೆ (ಯೋಜನೆ, ಹಂಚಿಕೆ ಮತ್ತು ಹಣಕಾಸು ಸಂಪನ್ಮೂಲಗಳ ಬಳಕೆ) ಕಾಯಿದೆ, 2013 ಮತ್ತು ನಿಯಮಗಳು 2017 ಅನ್ನು ಜಾರಿಗೊಳಿಸಿತು (ಪರಿಶಿಷ್ಟ ಜಾತಿಗಳ ಉಪನಿಧಿ ಮತ್ತು ಬುಡಕಟ್ಟು ಉಪ ಯೋಜನೆ ನಿಧಿ ಎಂದು ಕರೆಯಲ್ಪಡುತ್ತದೆ). ರಾಜ್ಯ ಅಭಿವೃದ್ಧಿ ಮಂಡಳಿ[46] (ಎಸ್‌ಡಿಸಿ) ರಾಜ್ಯದ ಎಸ್‌ಸಿ/ಎಸ್‌ಟಿ ಜನಸಂಖ್ಯೆಯ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲು ಮತ್ತು ಹಣವನ್ನು ವಿನಿಯೋಗಿಸಲು ಉನ್ನತ ಸಂಸ್ಥೆಯಾಗಿತ್ತು.

ಪರಿಶಿಷ್ಟ ಜಾತಿಗಳ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಬುಡಕಟ್ಟು ಉಪ ಯೋಜನೆ (ಟಿಎಸ್‌ಪಿ) ರಾಜ್ಯದ ಎಲ್ಲಾ ಸಂಬಂಧಿತ ಅಭಿವೃದ್ಧಿ ಕ್ಷೇತ್ರಗಳಿಂದ ಹಣವನ್ನು ಖಾತರಿಪಡಿಸುವ ಮೂಲಕ ಎಸ್‌ಸಿ ಮತ್ತು ಎಸ್‌ಟಿ ಪಂಗಡಗಳ ಜೀವನ ಪರಿಸ್ಥಿತಿಗಳನ್ನು ಉತ್ತಮಗೊಳಿಸಲು ನಿಬಂಧನೆಗಳನ್ನು ನಿಗದಿಪಡಿಸಿತ್ತು. ನಿರ್ದಿಷ್ಟ ಹಣಕಾಸು ವರ್ಷದಲ್ಲಿ ಹಂಚಿಕೆಯನ್ನು ವೆಚ್ಚ ಮಾಡದ ಸಂದರ್ಭದಲ್ಲಿ ಅದನ್ನು ಮುಂದಿನ ವರ್ಷದ ಹಂಚಿಕೆಗೆ ಸೇರಿಸಬಹುದು ಆದರೆ ಆ ವರ್ಷದ ನಂತರದ ಹಂಚಿಕೆಗೆ ಮುಂದುವರೆಸಬಾರದು ಎಂದೂ ನಿಗದಿಪಡಿಸಲಾಗಿತ್ತು. ಇಲಾಖೆಗಳ ಉಪ ಯೋಜನೆಗಳು ಎಸ್ ಮತ್ತು ಎಸ್‌ಟಿಗಳಿಗೆ ನೇರ ಮತ್ತು ಪ್ರಮಾಣೀಕರಿಸಬಹುದಾದ ಪ್ರಯೋಜನವನ್ನು ಪಡೆಯುವ ಯೋಜನೆಗಳನ್ನು ಮಾತ್ರ ಒಳಗೊಂಡಿರಬೇಕು.

ಮಾರ್ಚ್ 2021ಕ್ಕೆ ಕೊನೆಂಡ ಅವಧಿಗೆ ಉನ್ನತ ಶಿಕ್ಷಣ ಇಲಾಖೆಯ (ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಎರಡೂ) ಅನುಸರಣೆ ಲೆಕ್ಕಪರಿಶೋಧನೆಯ ಸಮಯದಲ್ಲಿ, ಲೆಕ್ಕಪರಿಶೋಧನೆಯು ಈ ಕೆಳಗಿನವುಗಳನ್ನು ಗಮನಿಸಿತು.

ತಾಂತ್ರಿಕ ಶಿಕ್ಷಣ ನಿರ್ದೇಶಕರು (ಡಿಟಿಇ) ಎಸ್‌ಸಿಎಸ್‌ಪಿ/ಟಿಎಸ್‌ಪಿ ನಿಧಿಯಲ್ಲಿ 2013–14ನೇ ಸಾಲಿನ ಕಾರ್ಯ ಯೋಜನೆಯ ಭಾಗವಾಗಿ ₹ 43.82 ಕೋಟಿ ಅಂದಾಜು ವೆಚ್ಚದಲ್ಲಿ, ಅಸ್ತಿತ್ವದಲ್ಲಿರುವ 44 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಹೊಸ ವಸತಿನಿಲಯ ಕಟ್ಟಡಗಳನ್ನು ನಿರ್ಮಿಸಲು ಪ್ರಸ್ತಾವಿಸಿದರು. ರಾಜ್ಯ ಅಭಿವೃದ್ಧಿ ಮಂಡಳಿಯು ತಾಂತ್ರಿಕ ಶಿಕ್ಷಣ ನಿರ್ದೇಶಕರ ಕಾರ್ಯಯೋಜನೆಯನ್ನು ಅನುಮೋದಿಸಿತು (ಜನವರಿ 2014) ಮತ್ತು ವಸತಿನಿಲಯಗಳ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿತು (ಫೆಬ್ರವರಿ 2014). ತಾಂತ್ರಿಕ ಶಿಕ್ಷಣ ನಿರ್ದೇಶಕರು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯು (ಫೆಬ್ರವರಿ

[46] ಕರ್ನಾಟಕ ಪರಿಶಿಷ್ಟ ಜಾತಿಗಳ ಉಪ–ಹಂಚಿಕೆ ಮತ್ತು ಬುಡಕಟ್ಟು–ಉಪ ಹಂಚಿಕೆ (ಯೋಜನೆ, ಹಂಚಿಕೆ ಮತ್ತು ಹಣಕಾಸು ಸಂಪನ್ಮೂಲಗಳ ಬಳಕೆ) ಕಾಯಿದೆ, 2013ರ ನಿಬಂಧನೆಗಳ ಪ್ರಕಾರ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ರಚಿಸಲಾದ ಪರಿಷತ್ತು.

2014) ಪರಿಷ್ಕೃತ ಕಾರ್ಯ ಯೋಜನೆಯಲ್ಲಿ ಹಾಸ್ಟೆಲ್ ಕಟ್ಟಡಗಳ ನಿರ್ಮಾಣ ಕಾರ್ಯಗಳನ್ನು ಸೇರಿಸುವುದು ಮತ್ತು ಎಸ್‌ಸಿಪಿ/ಟಿಎಸ್‌ಪಿ ಅಡಿಯಲ್ಲಿ ಹಣದ ಲಭ್ಯತೆಯ ಬಗ್ಗೆ ಮಾತ್ರ ಉಲ್ಲೇಖಿಸಿದ್ದರೆ, ಫಲಾನುಭವಿಗಳ ಬೇಡಿಕೆ/ಈ ವಸತಿನಿಲಯ ಕಟ್ಟಡಗಳ ನಿರ್ಮಾಣದ ಅವಶ್ಯಕತೆಯ ಮೌಲ್ಯಮಾಪನದ ಬಗ್ಗೆ ದಾಖಲೆಗಳಲ್ಲಿ ಯಾವುದೇ ಸಾಕ್ಷ್ಯವಿರಲಿಲ್ಲ.

ತಾಂತ್ರಿಕ ಶಿಕ್ಷಣ ನಿರ್ದೇಶಕರು ಟೆಂಡರ್ ಆಹ್ವಾನಿಸದೇ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತಕ್ಕೆ (ಕೆಆರ್‌ಐಡಿಎಲ್) ಕಾಮಗಾರಿಯನ್ನು ವಹಿಸಿದರು (ಮಾರ್ಚ್ 2014) ಮತ್ತು ಏಪ್ರಿಲ್ 2015ರಿಂದ ಸೆಪ್ಟೆಂಬರ್ 2015ರ ನಡುವೆ ಕಾಮಗಾರಿಗಳು ಪೂರ್ಣಗೊಳ್ಳಬೇಕಿತ್ತು. ಮಾರ್ಚ್ 2021ರಲ್ಲಿದ್ದಂತೆ 44 ಹಾಸ್ಟೆಲ್‌ಗಳಲ್ಲಿ 31 ಮಾತ್ರ ಪೂರ್ಣಗೊಂಡಿದ್ದವು ಮತ್ತು ಉಳಿದ 13 ಕಟ್ಟಡಗಳ ಕಾಮಗಾರಿಗಳು ಇನ್ನೂ ಪ್ರಗತಿಯಲ್ಲಿದ್ದವು. ಮುಂಗಡವಾಗಿ ಹಣ ಬಿಡುಗಡೆ ಮಾಡಿದ್ದರೂ ಕಾಮಗಾರಿಗಳನ್ನು ಸಕಾಲದಲ್ಲಿ ಪೂರ್ಣಗೊಳಿಸುವಂತೆ ಕೆಆರ್‌ಐಡಿಎಲ್‌ಗೆ ಒತ್ತಾಯಿಸಲು ಇಲಾಖೆ ವಿಫಲವಾಗಿತ್ತು.

ಸರ್ಕಾರವು ನಿರ್ವಹಿಸುವ ಎಲ್ಲಾ ವಸತಿನಿಲಯಗಳು ಬಡ ಗ್ರಾಮೀಣ ನಿವಾಸಿಗಳಿಗೆ ವಸತಿ ಮತ್ತು ವಸತಿ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದ ಕಡ್ಡಾಯವಾದ ಜವಾಬ್ದಾರಿಯಾಗಿದೆ. ಆದಾಗ್ಯೂ, ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ ನಿರ್ದೇಶಕರು ನಿರ್ಮಿಸಿದ ವಸತಿನಿಲಯಗಳು ಉಚಿತ ಆಹಾರದ ಮೂಲಸೌಕರ್ಯದ ಅವಶ್ಯಕತೆಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿರಲಿಲ್ಲ. ತತ್ಪರಿಣಾಮವಾಗಿ, ಪಾಲಿಟೆಕ್ನಿಕ್‌ಗಳ ವಿದ್ಯಾರ್ಥಿಗಳು ಈ ವಸತಿನಿಲಯಗಳ ಪ್ರವೇಶಕ್ಕೆ ಆಸಕ್ತಿ ತೋರಿಸಲಿಲ್ಲವಾಗಿ ಪೂರ್ಣಗೊಂಡ 31 ವಸತಿನಿಲಯ ಕಟ್ಟಡಗಳಲ್ಲಿ ಎರಡನ್ನು ಮಾತ್ರ ತಾಂತ್ರಿಕ ಶಿಕ್ಷಣ ನಿರ್ದೇಶಕರು ಬಳಸಿಕೊಂಡಿದ್ದರು. 15 ಕಟ್ಟಡಗಳನ್ನು ಇತರ ಇಲಾಖೆಗಳಿಗೆ/ಉದ್ದೇಶಗಳಿಗೆ ಹಸ್ತಾಂತರಿಸಲಾಗಿದ್ದರೆ, 14 ಕಟ್ಟಡಗಳು ಇಲ್ಲಿಯವರೆಗೆ (ಮಾರ್ಚ್ 2022) ಖಾಲಿ ಉಳಿದಿದ್ದವು. ಖಾಲಿ ಇರುವ ಕೆಲವು ವಸತಿನಿಲಯಗಳ ಛಾಯಾಚಿತ್ರಗಳನ್ನು ಕೆಳಗೆ ನೀಡಲಾಗಿದೆ:

| | | |
|---|---|---|
|  |  |  |
| **ಸರ್ಕಾರಿ ಪಾಲಿಟೆಕ್ನಿಕ್ ವಸತಿನಿಲಯ, ಕೆಜಿಎಫ್** | **ಸರ್ಕಾರಿ ಪಾಲಿಟೆಕ್ನಿಕ್ ವಸತಿನಿಲಯ, ಹಾಸನ** | **ಸರ್ಕಾರಿ ಪಾಲಿಟೆಕ್ನಿಕ್ ವಸತಿನಿಲಯ, ಬೇಲೂರು** |

ಹೀಗಾಗಿ, ಎಸ್‌ಸಿ/ಎಸ್‌ಟಿ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ವಿಶೇಷ ಪ್ರಯೋಜನಗಳನ್ನು ಒದಗಿಸುವ ಉದ್ದೇಶದಿಂದ ಎಸ್‌ಸಿಎಸ್‌ಪಿ/ಟಿಎಸ್‌ಪಿ ನಿಧಿಯಿಂದ ಭರಿಸಿದ ₹ 43.82 ಕೋಟಿ ವೆಚ್ಚವು ಹೆಚ್ಚಿನ ಮಟ್ಟಿಗೆ ಫಲಪ್ರದವಾಗಲಿಲ್ಲ.

ಇದಲ್ಲದೆ, ಈಗಾಗಲೇ ನಿರ್ಮಿಸಲಾದ ವಸತಿನಿಲಯದ ಕಟ್ಟಡಗಳನ್ನು ಮೂಲ ಉದ್ದೇಶಕ್ಕಾಗಿ ಬಳಸಲು ಸಾಧ್ಯವಾಗದಿದ್ದರೂ, ತಾಂತ್ರಿಕ ಶಿಕ್ಷಣ ನಿರ್ದೇಶಕರು ತಮ್ಮ 2019-20ರ ಕಾರ್ಯ ಯೋಜನೆಯಲ್ಲಿ ಎಸ್ ಸಿಎಸ್‌ಪಿ/ಟಿಎಸ್‌ಪಿ ಅಡಿಯಲ್ಲಿ ಈ 44ರಲ್ಲಿ 43 ವಸತಿನಿಲಯಗಳಲ್ಲಿ ₹ 27.90 ಕೋಟಿ ಅಂದಾಜು ವೆಚ್ಚದಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ಪ್ರಸ್ತಾವಿಸಿದರು. ಈ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಸಮರ್ಥನೆಯು ದಾಖಲೆಯಲ್ಲಿರಲಿಲ್ಲ ಅಥವಾ ಲೆಕ್ಕಪರಿಶೋಧನೆಗೂ ತಿಳಿಸಲಾಗಿಲ್ಲ. ಈಗಾಗಲೇ ನಿರ್ಮಿಸಲಾದ ಮೂಲಸೌಕರ್ಯಗಳ ಸೂಕ್ತವಾದ ಬಳಕೆಯನ್ನು ಖಚಿತಪಡಿಸಿಕೊಳ್ಳದೆ, ರಾಜ್ಯ ಅಭಿವೃದ್ಧಿ ಸಮಿತಿಯು ಕಾರ್ಯ ಯೋಜನೆಯನ್ನು ಅನುಮೋದಿಸಿತು (ಜೂನ್ 2019). ₹ 27.90 ಕೋಟಿ ಮೊತ್ತದಲ್ಲಿ ಪೂರ್ಣಗೊಂಡಿರುವ 31 ವಸತಿನಿಲಯಗಳಲ್ಲಿ ಪ್ರತಿ ವಸತಿನಿಲಯಕ್ಕೆ ₹ 90 ಲಕ್ಷದಂತೆ ಆರು ಹೆಚ್ಚುವರಿ

ಕೊಠಡಿಗಳನ್ನು ನಿರ್ಮಿಸಲು ರಾಜ್ಯ ಸರ್ಕಾರವು ಅನುಮೋದನೆ ನೀಡಿತು (ನವೆಂಬರ್ 2019) ಮತ್ತು ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಲು ಸೂಚನೆ ನೀಡಿತು. ತಾಂತ್ರಿಕ ಶಿಕ್ಷಣ ನಿರ್ದೇಶಕರು ಕೆಎಚ್‌ಬಿಗೆ ₹ 20.77 ಕೋಟಿ ಬಿಡುಗಡೆ ಮಾಡಿದರು (ನವೆಂಬರ್ 2019) ಮತ್ತು 14 ವಸತಿನಿಲಯ ಕಟ್ಟಡಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಕೊಠಡಿಗಳ ನಿರ್ಮಾಣವು ಪ್ರಗತಿಯಲ್ಲಿತ್ತು.

ಬೇಡಿಕೆ/ಅವಶ್ಯಕತೆಯ ಅನುಪಸ್ಥಿತಿಯಲ್ಲಿ, ಆರಂಭದಲ್ಲಿ ವಸತಿನಿಲಯಗಳ ನಿರ್ಮಾಣ ಮತ್ತು ನಂತರ ಹೆಚ್ಚುವರಿ ಕೊಠಡಿಗಳ ನಿರ್ಮಾಣವು ಸಮರ್ಥನೀಯವಾಗಿರಲಿಲ್ಲ ಅಥವಾ ಎಸ್‌ಸಿಎಸ್‌ಪಿ/ಟಿಎಸ್‌ಪಿ ನಿಧಿಯ ಬಳಕೆ ಆರ್ಥಿಕವಾಗಿ ವಿವೇಚನಾಯುಕ್ತವಾಗಿರಲಿಲ್ಲ. ಹೀಗೆ, ಉಚಿತ ಆಹಾರ ಪೂರೈಸುವ ಉದ್ದೇಶವಿಲ್ಲದ ವಸತಿನಿಲಯ ಕಟ್ಟಡಗಳ ನಿರ್ಮಾಣ ಮತ್ತು ವಿಸ್ತರಣೆಗೆ ₹ 64.59 ಕೋಟಿ ಹಣವನ್ನು ಬಿಡುಗಡೆ ಮಾಡಿದ ತಾಂತ್ರಿಕ ಶಿಕ್ಷಣ ನಿರ್ದೇಶಕರ ನಿರ್ಧಾರವು ಅನುಚಿತವಾಗಿತ್ತು ಮತ್ತು ವಿದ್ಯಾರ್ಥಿಗಳು ಸ್ಪಂದಿಸದ ಕಾರಣ ಉದ್ದೇಶಿತ ಸಮುದಾಯಕ್ಕೆ ಪ್ರಯೋಜನವಾಗಲು ವಿಫಲವಾಗಿತ್ತು. ಅನುದಾನ ಲೋಪವಾಗುವುದನ್ನು ತಪ್ಪಿಸಲು ಮತ್ತು ಬೇಡಿಕೆಯ ಸರಿಯಾದ ಮೌಲ್ಯಮಾಪನವಿಲ್ಲದೆ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಅಡಿಯಲ್ಲಿ ಮಂಜೂರು ಮಾಡಿದ ಹಣವನ್ನು ವೆಚ್ಚ ಮಾಡಲು ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದು ಸ್ಪಷ್ಟವಾಗಿತ್ತು. ಎಸ್‌ಪಿ/ಟಿಎಸ್‌ಪಿ ನಿಧಿಯ ಮಾರ್ಗಪಲ್ಲಟ ಮಾಡಿದ್ದು ಕರ್ನಾಟಕ ಪರಿಶಿಷ್ಟ ಜಾತಿಗಳ ಉಪ–ಹಂಚಿಕೆ ಮತ್ತು ಬುಡಕಟ್ಟು–ಉಪ ಹಂಚಿಕೆ (ಯೋಜನೆ, ಹಂಚಿಕೆ ಮತ್ತು ಹಣಕಾಸು ಸಂಪನ್ಮೂಲಗಳ ಬಳಕೆ) ಕಾಯಿದೆ, 2013ರ ಪರಿಚ್ಛೇದ 24ರ ಉಲ್ಲಂಘನೆಯಾಗಿತ್ತು. ಸಾರ್ವಜನಿಕ ಸೇವಕನಾಗಿರುವ ಯಾವುದೇ ಸಂಸ್ಥೆ ಅಥವಾ ಅಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿ ನಿರ್ವಹಿಸಬೇಕಾದ ತನ್ನ ಕರ್ತವ್ಯಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದರೆ ಸರ್ಕಾರಿ ನೌಕರರಿಗೆ ಅನ್ವಯವಾಗುವ ಸಂಬಂಧಪಟ್ಟ ಸೇವಾ ನಿಯಮಗಳಡಿಯಲ್ಲಿ ಅವರನ್ನು ಶಿಸ್ತು ಕ್ರಮಕ್ಕೆ ಗುರಿಪಡಿಸಬಹುದು. ಪರಿಶಿಷ್ಟ ಜಾತಿಗಳ ಉಪ ಯೋಜನೆ/ಬುಡಕಟ್ಟು ಉಪ ಯೋಜನೆಗಾಗಿನ ನೋಡಲ್ ಏಜೆನ್ಸಿಯು ಅಂತಹ ನಿರ್ಲಕ್ಷ್ಯದ ತೀವ್ರತೆಯನ್ನು ಅವಲಂಬಿಸಿ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಜೈಲು ಶಿಕ್ಷೆಗೆ ಗುರಿಯಾಗಿಸಬಹುದು.

ಕೋವಿಡ್–19 ಅವಧಿಯಲ್ಲಿ ತಾತ್ಕಾಲಿಕ ತರಗತಿಗಳನ್ನು ನಡೆಸಿದ ಪಾಲಿಟೆಕ್ನಿಕ್‌ಗಳು ಮತ್ತು ನಿವಾಸಿಗಳಿಗೆ ವಸತಿ/ಆಹಾರ ಸೌಲಭ್ಯಗಳನ್ನು ಒದಗಿಸುವ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳು ನಡೆಸುವ ವಸತಿನಿಲಯಗಳಿಗೆ ವಿದ್ಯಾರ್ಥಿಗಳು ಆದ್ಯತೆ ನೀಡಿದ್ದರಿಂದ ವಸತಿನಿಲಯಗಳು ಖಾಲಿ ಉಳಿದಿದ್ದವು ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2022). ಪಾಲಿಟೆಕ್ನಿಕ್‌ಗಳಲ್ಲಿ ಹೊಸ ಪಠ್ಯಕ್ರಮವನ್ನು ಪರಿಚಯಿಸಿರುವುದು ಭವಿಷ್ಯದಲ್ಲಿ ಹೆಚ್ಚಿನ ವಿದ್ಯಾರ್ಥಿಗಳನ್ನು ಆಕರ್ಷಿಸಬಹುದು ಎಂದೂ ಸಹ ಸರ್ಕಾರವು ತಿಳಿಸಿತು. ಉಚಿತ ಆಹಾರ ಸೌಕರ್ಯದ ಕೊರತೆಯಿಂದ ವಿದ್ಯಾರ್ಥಿಗಳು ಈ ವಸತಿನಿಲಯಗಳಿಗೆ ದಾಖಲಾಗಿಲ್ಲ ಮತ್ತು ಹಾಗಾಗಿ ಈ ವಸತಿನಿಲಯಗಳ ನಿರ್ಮಾಣವು ಅಗತ್ಯತೆಯನ್ನು ಆಧರಿಸಿರಲಿಲ್ಲ ಎಂದು ಉತ್ತರವು ದೃಢಪಡಿಸುತ್ತದೆ.

**ರಾಜ್ಯ ಸರ್ಕಾರ ಮತ್ತು ರಾಜ್ಯ ಅಭಿವೃದ್ಧಿ ಮಂಡಳಿಯು ಎಸ್‌ಸಿಎಸ್‌ಪಿ/ಟಿಎಸ್‌ಪಿ ಘಟಕದ ಅಡಿಯಲ್ಲಿರುವ ಹಣವನ್ನು ಉದ್ದೇಶಿತ ಜನಸಂಖ್ಯೆಗೆ ನೇರವಾಗಿ ಪ್ರಯೋಜನವನ್ನು ನೀಡುವ ಕಾಮಗಾರಿಗಳಿಗೆ ಬಳಸುವುದನ್ನು ಖಚಿತಪಡಿಸಿಕೊಳ್ಳಬೇಕು. ಜೊತೆಗೆ ಎಸ್‌ಸಿಪಿ/ಟಿಎಸ್‌ಪಿ ನಿಧಿಗಳನ್ನು ಮಾರ್ಗಪಲ್ಲಟ ಮಾಡಿದ ಮತ್ತು ವೆಚ್ಚವನ್ನು ನಿಷ್ಪ್ರಯೋಜಕಗೊಳಿಸಿದ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನೂ ನಿಗದಿಪಡಿಸಬಹುದು.**

## 2.4 ಅನುದಾನಿತ ಪಾಲಿಟೆಕ್ನಿಕ್‌ಗಳು ರಾಜಸ್ವದ ಕಡಿಮೆ ಜಮೆ ಮಾಡಿರುವುದು

**ತಾಂತ್ರಿಕ ಶಿಕ್ಷಣದ ಆಯುಕ್ತರು ಸಹಾಯಾನುದಾನದ ಸಂಹಿತೆಯ ನಿಬಂಧನೆಗಳನ್ನು ಜಾರಿಗೊಳಿಸದಿದ್ದುದು ಅನುದಾನಿತ ಸಂಸ್ಥೆಗಳು ಸರ್ಕಾರಕ್ಕೆ ₹ 2.79 ಕೋಟಿ ಮೊತ್ತದ ರಾಜಸ್ವದ ಶೇಕಡಾ 50ರಷ್ಟನ್ನು ಜಮೆ ಮಾಡದಿರುವಲ್ಲಿ ಪರಿಣಮಿಸಿತು.**

ತಾಂತ್ರಿಕ ಶಿಕ್ಷಣದಲ್ಲಿ ಖಾಸಗಿ ಉದ್ಯಮವನ್ನು ಪ್ರೋತ್ಸಾಹಿಸಲು ಕರ್ನಾಟಕ ಸರ್ಕಾರವು ತಾಂತ್ರಿಕ ಶಿಕ್ಷಣ ಇಲಾಖೆಗಾಗಿ ಸಹಾಯಾನುದಾನ ಸಂಹಿತೆಯನ್ನು ಪರಿಚಯಿಸಿತು (ಅಕ್ಟೋಬರ್ 1966). ಸಹಾಯಾನುದಾನ ಸಂಹಿತೆಯ ಅಧ್ಯಾಯ-III ಸಹಾಯಾನುದಾನದ ಸಾಮಾನ್ಯ ಷರತ್ತುಗಳನ್ನು ನಿಗದಿಪಡಿಸುತ್ತದೆ ಮತ್ತು ಅನುದಾನ ಬಿಡುಗಡೆಯನ್ನು ನಿಯಂತ್ರಿಸಲು ಕಾಲಕಾಲಕ್ಕೆ ಹೊರಡಿಸಲಾದ ಆದೇಶಗಳು/ಸೂಚನೆಗಳೊಂದಿಗೆ ಇದು ಪೂರಕವಾಗಿದೆ.

ಅನುದಾನಿತ ಶಿಕ್ಷಣ ಸಂಸ್ಥೆಗಳು ತಮ್ಮ ರಾಜಸ್ವದ ಶೇಕಡಾ 50ರಷ್ಟನ್ನು ಸರ್ಕಾರಕ್ಕೆ ಜಮೆ ಮಾಡಬೇಕು ಮತ್ತು ಮರುಕಳಿಸುವ ವೆಚ್ಚವನ್ನು ಭರಿಸಲು ಉಳಿದ ಅರ್ಧವನ್ನು ಉಳಿಸಿಕೊಳ್ಳಬೇಕು ಎಂದು ರಾಜ್ಯ ಸರ್ಕಾರವು ನಿಗದಿಪಡಿಸಿತ್ತು (ಡಿಸೆಂಬರ್ 2008). ಹಾಗೆ ಉಳಿಸಿಕೊಂಡ ಮೊತ್ತವನ್ನು ಸ್ವೀಕಾರಾರ್ಹ ಅನುದಾನಗಳ ಲೆಕ್ಕಾಚಾರದ ಉದ್ದೇಶಕ್ಕಾಗಿ ಸಂಸ್ಥೆಗಳ ರಾಜಸ್ವವೆಂದು ಪರಿಗಣಿಸಲಾಗುವುದಿಲ್ಲ. 2008-09ರ ಶೈಕ್ಷಣಿಕ ವರ್ಷದಿಂದ ಈ ಆದೇಶವು ಜಾರಿಗೆ ಬಂದಿತು. ಸಹಾಯಾನುದಾನ ಸಂಹಿತೆಯು ಸಹ ಅನುದಾನಿತ ಸಂಸ್ಥೆಗಳು ಸರ್ಕಾರಕ್ಕೆ ಸೂಕ್ತವಾಗಿ ಲೆಕ್ಕಪರಿಶೋಧನೆ ಮಾಡಿದ ಲೆಕ್ಕಪತ್ರಗಳ ವಾರ್ಷಿಕ ತ:ಖ್ತೆಯನ್ನು ಸಲ್ಲಿಸುವ ಅಗತ್ಯವಿದೆ ಎಂದು ನಿರ್ದಿಷ್ಟಪಡಿಸಿದೆ.

ಇದಲ್ಲದೆ, ರಾಜ್ಯ ನಿಧಿಯಿಂದ ಅನುದಾನವನ್ನು ಪಡೆಯುವ ಪ್ರತಿಯೊಂದು ಶಿಕ್ಷಣ ಸಂಸ್ಥೆಯ ಲೆಕ್ಕಪತ್ರಗಳನ್ನು ಪ್ರತಿ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಲೆಕ್ಕಪರಿಶೋಧನೆ ಮಾಡಬೇಕೆಂದು ಕರ್ನಾಟಕ ಶಿಕ್ಷಣ ಕಾಯಿದೆ, 1983 ನಿಗದಿಪಡಿಸಿದೆ. ತಾಂತ್ರಿಕ ಶಿಕ್ಷಣ ಆಯುಕ್ತರು ರಾಜ್ಯದ ಎಲ್ಲಾ ಅನುದಾನಿತ ತಾಂತ್ರಿಕ ಸಂಸ್ಥೆಗಳ ವಾರ್ಷಿಕ ಲೆಕ್ಕಪರಿಶೋಧನೆಯನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿದ್ದರು.

ಫೆಬ್ರುವರಿ 2010 ರವರೆಗೆ ತಾಂತ್ರಿಕ ಶಿಕ್ಷಣ ನಿರ್ದೇಶಕರು ಅನುದಾನಿತ ಪಾಲಿಟೆಕ್ನಿಕ್‌ಗಳ ಸಿಬ್ಬಂದಿಗೆ ವೇತನ ಅನುದಾನವನ್ನು ಪ್ರಾಂಶುಪಾಲರ ಖಾತೆಯ ಮೂಲಕ ಬಿಡುಗಡೆ ಮಾಡುತ್ತಿದ್ದರು. ಈ ಸಂಸ್ಥೆಗಳ ಲೆಕ್ಕಪರಿಶೋಧನೆಯ ಸಮಯದಲ್ಲಿ ಇಲಾಖೆಯಿಂದ ಗಮನಿಸಲಾದ ಯಾವುದೇ ಹಣ ರವಾನೆಗಳ ಕಡಿತವನ್ನು ನಂತರದ ಬಿಡುಗಡೆಗಳಿಗೆ ಪ್ರತಿಯಾಗಿ ಸರಿಹೊಂದಿಸಲಾಗುತ್ತಿತ್ತು. ಆದರೆ, ಮಾರ್ಚ್ 2010ರಿಂದ ಸಿಬ್ಬಂದಿಯ ವೇತನವನ್ನು ಎಲೆಕ್ಟ್ರಾನಿಕ್ ಕ್ಲಿಯರೆನ್ಸ್ ಸಿಸ್ಟಮ್ ಮೂಲಕ ಅವರ ವೈಯಕ್ತಿಕ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತಿತ್ತು ಮತ್ತು ಅಕ್ಟೋಬರ್ 2019ರಿಂದ ಸಂಬಳದ ಬಿಲ್‌ಗಳನ್ನು ಹೆಚ್‌ಆರ್‌ಎಮ್‌ಎಸ್ ಮೂಲಕ ತಯಾರಿಸಿ ಖಜಾನೆ-2ರ ಮೂಲಕ ಪಾವತಿಗಳನ್ನು ಮಾಡಲಾಗುತ್ತಿತ್ತು. ತತ್ಪರಿಣಾಮವಾಗಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ಪಾಲಿಟೆಕ್ನಿಕ್ ಸಂಸ್ಥೆಗಳಿಂದ ಜಮೆಗಳಲ್ಲಿನ ಕಡಿತಗಳನ್ನು ಸರಿಹೊಂದಿಸಲು ಸಾಧ್ಯವಾಗುತ್ತಿರಲಿಲ್ಲ.

2019-20ನೇ ಅವಧಿಯ 44 ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಎರಡು[47] ಪಾಲಿಟೆಕ್ನಿಕ್‌ಗಳನ್ನು ಒಳಗೊಂಡ ತಾಂತ್ರಿಕ ಶಿಕ್ಷಣ ಇಲಾಖೆಯ ಅನುಸರಣಾ ಲೆಕ್ಕಪರಿಶೋಧನೆಯನ್ನು ಆಗಸ್ಟ್ 2020ರಿಂದ ಮಾರ್ಚ್ 2021ರ ಅವಧಿಯಲ್ಲಿ ನಡೆಸಲಾಯಿತು. ಪರೀಕ್ಷಾ-ತನಿಖೆ ನಡೆಸಿ ಈ ಎರಡೂ ಸಂಸ್ಥೆಗಳಲ್ಲಿ ₹ 35.67 ಲಕ್ಷದ ಬೋಧನಾ ಶುಲ್ಕವನ್ನು ರಾಜ್ಯ ಸರ್ಕಾರಕ್ಕೆ ಜಮೆ ಮಾಡದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತರುವಾಯ, 2010-11ರ ನಂತರದಲ್ಲಿ ರಾಜ್ಯದ ಎಲ್ಲಾ ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಿದ ಮತ್ತು ಪಾವತಿಸಿದ ಶುಲ್ಕದ ವಿವರಗಳನ್ನು ತಾಂತ್ರಿಕ ಶಿಕ್ಷಣ ನಿರ್ದೇಶಕರಿಂದ ಕೇಳಲಾಯಿತು

[47] ಇಂಪ್ಯಾಕ್ಟ್ ಪಾಲಿಟೆಕ್ನಿಕ್, ಬೆಂಗಳೂರು ಮತ್ತು ಎಮ್‌ಇಐ ಪಾಲಿಟೆಕ್ನಿಕ್, ಬೆಂಗಳೂರು.

(ಜೂನ್ 2021). ಅವರಿಂದ ಪಡೆದ ಮಾಹಿತಿಯ ಲೆಕ್ಕಪರಿಶೋಧನಾ ಪರಿಶೀಲನೆಯು 19 ಸಂಸ್ಥೆಗಳು ನಿಯಮಿತವಾಗಿ ಸರ್ಕಾರಕ್ಕೆ ಮೊತ್ತವನ್ನು ಜಮೆ ಮಾಡುತ್ತಿದ್ದರೆ ಇತರ 25 ಸಂಸ್ಥೆಗಳು ಡಿಸೆಂಬರ್ 2021ರಲ್ಲಿದ್ದಂತೆ ಒಟ್ಟು ₹ 3.38 ಕೋಟಿ ಮೊತ್ತವನ್ನು ಜಮೆ ಮಾಡಿರಲಿಲ್ಲ ಎಂಬುದನ್ನು ತಿಳಿಯಪಡಿಸಿತು. ಈ 25 ಸಂಸ್ಥೆಗಳಿಂದ ವರ್ಷವಾರು ಬಾಕಿ ಉಳಿದಿರುವ ಮೊತ್ತದ ಮೇಲಿನ ಬಡ್ಡಿಯು, ವಾರ್ಷಿಕ ಶೇಕಡಾ ಮೂರರಷ್ಟು ಅತ್ಯಲ್ಪ ದರದಲ್ಲಿ ಲೆಕ್ಕಪರಿಶೋಧನೆಯು ಲೆಕ್ಕ ಹಾಕಿದಂತೆ ₹ 61.46 ಲಕ್ಷವಾಗಿತ್ತು. ಒಟ್ಟು ಬಾಕಿ ಇರುವ ಮೊತ್ತ ಮತ್ತು ಅದರ ಮೇಲಿನ ಬಡ್ಡಿಯ ವಿವರಗಳನ್ನು **ಅನುಬಂಧ–2.6**ರಲ್ಲಿ ನೀಡಲಾಗಿದೆ.

ಬೋಧನಾ ಶುಲ್ಕವನ್ನು ಜಮೆ ಮಾಡದಿರುವುದಕ್ಕೆ ಕಾರಣಗಳು ದಾಖಲೆಗಳಿಂದ ಕಂಡುಬರಲಿಲ್ಲ. ಹೆಚ್‌ಆರ್‌ಎಮ್‌ಎಸ್ ಮೂಲಕ ವೇತನದ ಬಿಲ್‌ಗಳನ್ನು ತಯಾರಿಸಿದ ಪರಿಣಾಮವಾಗಿ ಶುಲ್ಕಗಳ ಸಮಯೋಚಿತ ಜಮೆಯನ್ನು ಮೇಲ್ವಿಚಾರಣೆ ಮಾಡುವ ಕಾರ್ಯವಿಧಾನವು ಇಲಾಖೆಯಲ್ಲಿ ಅಸ್ತಿತ್ವದಲ್ಲಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಇದಲ್ಲದೆ, ಕಡ್ಡಾಯವಾಗಿ ನಡೆಸಬೇಕಿದ್ದ ಎಲ್ಲಾ ಸಂಸ್ಥೆಗಳ ವಾರ್ಷಿಕ ಲೆಕ್ಕಪರಿಶೋಧನೆಯನ್ನೂ ಸಹ ನಡೆಸಿರಲಿಲ್ಲ. ತಾಂತ್ರಿಕ ಶಿಕ್ಷಣ ನಿರ್ದೇಶಕರಿಂದ ಲೆಕ್ಕಪರಿಶೋಧನೆ ನಡೆಸುವಲ್ಲಿ ಕೊರತೆಯಿದೆ ಎಂದು ಲೆಕ್ಕಪರಿಶೋಧನಾ ವಿಶ್ಲೇಷಣೆಯು ತಿಳಿಯಪಡಿಸಿತು. 2017–18ರಿಂದ[48] 2020–21ರ ಅವಧಿಯಲ್ಲಿ ಲೆಕ್ಕಪರಿಶೋಧನೆ ಮಾಡಲಾದ ಕಾಲೇಜುಗಳ ಸಂಖ್ಯೆಯು 1ರಿಂದ 14ರ ವ್ಯಾಪ್ತಿಯಲ್ಲಿದ್ದಿತು ಎಂದು ಗಮನಿಸಲಾಯಿತು ಮತ್ತು ತಾಂತ್ರಿಕ ಶಿಕ್ಷಣ ನಿರ್ದೇಶಕರಿಂದ ಲೆಕ್ಕಪರಿಶೋಧಿಸಲಾದ ಅನುದಾನಿತ ಪಾಲಿಟೆಕ್ನಿಕ್‌ಗಳ ಸಂಖ್ಯೆಯ ವರ್ಷವಾರು ವಿವರಗಳನ್ನು **ಅನುಬಂಧ–2.7**ರಲ್ಲಿ ನೀಡಲಾಗಿದೆ.

ರಾಜ್ಯ ಸರ್ಕಾರವು ಈ ಕೆಳಗಿನಂತೆ ತಿಳಿಸಿತು (ಮಾರ್ಚ್ 2022):

- ಯಾವುದೇ ಶಿಸ್ತು ಕ್ರಮವನ್ನು ತಪ್ಪಿಸಲು ಬಾಕಿ ಉಳಿದಿರುವ ಬೋಧನಾ ಶುಲ್ಕವನ್ನು ತಕ್ಷಣವೇ ಪಾವತಿಸಲು ಎಲ್ಲಾ ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ಸುತ್ತೋಲೆ ಹೊರಡಿಸಲಾಗಿದೆ ಮತ್ತು 10 ಸಂಸ್ಥೆಗಳಿಂದ[49] ₹ 59.31 ಲಕ್ಷ ಮೊತ್ತವನ್ನು ವಸೂಲಿ ಮಾಡಲಾಗಿದೆ.
- ಪ್ರಮಾಣೀಕೃತ ವಾರ್ಷಿಕ ಲೆಕ್ಕಪತ್ರಗಳನ್ನು ಇಲಾಖೆಗೆ ಸಲ್ಲಿಸಲು ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ಸೂಚನೆಗಳನ್ನು ನೀಡಲಾಗಿದೆ.
- ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಶಿಕ್ಷಣ ಮತ್ತು ಅಭಿವೃದ್ಧಿ ಶುಲ್ಕಗಳ ಜಮೆಯ ಮೇಲ್ವಿಚಾರಣೆಗಾಗಿ ವ್ಯವಸ್ಥೆಯನ್ನು ಜಾರಿಗೊಳಿಸಲು ಯೋಜಿಸಲಾಗಿದೆ; ಮತ್ತು
- ಸಿಬ್ಬಂದಿ ಕೊರತೆಯಿಂದಾಗಿ ಆಂತರಿಕ ಲೆಕ್ಕ ಪರಿಶೋಧನೆಯನ್ನು ನಡೆಸಲಾಗಲಿಲ್ಲ ಹಾಗೂ ಸಿಬ್ಬಂದಿಗೆ ಬೇರೆ ಬೇರೆ ಜವಾಬ್ದಾರಿಗಳನ್ನು ವಹಿಸಲಾಗಿತ್ತು.

ಇಲಾಖೆಯು ಅನುದಾನವನ್ನು ಕಡಿಮೆ ಜಮೆಯಾಗಿದ್ದ ₹ 2.79 ಕೋಟಿಯಷ್ಟು ಮಟ್ಟಿಗೆ ನಿಯಂತ್ರಿಸಬೇಕಾಗಿದ್ದರಿಂದ ಸರ್ಕಾರದ ಉತ್ತರವನ್ನು ಒಪ್ಪಲಾಗುವುದಿಲ್ಲ. ಸರ್ಕಾರದ ನಿರ್ದೇಶನಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ವಾರ್ಷಿಕ ಲೆಕ್ಕಪರಿಶೋಧಕ ಲೆಕ್ಕಪತ್ರಗಳನ್ನು ಮೇಲ್ವಿಚಾರಣೆ ಮಾಡಲು ಇಲಾಖೆಯು ಜವಾಬ್ದಾರವಾಗಿರುತ್ತದೆ.

ಹೀಗೆ, ಇಲಾಖೆಯಲ್ಲಿ ಆಂತರಿಕ ನಿಯಂತ್ರಣ ಕಾರ್ಯವಿಧಾನದ ಅನುಪಸ್ಥಿತಿಯಿಂದ 18 ಅನುದಾನಿತ ಸಂಸ್ಥೆಗಳು 2010–11ರಿಂದ 2020–21ರ ಅವಧಿಯಲ್ಲಿ ಸರ್ಕಾರಕ್ಕೆ ಜಮೆ ಮಾಡದೆ ₹ 2.79 ಕೋಟಿ (₹ 3.38 ಕೋಟಿ–₹ 0.59 ಕೋಟಿ) ಮೊತ್ತವನ್ನು ತಮ್ಮೊಂದಿಗೆ ಉಳಿಸಿಕೊಂಡಿದ್ದವು.

[48] 2017–18ಕ್ಕೆ ಮೊದಲು ಲೆಕ್ಕಪರಿಶೋಧನೆ ಮಾಡಿದ ಪಾಲಿಟೆಕ್ನಿಕ್‌ಗಳಿಗೆ ಸಂಬಂಧಿಸಿದ ದತ್ತಾಂಶವನ್ನು ಒದಗಿಸಿಲ್ಲ.

[49] ಏಳು ಸಂಸ್ಥೆಗಳು ಪೂರ್ಣ ಮೊತ್ತವನ್ನು ಹಾಗೂ ಮೂರು ಸಂಸ್ಥೆಗಳು ಅಂಶಿಕ ಮೊತ್ತವನ್ನು ಜಮೆ ಮಾಡಿದ್ದವು..

**ಅನುದಾನಿತ ಸಂಸ್ಥೆಗಳ ನಿಯಮಿತ ಲೆಕ್ಕಪರಿಶೋಧನೆ ಮತ್ತು ಬಾಕಿಗಳನ್ನು ಸಕಾಲಿಕವಾಗಿ ಪಾವತಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಹಾಗೂ ಯಾವುದೇ ಕರ್ತವ್ಯಲೋಪಕ್ಕೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.**

## 2.5 ಅರ್ಹತೆಯ ಪ್ರಕಾರ ಮನೆ ಬಾಡಿಗೆ ಭತ್ಯೆಯನ್ನು ನಿಯಂತ್ರಿಸದಿರುವುದು

**ಸರ್ಕಾರವು ಸೂಚಿಸಿದಂತೆ ಮನೆ ಬಾಡಿಗೆ ಭತ್ಯೆ ಪಾವತಿಯನ್ನು ನಿಯಂತ್ರಿಸುವಲ್ಲಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣದ ಆಯುಕ್ತರ ವಿಫಲತೆಯು 68 ಅಧಿಕಾರಿಗಳಿಗೆ ₹ 2.18 ಕೋಟಿ ಅಧಿಕ ಪಾವತಿಯಲ್ಲಿ ಪರಿಣಮಿಸಿತಲ್ಲದೇ ಇತರ 337 ಅಧಿಕಾರಿಗಳಿಗೆ ಪ್ರಯೋಜನವನ್ನು ವಂಚಿಸಿದಂತಾಯಿತು.**

ವಿಶ್ವವಿದ್ಯಾಲಯ ಅನುದಾನ ಆಯೋಗದ ವೇತನ ಶ್ರೇಣಿಗಳನ್ನು ಪಡೆಯುತ್ತಿರುವವನ್ನು ಒಳಗೊಂಡಂತೆ ಕರ್ನಾಟಕ ಸರ್ಕಾರದ ನೌಕರರು ಭತ್ಯೆಗಳ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಸೂಚಿಸಿದ ಆದೇಶಗಳು/ ನಿಯಮಗಳು ಮತ್ತು ನಿಬಂಧನೆಗಳ ಮೂಲಕ ನಿಯಂತ್ರಿಸಲ್ಪಡುತ್ತಾರೆ. ಮನೆ ಬಾಡಿಗೆ ಭತ್ಯೆ ನಗರಗಳು, ಪಟ್ಟಣಗಳು ಮತ್ತು ಇತರ ಸ್ಥಳಗಳ ವರ್ಗೀಕರಣದ ಆಧಾರದ ಮೇಲೆ ಉದ್ಯೋಗಿಗಳಿಗೆ ಪಾವತಿಸುವ ಒಂದು ಭತ್ಯೆಯಾಗಿದೆ ಮತ್ತು ರಾಜ್ಯ ಸರ್ಕಾರವು ನಿಗದಿಪಡಿಸಿದಂತೆ (ಅಕ್ಟೋಬರ್ 2012 ಮತ್ತು ಸೆಪ್ಟೆಂಬರ್ 2013) ಉದ್ಯೋಗಿಗಳ ನಿವಾಸದ ಸ್ಥಳವನ್ನು ಪರಿಗಣಿಸದೇ ಕರ್ತವ್ಯ ನಿರ್ವಹಿಸುವ ಸ್ಥಳವು ಮನೆ ಬಾಡಿಗೆ ಭತ್ಯೆ ಪಾವತಿಯ ಮಾನದಂಡವಾಗಿರುತ್ತದೆ.

ಅಧಿಕಾರಿಗಳನ್ನು ಅವರ ಸ್ಥಳ ನಿಯುಕ್ತಿ/ಕರ್ತವ್ಯದ ಸ್ಥಳವನ್ನು ಹೊರತುಪಡಿಸಿ ಬೇರೆ ಸ್ಥಳಗಳಿಗೆ ಪ್ರತಿನಿಯೋಜಿಸಿದ್ದರೂ ಸಹ ಮನೆ ಬಾಡಿಗೆ ಭತ್ಯೆಯನ್ನು ಪ್ರತಿನಿಯೋಜಿತ ಸ್ಥಳಕ್ಕೆ ಬದಲಾಗಿ ಮೂಲ ಸ್ಥಳಕ್ಕೆ ಅನ್ವಯವಾಗುವ ದರದಲ್ಲಿ ಪಾವತಿಸಲಾಗಿತ್ತು ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರ ದಾಖಲೆಗಳ ಪರಿಶೀಲನೆಯು ತಿಳಿಯಪಡಿಸಿತು.

ಇತರ ಸ್ಥಳಗಳಿಗೆ ಅಧಿಕಾರಿಗಳನ್ನು ಪ್ರತಿನಿಯೋಜಿಸಿದಾಗ, ಸಂಬಂಧಿಸಿದ ಡಿಡಿಒಗಳು (ಕಾಲೇಜುಗಳ ಪ್ರಾಂಶುಪಾಲರು) ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಲ್ಲಿ (ಎಚ್‌ಆರ್‌ಎಂಎಸ್)[50] ಮನೆ ಬಾಡಿಗೆ ಭತ್ಯೆಯ ಲೆಕ್ಕಾಚಾರ ಮಾಡಲು ಅನುಗುಣವಾದ ಕ್ಷೇತ್ರಗಳನ್ನು ಮಾರ್ಪಡಿಸಲು ವಿಫಲರಾಗಿದ್ದರು ಮತ್ತು ಪ್ರತಿನಿಯೋಜನೆಯಲ್ಲಿರುವ ಅಧಿಕಾರಿಗಳ ವೇತನವನ್ನು ನಿರ್ವಹಿಸುತ್ತಿದ್ದ ಮೂಲ ಸ್ಥಳಕ್ಕೆ ಅನ್ವಯವಾಗುವ ದರದಲ್ಲಿ ಪೋಷಕ ಕಛೇರಿಯಿಂದ ಪಡೆಯಲಾಗಿತ್ತು.

ಮಾರ್ಚ್ 2021 ರಲ್ಲಿದ್ದಂತೆ ಪ್ರತಿನಿಯೋಜನೆಯಲ್ಲಿದ್ದ ಅಧಿಕಾರಿಗಳ ವಿವರಗಳನ್ನು ಕೆಳಗಿನ **ಕೋಷ್ಟಕ-2.12** ರಲ್ಲಿ ನೀಡಲಾಗಿದೆ

**ಕೋಷ್ಟಕ-2.12: ಪ್ರತಿನಿಯೋಜನೆ ಮೇಲಿರುವ ಸಿಬ್ಬಂದಿಯ ವಿವರಗಳು**

| ಪ್ರತಿನಿಯೋಜನೆಯಲ್ಲಿದ್ದ ಸಿಬ್ಬಂದಿ | ಕಾಲೇಜು ಶಿಕ್ಷಣ | ತಾಂತ್ರಿಕ ಶಿಕ್ಷಣ | ಒಟ್ಟು |
|---|---|---|---|
| ಹೆಚ್ಚಿನ ದರದ ಮನೆಬಾಡಿಗೆ ಭತ್ಯೆ ಅನ್ವಯವಾಗುವ ಸ್ಥಳಗಳಿಂದ ಕಡಿಮೆ ದರ ಅನ್ವಯವಾಗುವ ಸ್ಥಳಗಳಿಗೆ | 61 | 25 | 86 |
| ಕಡಿಮೆ ದರದ ಮನೆಬಾಡಿಗೆ ಭತ್ಯೆ ಅನ್ವಯವಾಗುವ ಸ್ಥಳಗಳಿಂದ ಹೆಚ್ಚಿನ ದರ ಅನ್ವಯವಾಗುವ ಸ್ಥಳಗಳಿಗೆ | 254 | 83 | 337 |

[50] ಸರ್ಕಾರಿ ನೌಕರರ ಪ್ರಮೋಶನ್, ಸೇವಾ ದಾಖಲೆಗಳು, ವೇತನ ಮತ್ತು ಭತ್ಯೆಗಳು, ಇತ್ಯಾದಿಗಳು ಸೇರಿದಂತೆ ಎಲ್ಲಾ ವಿವರಗಳು HRMSನಲ್ಲಿ ನಿರ್ವಹಿಸಲಾಗುತ್ತದೆ.

ಹೆಚ್‌ಆರ್‌ಎಮ್‌ಎಸ್‌ನಲ್ಲಿ ವಾಸ್ತವವಾಗಿ ಕಾರ್ಯ ನಿರ್ವಹಿಸುತ್ತಿದ್ದ ಸ್ಥಳವನ್ನು ಇಂದೀಕರಿಸದಿರುವುದು ಹೆಚ್ಚಿನ ದರದ ಮನೆಬಾಡಿಗೆ ಭತ್ಯೆ ಅನ್ವಯವಾಗುವ ಸ್ಥಳಗಳಿಂದ ಕಡಿಮೆ ದರ ಅನ್ವಯವಾಗುವ ಸ್ಥಳಗಳಲ್ಲಿ ಪ್ರತಿನಿಯೋಜನೆಯಲ್ಲಿದ್ದ 86 ಉದ್ಯೋಗಿಗಳಿಗೆ ಮನೆ ಬಾಡಿ ಭತ್ಯೆಗೆ ಸಂಬಂಧಿಸಿದಂತೆ ₹ 2.18 ಕೋಟಿ (ಮೇ 2010ರಿಂದ ಮಾರ್ಚ್ 2021ರವರೆಗೆ) ಹೆಚ್ಚಿನ ಪಾವತಿಯಲ್ಲಿ ಪರಿಣಮಿಸಿತು. ಇದು ಅಕ್ಟೋಬರ್ 2012ರಲ್ಲಿ ಹೊರಡಿಸಲಾದ ಸರ್ಕಾರೀ ಆದೇಶದ ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದಲ್ಲದೇ ರಾಜ್ಯದ ಬೊಕ್ಕಸಕ್ಕೆ ಹೆಚ್ಚುವರಿ ಹೊರೆಗೆ ಕಾರಣವಾಯಿತು.

ಈ ಅಧಿಕಾರಿಗಳನ್ನು ಪ್ರತಿನಿಯೋಜನೆ ಮೇಲೆ ಎಂದು ಪರಿಗಣಿಸಬಾರದು ಆದರೆ 'ಬೇರೆ ಕರ್ತವ್ಯದ ಮೇಲೆ' (ಒಒಡಿ)' ಎಂದು ಪರಿಗಣಿಸಬೇಕು ಮತ್ತು ಪೋಷಕ ಕಛೇರಿಯ ಸ್ಥಳವನ್ನು ಕರ್ತವ್ಯದ ಸ್ಥಳವೆಂದು ಪರಿಗಣಿಸಿ ಪೋಷಕ ಕಚೇರಿಯಿಂದ ವೇತನ ಮತ್ತು ಭತ್ಯೆಗಳನ್ನು ಪಾವತಿಸಲಾಗಿತ್ತು ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರು ತಿಳಿಸಿದರು (ಜನವರಿ 2022). ಕರ್ನಾಟಕ ನಾಗರಿಕ ಸೇವೆಗಳ ನಿಯಮಗಳು, 1958ರ ನಿಯಮ 8(15)(ಜಿ) ಇಲಾಖೆಯ ಮುಖ್ಯಸ್ಥರು ಒಂದು ತಿಂಗಳಿಗಿಂತ ಹೆಚ್ಚಿಗೆ ಇಲ್ಲದ ಅವಧಿಗೆ ಮಾತ್ರ ವಿಶೇಷ ಕರ್ತವ್ಯಕ್ಕೆ ತಾತ್ಕಾಲಿಕವಾಗಿ ಅಧಿಕಾರಿಗಳನ್ನು ನಿಯೋಜಿಸಲು ಅನುಮತಿ ನೀಡುತ್ತದೆಯಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. 10 ವರ್ಷಗಳಿಗೂ ಹೆಚ್ಚು ಕಾಲ ನಿರಂತರವಾಗಿ ಪ್ರತಿನಿಯೋಜನೆ ಮೇಲಿರುವ ಅಧಿಕಾರಿಗಳ ನಿದರ್ಶನಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಇದಲ್ಲದೆ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರು ಒಂದು ಸುತ್ತೋಲೆಯನ್ನು ಹೊರಡಿಸಿ (ಜನವರಿ 2022) ಕಡಿಮೆ ದರದ ಮನೆ ಬಾಡಿಗೆ ಭತ್ಯೆ ಅನ್ವಯಿಸುವ ಸ್ಥಳಕ್ಕೆ ನಿಯೋಜಿಸಲಾದ ಅಧಿಕಾರಿಗಳಿಂದ ಪಾವತಿ ಮಾಡಿರುವ ಅರ್ಹತೆಗಿಂತ ಹೆಚ್ಚಿನ ಮನೆಬಾಡಿಗೆ ಭತ್ಯೆಯನ್ನು ಹಿಂಪಡೆಯಲು ಸೂಚಿಸಿದರು. ಆದರೆ ಕಡಿಮೆ ಮನೆಬಾಡಿಗೆ ಭತ್ಯೆ ಅನ್ವಯವಾಗುವ ಸ್ಥಳದಿಂದ ಹೆಚ್ಚಿನ ಭತ್ಯೆ ಅನ್ವಯವಾಗುವ ಸ್ಥಳಕ್ಕೆ ನಿಯೋಜಿಸಲಾದ 337 ಅಧಿಕಾರಿಗಳ ಬಗ್ಗೆ ಸುತ್ತೋಲೆ ಮೌನವಾಗಿತ್ತು ಮತ್ತು ಹೀಗಾಗಿ ಆಯುಕ್ತರ ಕ್ರಮವು ಅನುಚಿತವಾಗಿತ್ತು. ಲೆಕ್ಕಪರಿಶೋಧನೆಯ ಪ್ರಕಾರ, 254 ಅಧಿಕಾರಿಗಳಿಗೆ[51] ಸಂಬಂಧಿಸಿದಂತೆ ಅರ್ಹ ಮನೆಬಾಡಿಗೆ ಭತ್ಯೆಯ ಪಾವತಿಗೆ ಸರ್ಕಾರದ ಮೇಲಿನ ಹೊಣೆಗಾರಿಕೆಯು ₹ 7.02 ಕೋಟಿಯಾಗುತ್ತದೆ (ಸೆಪ್ಟೆಂಬರ್ 2008 ರಿಂದ ಮಾರ್ಚ್ 2021 ರವರೆಗೆ).

ಹೆಚ್ಚಿನ ದರದ ಮನೆಬಾಡಿಗೆ ಭತ್ಯೆ ಅನ್ವಯವಾಗುವ ಸ್ಥಳಗಳಿಂದ ಕಡಿಮೆ ದರ ಅನ್ವಯವಾಗುವ ಸ್ಥಳಗಳಿಗೆ ನಿಯೋಜಿಸಲಾದ ಅಧಿಕಾರಿಗಳಿಂದ ₹ 2.18 ಕೋಟಿಯಲ್ಲಿ ₹ 7.64 ಲಕ್ಷವನ್ನು ವಸೂಲು ಮಾಡಲಾಗಿದೆ ಎಂದು ಸರ್ಕಾರವು ತಿಳಿಸಿತು (ಜುಲೈ 2022). ಇದಲ್ಲದೆ ವೈಯಕ್ತಿಕ ವಿನಂತಿಗಳ ಮೇಲಿನ ಪ್ರತಿನಿಯೋಜನೆಯನ್ನು ಪರಿಗಣಿಸಿ ಕ್ರಮ ತೆಗೆದುಕೊಳ್ಳಲಾಗುವುದು ಮತ್ತು ಇನ್ನು ಮುಂದೆ ಅಧಿಕಾರಿಗಳ ನಿಯೋಜನೆಯನ್ನು ಸ್ಥಗಿತಗೊಳಿಸಿರುವುದಾಗಿಯೂ ಸಹ ಸರ್ಕಾರವು ತಿಳಿಸಿತು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರಿಂದ ಕರ್ನಾಟಕ ನಾಗರಿಕ ಸೇವೆಗಳ ನಿಯಮಗಳ ನಿಬಂಧನೆಗಳನ್ನು ಉಲ್ಲಂಘನೆಯಾಗಿರುವುದು ಮತ್ತು ಮನೆಬಾಡಿಗೆ ಭತ್ಯೆ ನಿಯಂತ್ರಣಕ್ಕಾಗಿ ಸರ್ಕಾರದ ಷರತ್ತುಗಳನ್ನು ಕಡೆಗಣಿಸಿರುವುದು ಒಂದು ಕಡೆ ಅರ್ಹತೆಗಿಂತ ಹೆಚ್ಚಿನ ಪ್ರಯೋಜನಗಳನ್ನು ವಿಸ್ತರಿಸುವಲ್ಲಿ ಮತ್ತು ಇನ್ನೊಂದು ಕಡೆ ಅರ್ಹ ಅಧಿಕಾರಿಗಳಿಗೆ ಪ್ರಯೋಜನಗಳನ್ನು ನಿರಾಕರಿಸುವಲ್ಲಿ ಪರಿಣಮಿಸಿತು.

**ಸಂಬಂಧಪಟ್ಟ ಅಧಿಕಾರಿಗಳು/ಸಿಬ್ಬಂದಿಯಿಂದ ಮಾಡಿದ ಹೆಚ್ಚುವರಿ ಪಾವತಿಗಳನ್ನು ವಸೂಲಿ ಮಾಡುವುದರ ಜೊತೆಗೆ, ಎಲ್ಲಾ ಇಲಾಖೆಗಳು ಕರ್ನಾಟಕ ನಾಗರಿಕ ಸೇವೆಗಳ ನಿಯಮಗಳು ಮತ್ತು ಭತ್ಯೆಗಳ ನಿಯಂತ್ರಣದ**

[51] ತಾಂತ್ರಿಕ ಶಿಕ್ಷಣದಡಿ ಪ್ರತಿನಿಯೋಜನೆಯ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ 83 ಅಧಿಕಾರಿಗಳಿಗೆ ಸಂಬಂಧಿಸಿದಂತೆ ವೇತನ ಮತ್ತು ಭತ್ಯೆಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರಲಿಲ್ಲ.

**ನಿಬಂಧನೆಗಳಿಗೆ ಕಟ್ಟುನಿಟ್ಟಾದ ಅನುಸರಣೆ ಮಾಡುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕೆಂದು ಶಿಫಾರಸು ಮಾಡಲಾಗಿದೆ.**

## ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ

### 2.6 ಕಾಲು ಮತ್ತು ಬಾಯಿ ರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ ವ್ಯಾಕ್ಸಿನ್ ವೈಲ್ ಮಾನಿಟರ್‌ಗಳ ದರದ ತಪ್ಪಾದ ಪರಿಗಣನೆಯಿಂದಾಗಿ ಅಧಿಕ ವೆಚ್ಚ

**ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯು ವ್ಯಾಕ್ಸಿನ್ ವೈಲ್ ಮಾನಿಟರ್‌ಗಳ ದರವನ್ನು ಲೆಕ್ಕ ಹಾಕಲು ವೈಲ್‌ಗಳ ಸಂಖ್ಯೆಯನ್ನು ಪರಿಗಣಿಸುವ ಬದಲು ಡೋಸ್‌ಗಳ ಸಂಖ್ಯೆಯನ್ನು ಪರಿಗಣಿಸಿದ್ದು ₹ 7.66 ಕೋಟಿ ಅಧಿಕ ವೆಚ್ಚದಲ್ಲಿ ಪರಿಣಮಿಸಿತು.**

ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯು 2018-19 ಮತ್ತು 2019-20ರ ಅವಧಿಯಲ್ಲಿ ಅನುಕ್ರಮವಾಗಿ ಕೇಂದ್ರ ಪ್ರಾಯೋಜಿತ 'ಕಾಲು ಮತ್ತು ಬಾಯಿ ರೋಗ ನಿಯಂತ್ರಣ ಕಾರ್ಯಕ್ರಮದ 15 ಮತ್ತು 16ನೇ ಸುತ್ತಿನ ಲಸಿಕೆಯನ್ನು ಅನುಷ್ಠಾನಗೊಳಿಸಿತು. ನವೆಂಬರ್ 2018ರಲ್ಲಿ 15ನೇ ಸುತ್ತಿನ ಲಸಿಕೆಗಾಗಿ ಮತ್ತು ಮೇ 2019ರಲ್ಲಿ 16ನೇ ಸುತ್ತಿಗೆ ಅನುಕ್ರಮವಾಗಿ ನಿಗದಿತ ಲಸಿಕೆ ತಳಿಗಳೊಂದಿಗೆ ಎಫ್‌ಎಂಡಿ ಆಯಿಲ್ ಅಡ್ಜುವಂಟ್ ಲಸಿಕೆಯನ್ನು ಪೂರೈಸಲು ಪ್ರತ್ಯೇಕವಾಗಿ ಎರಡು ಟೆಂಡರ್‌ಗಳನ್ನು ಆಹ್ವಾನಿಸಲಾಯಿತು. ಮೆ.ಬಯೋವೆಟ್ ಪ್ರೈವೇಟ್ ಲಿಮಿಟೆಡ್, ಮಾಲೂರು, ಕರ್ನಾಟಕ, ಇವರು ಎರಡೂ ಟೆಂಡರ್‌ಗಳಲ್ಲಿ ಕನಿಷ್ಠ ಬಿಡ್‌ದಾರರಾಗಿದ್ದು ಲಸಿಕೆಗಳ ಪೂರೈಕೆಯ ಗುತ್ತಿಗೆಯನ್ನು ಅವರಿಗೆ ನೀಡಲಾಯಿತು.

ಇಲಾಖೆಯು 15ನೇ ಸುತ್ತಿನ ಲಸಿಕೆಗಾಗಿ ಸರಬರಾಜು ಆದೇಶವನ್ನು ನೀಡುವಾಗ (ಜನವರಿ 2019) 83 ಲಕ್ಷ ಡೋಸ್‌ಗಳನ್ನು (ಪ್ರತಿ ಡೋಸ್‌ಗೆ 2 ಎಮ್‌ಎಲ್) ತಾಪಮಾನ ಮಾನಿಟರಿಂಗ್ ಕಾರ್ಡ್‌ನೊಂದಿಗೆ ಮತ್ತು 16ನೇ ಸುತ್ತಿನ ಲಸಿಕೆಗಾಗಿ (ಸೆಪ್ಟೆಂಬರ್ 2019) 110 ಲಕ್ಷ ಡೋಸ್‌ಗಳನ್ನು (ಪ್ರತಿ ಡೋಸ್‌ಗೆ 2 ಎಮ್‌ಎಲ್) ಕೋಲ್ಡ್ ಚೈನ್ ನಿರ್ವಹಣೆಗಾಗಿ ವ್ಯಾಕ್ಸಿನ್ ವೈಲ್ ಮಾನಿಟರ್‌ನೊಂದಿಗೆ ಸರಬರಾಜು ಮಾಡಬೇಕೆಂದು ಸೂಚಿಸಿತ್ತು.

ಭಾರತ ಸರ್ಕಾರವು ಜಿಇಎಂ ಪೋರ್ಟಲ್‌ನಲ್ಲಿ ಎಫ್‌ಎಂಡಿ ಲಸಿಕೆ ಖರೀದಿಯನ್ನು ಸೇರಿಸಿದಾಗ ನಿಗದಿತ ತಳಿಗಳೊಂದಿಗೆ ಲಸಿಕೆ ಸಂಯೋಜನೆಯನ್ನು ಅಧಿಸೂಚಿಸಿತ್ತು (ಮೇ 2019) ಎಂಬುದನ್ನು 2017-18ರಿಂದ 2019-20ರವರೆಗಿನ ಅವಧಿಗೆ ಬೆಂಗಳೂರಿನಲ್ಲಿನ ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಆಯುಕ್ತರ ಕಛೇರಿಯಲ್ಲಿನ ದಾಖಲೆಗಳ ಲೆಕ್ಕಪರಿಶೋಧನೆಯು ತಿಳಿಯಪಡಿಸಿತು. 16ನೇ ಸುತ್ತಿನ ಎಫ್‌ಎಂಡಿ ಲಸಿಕೆಯು ಒಂಬತ್ತು ತಿಂಗಳಿಗಿಂತ ಕಡಿಮೆಯಿಲ್ಲದ ಪ್ರತಿರಕ್ಷೆಯ ಅವಧಿಯೊಂದಿಗೆ ಎಫ್‌ಎಂಡಿ ವೈರಸ್‌ನ ಪ್ರತಿ ಸೆರೋ ಪ್ರಕಾರಕ್ಕೆ ಪ್ರತಿಯಾಗಿ ಶೇಕಡಾ 75ರ ರಕ್ಷಣೆಯನ್ನು ನೀಡಬೇಕು ಮತ್ತು ಶೀತ ಸರಪಳಿ ನಿರ್ವಹಣೆಯನ್ನು ನಿರ್ಣಯಿಸಲು ಟೆಂಪರೇಚರ್ ಮಾನಿಟರಿಂಗ್ ಕಾರ್ಡ್‌ನೊಂದಿಗೆ ಸರಬರಾಜು ಮಾಡಬೇಕು ಎಂದೂ ಸಹ ಅಧಿಸೂಚನೆಯಲ್ಲಿ ತಿಳಿಸಲಾಗಿತ್ತು.

ಲಸಿಕೆಗಳ ಪೂರೈಕೆಗಾಗಿ (16ನೇ ಸುತ್ತು) ಬಿಡ್-ಪೂರ್ವ ಸಭೆಯಲ್ಲಿ (4 ಜೂನ್ 2019) ಬಿಡ್‌ದಾರರು ಪ್ರತಿ ಬಾಕ್ಸ್‌ನಲ್ಲಿರುವ ತಾಪಮಾನ ಮಾನಿಟರಿಂಗ್ ಕಾರ್ಡ್‌ಗೆ ಹೋಲಿಸಿದರೆ ವ್ಯಾಕ್ಸಿನ್ ವೈಲ್ ಮಾನಿಟರ್‌ನೊಂದಿಗೆ ಲಸಿಕೆ ಬಾಟಲಿಯ ಬೆಲೆ ಹೆಚ್ಚಾಗಿರುತ್ತದೆ ಎಂದು ವ್ಯಕ್ತಪಡಿಸಿದ್ದರು. ಆದರೆ, ಭಾರತ ಸರ್ಕಾರವು ನಿರ್ದಿಷ್ಟಪಡಿಸದಿದ್ದರೂ ಸಹ ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಕ್ಷಮತೆ, ಗುಣಮಟ್ಟ ಮತ್ತು ಸುರಕ್ಷತೆಯ ಪ್ರಮಾಣೀಕೃತ ಮಾನದಂಡಗಳಿಗೆ ಅನುಗುಣವಾಗಿ ಶೀತ ಸರಪಳಿಯ ಪರಿಣಾಮಕಾರಿ

ಮೇಲ್ವಿಚಾರಣೆಗಾಗಿ ವ್ಯಾಕ್ಸಿನ್ ವೈಲ್ ಮಾನಿಟರ್‌ನೊಂದಿಗೆ ಪ್ರತಿ ಬಾಟಲಿಯನ್ನು ಲೇಬಲ್ ಮಾಡಲು ಟೆಂಡರ್ ಷರತ್ತುಗಳನ್ನು ಉಳಿಸಿಕೊಳ್ಳಲು ಟೆಂಡರ್ ಆಹ್ವಾನ ಸಮಿತಿಯು ನಿರ್ಧರಿಸಿತು.

ಮಾರಾಟಗಾರರೊಂದಿಗೆ ಮಾಡಿಕೊಂಡ ಗುತ್ತಿಗೆ ಒಪ್ಪಂದವು (2.20ರ ಷರತ್ತು (ಎಲ್) 2 ಎಮ್‌ಎಲ್ ಡೋಸ್‌ನ ಪ್ರತಿ ಯೂನಿಟ್ ಪ್ಯಾಕ್‌ಗೆ ₹ 15.72 ಒಪ್ಪಿಗೆ ದರದಲ್ಲಿ ವಿವಿಎಮ್–14 ಪ್ಯಾಕಿಂಗ್ ವಿಶಿಷ್ಟತೆಯೊಂದಿಗೆ ಡೋಸ್‌ಗಳ ಪ್ರಮಾಣಗಳ ಸಂಖ್ಯೆಯನ್ನು ಸೂಚಿಸದೆ ಲೇಬಲ್ ಮಾಡಲು ನಿಗದಿಪಡಿಸಲಾಗಿತ್ತು. ಆದಾಗ್ಯೂ, ಸರಬರಾಜು ಆದೇಶವನ್ನು (09 ಸೆಪ್ಟೆಂಬರ್ 2019) ನೀಡುವಾಗ ಆಯುಕ್ತರು  ಪ್ಯಾಕಿಂಗ್ ವಿವರಣೆಯು 50 ಎಮ್‌ಎಲ್ (25 ಡೋಸ್) ಮತ್ತು 100 ಎಮ್‌ಎಲ್ (50 ಡೋಸ್) ಸೂಕ್ತವಾದ ಪ್ಯಾಕಿಂಗ್ ಎಂದು ಸೂಚಿಸಿದ್ದರು. ₹ 17.24 ಕೋಟಿ ವೆಚ್ಚದಲ್ಲಿ ಒಟ್ಟು 109.70 ಲಕ್ಷ ಡೋಸ್‌ಗಳನ್ನು ಪೂರೈಸಲಾಗಿತ್ತು.

15 ನೇ ಸುತ್ತಿನ (ಜನವರಿ 2019) ಲಸಿಕೆಗಾಗಿ ಎಫ್‌ಎಮ್‌ಡಿ ಲಸಿಕೆಯನ್ನು ಅದೇ ಮಾರಾಟಗಾರರು 2 ಮಿಲಿ ಡೋಸ್‌ನ ಪ್ರತಿ ಯೂನಿಟ್ ಪ್ಯಾಕ್‌ಗೆ ₹ 8.55 ರಂತೆ (03 ಜನವರಿ 2019) ಲಸಿಕೆಯ ಪ್ರತಿ ಬಾಕ್ಸ್‌ನಲ್ಲಿ ತಾಪಮಾನ ಮಾನಿಟರಿಂಗ್ ಕಾರ್ಡ್‌ನೊಂದಿಗೆ ಸರಬರಾಜು ಮಾಡಿದರು. 15ನೇ ಮತ್ತು 16ನೇ ಸುತ್ತಿನ ವ್ಯಾಕ್ಸಿನೇಷನ್‌ನ ಪ್ರಮಾಣಪತ್ರದ ವಿಶ್ಲೇಷಣೆಯ ವರದಿಗಳ ಲೆಕ್ಕಪರಿಶೋಧನಾ ಪರಿಶೀಲನೆಯು ಪರೀಕ್ಷಾ ಫಲಿತಾಂಶಗಳ ಮೌಲ್ಯಗಳು ಒಂದೇ ರೀತಿಯಾಗಿದ್ದವು ಎಂಬುದನ್ನು ತಿಳಿಯಪಡಿಸಿತು.

ಮೇಲಿನ ದೃಷ್ಟಿಯಿಂದ, 15ನೇ ಸುತ್ತಿನ ಮತ್ತು 16ನೇ ಸುತ್ತಿನ ಸಮಯದಲ್ಲಿ ಸರಬರಾಜು ಮಾಡಲಾದ ಲಸಿಕೆಯು 16ನೇ ಸುತ್ತಿನಲ್ಲಿ ಪ್ರತಿ ಬಾಟಲಿಯ ಮೇಲೆ ವಿಎಮ್‌ಎಮ್‌ಅನ್ನು ಅಂಟಿಸುವುದನ್ನು ಹೊರತುಪಡಿಸಿ ಒಂದೇ ತರಹದ್ದಾಗಿದ್ದವು. 15ನೇ (₹ 8.55) ಮತ್ತು 16ನೇ (₹ 15.72) ಸುತ್ತಿನ ಲಸಿಕೆ ನಡುವಿನ ಪ್ರತಿ ಡೋಸ್‌ಗೆ ಎಫ್‌ಎಮ್‌ಡಿ ಲಸಿಕೆಯಲ್ಲಿನ ಬೆಲೆ ವ್ಯತ್ಯಾಸವು ₹ 7.17 ಆಗಿತ್ತು. 2.86 ಲಕ್ಷ ವೈಲ್‌ಗಳಿಗೆ ವಿಎಮ್‌ಎಮ್‌ಅನ್ನು ಅಂಟಿಸಲು ₹ 20,51,566/– (₹ 7.17 * 2,86,132) ಹೆಚ್ಚುವರಿ ವೆಚ್ಚವನ್ನು ಭರಿಸಲಾಗಿತ್ತು

ಟೆಂಪರೇಚರ್ ಮಾನಿಟರಿಂಗ್ ಕಾರ್ಡ್‌ನ ಬದಲಾಗಿ ಪ್ರತಿ ಸೀಸೆಗೆ ವಿವಿಎಮ್‌ಅನ್ನು ಅಂಟಿಸುವ ಇಲಾಖೆಯ ನಿರ್ಧಾರ ಮತ್ತು ವಿವಿಎಮ್‌ನೊಂದಿಗೆ ವೈಲ್‌ನ ವೆಚ್ಚವು ಹೆಚ್ಚಾಗಿರುತ್ತದೆ ಎಂಬ ಬಿಡ್‌ದಾರರ ಬೇಡಿಕೆಯು ಜಿಇಎಂ ಪೋರ್ಟಲ್‌ನ ಅಡಿಯಲ್ಲಿನ ಭಾರತ ಸರ್ಕಾರದ ವಿಶಿಷ್ಟತೆಗಳ ಪ್ರಕಾರ ಅನಪೇಕ್ಷಿತವಾಗಿತ್ತು. ಒಪ್ಪಂದದ ಪ್ರಕಾರ ಪ್ರತಿ ಡೋಸ್ ಬೆಲೆಗೆ ಪ್ರತಿಯಾಗಿ ವಿವಿಎಮ್‌ನೊಂದಿಗೆ (ಮಲ್ಟಿಪಲ್ ಡೋಸ್) ಪ್ರತಿ ಬಾಟಲಿಯ ಬೆಲೆಯನ್ನು ಮರುಪರಿಶೀಲಿಸಲು ಇಲಾಖೆಯು ವಿಫಲವಾಗಿದ್ದು ₹ 7.66 ಕೋಟಿ[52] ಹೆಚ್ಚುವರಿ ವೆಚ್ಚದಲ್ಲಿ ಪರಿಣಮಿಸಿತು.

4 ಜೂನ್ 2019ರಂದು ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಬಿಡ್–ಪೂರ್ವ ಸಭೆಯಲ್ಲಿ ಶೀತದ ಪರಿಣಾಮಕಾರಿ ಮೇಲ್ವಿಚಾರಣೆಗಾಗಿ ಪ್ರತಿ ವೈಲ್‌ಅನ್ನು ವಿವಿಎಮ್‌ನೊಂದಿಗೆ ಲೇಬಲ್ ಮಾಡಲು ಟೆಂಡರ್ ಷರತ್ತುಗಳನ್ನು ಉಳಿಸಿಕೊಳ್ಳಲು ನಿರ್ಧರಿಸಲಾಯಿತು ಎಂದು ರಾಜ್ಯ ಸರ್ಕಾರವು ತಿಳಿಸಿತು (ಆಗಸ್ಟ್ 2022).  ವಿವಿಎಮ್ ವೆಚ್ಚವನ್ನು ಒಳಗೊಂಡಂತೆ ಎಫ್‌ಎಮ್‌ಡಿ ಲಸಿಕೆಯ ಪ್ರತಿ ಡೋಸ್‌ಗೆ ದರವನ್ನು ನೀಡಲು ಬಿಡ್‌ದಾರರನ್ನು ಕೇಳಲಾಗಿತ್ತು ಮತ್ತು ಹಾಗಾಗಿ ವಿವಿಎಮ್ ವೆಚ್ಚವನ್ನು ಹಣಕಾಸು ಬಿಡ್‌ನಲ್ಲಿ ಪ್ರತ್ಯೇಕವಾಗಿ ತೋರಿಸಲಾಗಿಲ್ಲ ಎಂದೂ ಸಹ ತಿಳಿಸಲಾಯಿತು.

[52] (109.70 ಲಕ್ಷ ಡೋಸ್‌ಗಳು * ₹ 15.72= ₹ 17.24 ಕೋಟಿ) – (109.70 ಲಕ್ಷ * ₹ 8.55=₹ 9.37 ಕೋಟಿ) + (2,86,132 ವಯಲ್‌ಗಳು* ₹ 7.17= ₹ 0.21 ಕೋಟಿ) = ₹ 7.66 ಕೋಟಿ.

ವಿವಿಎಮ್ ಸೇರಿದಂತೆ ಪ್ರತಿ ಡೋಸ್ ಲಸಿಕೆಗೆ ₹15.72 ಬೆಲೆಗೆ ಕಂಪನಿಯು ಒಪ್ಪಿಕೊಂಡಿದ್ದರೂ ಬಹು ಡೋಸ್‌ಗಳನ್ನು ಒಳಗೊಂಡಿರುವ ಬಾಟಲ್‌ಗಳಲ್ಲಿ ಸರಬರಾಜು ಮಾಡಲಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಇಲಾಖೆಯು ಪ್ರತಿ ಡೋಸ್‌ಗೆ ವಿವಿಎಮ್ ಬೆಲೆಯನ್ನು ಪಾವತಿಸುವ ಬದಲು ವೈಲ್‌ಗಳ ಸಂಖ್ಯೆಗೆ ಪಾವತಿಸಿದ್ದು ಅಧಿಕ ವೆಚ್ಚದಲ್ಲಿ ಪರಿಣಮಿಸಿತು.

**ಶಿಫಾರಸು: ಹಣಕಾಸು ಬಿಡ್ ಅನ್ನು ಸ್ವೀಕರಿಸುವ ಮೊದಲು ಇಲಾಖೆಯು ವಿವೇಚನಾಯುತವಾಗಿ ಕಾರ್ಯ ನಿರ್ವಹಿಸಬೇಕು, ಏಕೆಂದರೆ ಇದರಿಂದ ಒಪ್ಪಿದ ಬೆಲೆಯು ಸರ್ಕಾರಕ್ಕೆ ಲಾಭವಾಗುತ್ತದೆ.**

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

### 2.7 ತಪ್ಪಿಸಬಹುದಾಗಿದ್ದ ಅಧಿಕ ವೆಚ್ಚ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗಗಳು ಸಂಹಿತೆಯ ನಿಬಂಧನೆಗಳಿಗೆ ವಿರುದ್ಧವಾಗಿ 'ಛಾವಣಿಯ ಪ್ಲಾಸ್ಟರಿಂಗ್' ಅನ್ನು ಪ್ರತ್ಯೇಕ ಐಟಂ ಆಗಿ ಸೇರಿಸಿದ್ದು ₹ 3.73 ಕೋಟಿ ತಪ್ಪಿಸಬಹುದಾಗಿದ್ದ ಅಧಿಕ ವೆಚ್ಚದಲ್ಲಿ ಪರಿಣಮಿಸಿತು.**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ವಿಭಾಗಗಳು[53] ಸೂಪರ್-ಸ್ಪೆಷಾಲಿಟಿ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲೂಕು ಮಟ್ಟದ ಆಸ್ಪತ್ರೆಗಳು ಇತ್ಯಾದಿಗಳ ನಿರ್ಮಾಣಕ್ಕಾಗಿ ಕಾಮಗಾರಿಗಳನ್ನು ಕೈಗೊಳ್ಳುತ್ತವೆ. ದರಪಟ್ಟಿಯನ್ನು (ಎಸ್‌ಆರ್) ಅಳವಡಿಸಿಕೊಂಡು ವಿಭಾಗಗಳ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು ಸಿದ್ಧಪಡಿಸಿದ ಅಂದಾಜುಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆಯ (ಕೆಪಿಡಬ್ಲ್ಯೂಡಿ), ಅಧೀಕ್ಷಕ ಇಂಜಿನಿಯರ್ (ಎಸ್‌ಇ) ಅವರು ತಾಂತ್ರಿಕವಾಗಿ ಪರಿಶೀಲಿಸುತ್ತಾರೆ ಮತ್ತು ಮುಖ್ಯ ಎಂಜಿನಿಯರ್ (ಸಿಇ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಎಂಜಿನಿಯರಿಂಗ್ ವಿಭಾಗ (ಎಚ್‌ಎಫ್‌ಡಬ್ಲ್ಯೂಡಿಇ ವಿಂಗ್), ಇವರು ಮಂಜೂರು ಮಾಡುತ್ತಾರೆ.

ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಕಟ್ಟಡ ವಿಶಿಷ್ಟತೆಗಳು (ಕೆಬಿಎಸ್) ಮತ್ತು ಕರ್ನಾಟಕ ಕಟ್ಟಡಗಳ ಗುಣಮಟ್ಟದ ದರ ವಿಶ್ಲೇಷಣೆಯನ್ನು (ಕೆಎಸ್‌ಆರ್‌ಬಿ) ಅನುಸರಿಸಬೇಕು ಎಂದು ರಾಜ್ಯ ಸರ್ಕಾರವು ಸೂಚನೆಗಳನ್ನು ನೀಡಿತು (ಸೆಪ್ಟೆಂಬರ್ 2002). ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ಕಂಡಿಕೆ 8 ಎಲ್ಲಾ ಕಟ್ಟಡ ಕಾಮಗಾರಿಗಳು ಕೆಬಿಎಸ್‌ಗೆ ಅನುಗುಣವಾಗಿರಬೇಕು ಮತ್ತು ಎಲ್ಲಾ ಕಟ್ಟಡ ವಸ್ತುಗಳು ಕೆಎಸ್‌ಆರ್‌ಬಿಗೆ ಅನುಗುಣವಾಗಿರಬೇಕು. ಕಟ್ಟಡಗಳ ನಿರ್ಮಾಣದ ವಿಶೇಷಣಗಳು ಈ ಕೆಳಗಿನವುಗಳನ್ನು ಒಳಗೊಂಡಿತ್ತು;

- ಬಲವರ್ಧಿತ ಸಿಮೆಂಟ್ ಕಾಂಕ್ರೀಟ್ ಅನ್ನು ಒದಗಿಸುವ ಮತ್ತು ಹಾಕುವ ವಸ್ತುವಿನ ದರಪಟ್ಟಿಯು ಅಡಿಪಾಯದ ಸ್ತಂಭ, ಛಾವಣಿಯ ಚಪ್ಪಡಿಗಳು, ಮೆಟ್ಟಿಲುಗಳು, ಲಿಂಟೆಲ್‌ಗಳು, ಧಾರಣ ಗೋಡೆಗಳು, ರಿಟರ್ನ್ ಗೋಡೆಗಳು, ಲಗತ್ತಿಸಲಾದ ಪೈಲಸ್ಟರ್‌ಗಳುನ್ನು ಒಳಗೊಂಡ ಗೋಡೆಗಳು (ಯಾವುದೇ ದಪ್ಪ), ಕಾಲಮ್‌ಗಳು, ಪ್ಯಾರಪೆಟ್‌ಗಳು ಇತ್ಯಾದಿಗಳಲ್ಲಿ ಎಲ್ಲಾ ಕೆಲಸಗಳ ಕಾರ್ಯಗತಗೊಳಿಸುವಿಕೆಯನ್ನು ಸ್ಪಷ್ಟವಾಗಿ ನಿರ್ದಿಷ್ಟಪಡಿಸುತ್ತದೆ ಮತ್ತು ಎಲ್ಲಾ ವಸ್ತುಗಳ ಬೆಲೆ, ಮಜೂರಿ, ಕ್ಯೂರಿಂಗ್, ಕೆಬಿಎಸ್‌ನ 4.6ರ ಪ್ರಕಾರ ಪೂರ್ಣಗೊಂಡಿದೆ.

[53] ಈ ಹಿಂದೆ ಕರ್ನಾಟಕ ಆರೋಗ್ಯ ವ್ಯವಸ್ಥೆ ಮತ್ತು ಸುಧಾರಣಾ ಯೋಜನೆ ಎಂದು ಕರೆಯಲಾಗುತ್ತಿತ್ತು.

- ಕೆಬಿಎಸ್‌ನ ಪರಿಚ್ಛೇದ 4.6 ಬಲವರ್ಧಿತ ಸಿಮೆಂಟ್ ಕಾಂಕ್ರೀಟ್ (ಆರ್‌ಸಿಸಿ) ಕಾಮಗಾರಿಯ ವಿಶಿಷ್ಟತೆಗಳೊಂದಿಗೆ ವ್ಯವಹರಿಸುತ್ತದೆ ಮತ್ತು ಕೆಬಿಎಸ್‌ನ ಉಪ–ಪರಿಚ್ಛೇದ–4.6.4.7 ಆರ್‌ಸಿಸಿ ಕಾಮಗಾರಿಗಳ ಪೂರ್ಣಗೊಳಿಸುವಿಕೆಯನ್ನು ವ್ಯಾಖ್ಯಾನಿಸುತ್ತದೆ.
- ಕೆಬಿಎಸ್‌ನ ಉಪ–ಪರಿಚ್ಛೇದ 4.6.4.7(**C**) ಪ್ರಕಾರ, ಆರ್‌ಸಿಸಿ ಕಾಮಗಾರಿಯ ತೆರೆದ ಮೇಲ್ಮೈಯನ್ನು ನಯವಾದ ಮತ್ತು ಸಮವಾದ ಮೇಲ್ಮೈಯನ್ನು ನೀಡಲು 1:3 (ಒಂದು ಭಾಗ ಸಿಮೆಂಟ್ ಮತ್ತು ಮೂರು ಭಾಗ ಉತ್ತಮ ಮರಳು) ಅನುಪಾತದಲ್ಲಿ 6 ಮಿಮೀ ದಪ್ಪ ಮೀರದಂತೆ ಸಿಮೆಂಟ್ ಗಾರೆಯಿಂದ ಪ್ಲಾಸ್ಟರ್ ಮಾಡಬೇಕು.

ಹೀಗಾಗಿ, ಮೇಲ್ಛಾವಣಿಯ ತೆರೆದ ಮೇಲ್ಮೈಗೆ ಆರ್‌ಸಿಸಿಯನ್ನು ಒದಗಿಸುವುದು ಮತ್ತು ಹಾಕುವುದು ಪಾಸ್ಟರಿಂಗ್ ಐಟಂಅನ್ನು ಒಳಗೊಂಡಿರುತ್ತದೆ.

ಜುಲೈ 2014ರಿಂದ ಏಪ್ರಿಲ್ 2017ರ ಅವಧಿಯಲ್ಲಿ ಹೆಚ್‌ಎಫ್‌ಡಬ್ಲ್ಯುಡಿಇ ವಿಭಾಗದ ಮುಖ್ಯ ಇಂಜಿನಿಯರ್ ರವರು ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ವಿವಿಧ ಆಸ್ಪತ್ರೆಗಳ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಆಗಸ್ಟ್ 2019). ಏಪ್ರಿಲ್ 2015 ರಿಂದ ಜನವರಿ 2018ರ ಅವಧಿಯಲ್ಲಿ ಟೆಂಡರ್ ಆಹ್ವಾನಿಸುವ ಮೂಲಕ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ವಹಿಸಲಾಯಿತು. ಏಪ್ರಿಲ್ 2015 ಮತ್ತು ಜನವರಿ 2018ರ ನಡುವೆ ಕಾರ್ಯಗತಗೊಳಿಸಲಾದ ಎರಡು[54] ಹೆಚ್‌ಎಫ್‌ಡಬ್ಲ್ಯುಡಿಇ ಗಳಲ್ಲಿನ 13 ಕಾಮಗಾರಿಗಳ ಮತ್ತು ಪಾವತಿಸಿದ ಬಿಲ್‌ಗಳ ಅಂದಾಜುಗಳ ಪರೀಕ್ಷಾ–ತನಿಖೆಯು (ಆಗಸ್ಟ್ 2019) ಸೀಲಿಂಗ್‌ಗೆ 12 ಮಿಮೀ ದಪ್ಪದ ಪ್ಲಾಸ್ಟರಿಂಗ್‌ಅನ್ನು ಪ್ರತ್ಯೇಕ ವಸ್ತುವಾಗಿ ಸೇರಿಸಲಾಗಿದೆ ಎಂಬುದನ್ನು ತೋರಿಸಿತು. ಕೆಎಸ್‌ಆರ್‌ಬಿ ಮತ್ತು ಕೆಬಿಎಸ್‌ನ ನಿಬಂಧನೆಗಳಿಗೆ ವ್ಯತಿರಿಕ್ತವಾಗಿರುವ ಈ 13 ಕಾಮಗಾರಿಗಳಲ್ಲಿ ಈ ಎರಡು ವಿಭಾಗಗಳಿಂದ ₹ 3.73 ಕೋಟಿ ಮೊತ್ತವನ್ನು ಗುತ್ತಿಗೆದಾರರಿಗೆ ನೀಡಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಅಂದಾಜುಗಳ ತಯಾರಿಕೆ/ಅನುಮೋದನೆ ಮತ್ತು ಪಾವತಿಗಳನ್ನು ಬಿಡುಗಡೆ ಮಾಡುವಲ್ಲಿ ಕೆಬಿಎಸ್‌ನ ಅನುಚ್ಛೇದ 4.6ಕ್ಕೆ ಬದ್ಧವಾಗಿರಲು ಇಇಗಳು/ಎಸ್‌ಇ/ಸಿಇಗಳು ವಿಫಲವಾದದ್ದು **ಅನುಬಂಧ–2.8**ರಲ್ಲಿ ವಿವರಿಸಿದಂತೆ ಈ ಎರಡು ವಿಭಾಗಗಳಡಿಯಲ್ಲಿ ಈ 13 ಕಾಮಗಾರಿಗಳಲ್ಲಿ ₹ 3.73 ಕೋಟಿಯ ತಪ್ಪಿಸಬಹುದಾಗಿದ್ದ ಹೆಚ್ಚುವರಿ ವೆಚ್ಚದಲ್ಲಿ ಪರಿಣಮಿಸಿತು.

ತೆರೆದ ಆರ್‌ಸಿಸಿ ಮೇಲ್ಛಾವಣಿಯ ಮೇಲ್ಮೈಯಲ್ಲಿ ಕೆಲವು ದೋಷಗಳಿದ್ದು ಅವುಗಳನ್ನು ನಯವಾದ ಪೂರ್ಣಗೊಳಿಸುವಿಕೆಗಾಗಿ ಸಿಮೆಂಟ್ ಗಾರೆಯಿಂದ ಪ್ಲ್ಯಾಸ್ಟರ್ ಮಾಡಲಾಗುವುದು ಎಂದು ಸರ್ಕಾರವು ತಿಳಿಸಿತು (ಮಾರ್ಚ್ 2022). ಅದರಂತೆ, 12 ಮಿಮೀ ದಪ್ಪದ ಸಿಮೆಂಟ್ ಗಾರೆಗಳಲ್ಲಿ ಕಾಂಕ್ರೀಟ್ ಛಾವಣಿಯ ಚಪ್ಪಡಿ ಪ್ಲ್ಯಾಸ್ಟರಿಂಗ್ ಅನ್ನು ಕಾರ್ಯಗತಗೊಳಿಸಲಾಗಿತ್ತು.

ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕೆಬಿಎಸ್ ಮತ್ತು ಕೆಎಸ್‌ಆರ್‌ಬಿಗಳನ್ನು ಅನುಸರಿಸ ಬೇಕಾಗಿರುವುದರಿಂದ ಹಾಗೂ ಅದರಲ್ಲಿ ಆರ್‌ಸಿಸಿ ಮೇಲ್ಛಾವಣಿಯನ್ನು ಹಾಕುವಲ್ಲಿ ಪ್ಲ್ಯಾಸ್ಟರಿಂಗ್‌ಅನ್ನು ಸೇರಿರುವ ವಸ್ತು ಎಂದು ಮತ್ತು ಅದನ್ನು ಪ್ರತ್ಯೇಕವಾಗಿ ಸೇರಿಸುವುದರಿಂದ ಬೊಕ್ಕಸಕ್ಕೆ ಹೆಚ್ಚುವರಿ ಹೊರೆ ಉಂಟಾಗುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

31 ಮಾರ್ಚ್ 2010ಕ್ಕೆ ಕೊನೆಗೊಂಡ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ (ಸಿವಿಲ್)–ವರದಿ ಸಂಖ್ಯೆ.2ರ ಕಂಡಿಕೆ 3.2.4ರಲ್ಲಿ ಸೀಲಿಂಗ್‌ನ ಪ್ಲ್ಯಾಸ್ಟರಿಂಗ್ ಸಮಸ್ಯೆಯನ್ನು ಉಲ್ಲೇಖಿಸಲಾಗಿತ್ತು ಎಂದು ಇಲ್ಲಿ ತಿಳಿಸುವುದು ಸೂಕ್ತವಾಗುತ್ತದೆ. ಈ ಕಂಡಿಕೆಯನ್ನು ಚರ್ಚಿಸಿದ

[54] ಬೆಂಗಳೂರು ವಿಭಾಗ – ಐದು ಕಾಮಗಾರಿಗಳು ಮತ್ತು ಮೈಸೂರು ವಿಭಾಗ – ಎಂಟು ಕಾಮಗಾರಿಗಳು.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಮೊತ್ತವನ್ನು ವಸೂಲಿ ಮಾಡಲು ಮತ್ತು ಭವಿಷ್ಯದಲ್ಲಿ ಅಂತಹ ಲೋಪಗಳನ್ನು ತಪ್ಪಿಸಲು ಶಿಫಾರಸು[55] ಮಾಡಿತು ಮತ್ತು ಸೀಲಿಂಗ್‌ಗೆ ಪ್ಲಾಸ್ಟರಿಂಗ್ ಒಂದು ಪ್ರತ್ಯೇಕ ಐಟಂ ಎನ್ನುವುದರಿಂದ ಉಂಟಾಗುವ ಹೆಚ್ಚುವರಿ ಪಾವತಿಗಳನ್ನು ತಪ್ಪಿಸಲು ಅಗತ್ಯ ಆದೇಶಗಳನ್ನು ನೀಡಲು ತಕ್ಷಣದ ಕ್ರಮ ಕೈಗೊಳ್ಳುವಂತೆ ಲೋಕೋಪಯೋಗಿ ಇಲಾಖೆಗೆ ಸೂಚಿಸಿತು.

**ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸಿನ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು ತಪ್ಪಾದ ಅಂದಾಜುಗಳು ಮತ್ತು ಪಾವತಿಗಳ ತಯಾರಿ/ಮಂಜೂರಾತಿಗೆ ಜವಾಬ್ದಾರರಾಗಿರುವ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.**

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

### 2.8 ಅರಣ್ಯ ಭೂಮಿಯಲ್ಲಿನ ರಸ್ತೆ ಕಾಮಗಾರಿಗೆ ವ್ಯರ್ಥ ವೆಚ್ಚ

**ಸಂಹಿತೆಯ ನಿಬಂಧನೆಗಳನ್ನು ಉಲ್ಲಂಘಿಸಿ ಮತ್ತು ಇಂಡಿಯನ್ ರೋಡ್ ಕಾಂಗ್ರೆಸ್ ನಿಬಂಧನೆಗಳಿಗೆ ವಿರುದ್ಧವಾಗಿ ಅರಣ್ಯ ಭೂಮಿಯಲ್ಲಿ ರಸ್ತೆ ಕಾಮಗಾರಿಯನ್ನು ಕಾರ್ಯಗತಗೊಳಿಸಿದ್ದು ಎರಡು ಗ್ರಾಮೀಣ ವಾಸಸ್ಥಳಗಳಿಗೆ ಎಲ್ಲಾ ಹವಾಮಾನ ರಸ್ತೆ ಸಂಪರ್ಕವನ್ನು ಸಾಧಿಸಲಾಗದಿದ್ದುದರಿಂದ ₹ 62.09 ಲಕ್ಷ ವ್ಯರ್ಥ ವೆಚ್ಚದಲ್ಲಿ ಪರಿಣಮಿಸಿತು.**

ಸಾರ್ವಜನಿಕರು, ಸರಕುಗಳು ಮತ್ತು ಸೇವೆಗಳಿಗೆ ಸಾರಿಗೆ ಸೇವೆಗಳ ಪೂರೈಕೆದಾರರಾಗಿ ಒಟ್ಟಾರೆ ದಕ್ಷತೆಯನ್ನು ಸುಧಾರಿಸಲು ಅಸ್ತಿತ್ವದಲ್ಲಿರುವ ಗ್ರಾಮೀಣ ರಸ್ತೆ ಜಾಲದ ಬಲವರ್ಧನೆಯನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಮ್‌ಜಿಎಸ್‌ವೈ)-II ಆಲೋಚಿಸಿತ್ತು.

ಸಂಬಂಧಪಟ್ಟ ಇಲಾಖೆಯಿಂದ ಸೂಕ್ತವಾಗಿ ಹಸ್ತಾಂತರಿಸದ ಭೂಮಿಯಲ್ಲಿ ಯಾವುದೇ ಕಾಮಗಾರಿ ಆರಂಭಿಸಬಾರದು ಎಂದು ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆಯ ಕಂಡಿಕೆ 135(3)ರಲ್ಲಿ ನಿಗದಿಪಡಿಸಲಾಗಿದೆ. ಇದಲ್ಲದೆ, ಅರಣ್ಯ ಮತ್ತು ಅರಣ್ಯೇತರ ಭೂಮಿಯನ್ನು ಒಳಗೊಂಡಿರುವ ಯೋಜನೆಗಳಿಗೆ ಸಂಬಂಧಿಸಿದಂತೆ ಕಾಯಿದೆಯಡಿ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡಲು ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆಯದೇ ಅರಣ್ಯೇತರ ಭೂಮಿಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸಬಾರದು ಎಂದು ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯವು ಸಂಕಲಿಸಿರುವ ಅರಣ್ಯ (ಸಂರಕ್ಷಣೆ) ಕಾಯಿದೆ, 1980 ಕೈಪಿಡಿಯ ಸ್ಪಷ್ಟೀಕರಣ 4.4 ಮತ್ತು ಅರಣ್ಯ (ಸಂರಕ್ಷಣೆ) ನಿಯಮಗಳು, 200 ನಿಗದಿಪಡಿಸುತ್ತವೆ.

ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ) ಎಸ್‌ಪಿ-72ರ ಕಂಡಿಕೆ 7.3.1ರ ನಿಬಂಧನೆಗಳ ಪ್ರಕಾರ, ರಸ್ತೆಯ ಬಿಟುಮಿನಸ್ ಮೇಲ್ಮೈಯು ಸುಧಾರಿತ ಸವಾರಿ ಗುಣಮಟ್ಟವನ್ನು ಖಚಿತಪಡಿಸುತ್ತದೆ, ಪಾದಚಾರಿ ರಚನೆಯನ್ನು ದುರ್ಬಲಗೊಳಿಸುವ ನೀರಿನ ಪ್ರವೇಶವನ್ನು ತಡೆಯಲು ಮೇಲ್ಮೈಯನ್ನು ಮುಚ್ಚುತ್ತದೆ ಮತ್ತು ಸಂಚಾರದ ಹಾನಿಕಾರಕ ಪರಿಣಾಮಗಳಿಂದ ಹರಳಿನ ತಳವನ್ನು ರಕ್ಷಿಸುತ್ತದೆ.

ಪಿಎಮ್‌ಜಿಎಸ್‌ವೈ-IIರ (ಡಿಸೆಂಬರ್ 2013) ಅಡಿಯಲ್ಲಿ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು, ಕರ್ನಾಟಕದ 30 ಜಿಲ್ಲೆಗಳಲ್ಲಿ 2,246.23 ಕಿಮೀ ಉದ್ದದ ರಸ್ತೆ ನವೀಕರಣಕ್ಕಾಗಿ 315 ರಸ್ತೆ ಕಾಮಗಾರಿಗಳು ಮತ್ತು 12 ಉದ್ದದ ಸೇತುವೆಗಳನ್ನು ಒಳಗೊಂಡಿರುವ ಯೋಜನೆಯ

[55] ಲೋಕೋಪಯೋಗಿ ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮೊದಲ ವರದಿ ಕ್ರಮ ಸಂಖ್ಯೆ-3, 14ನೇ ವಿಧಾನಸಭೆ (2013-14)

ಪ್ರಸ್ತಾವನೆಯನ್ನು ಕಾಮಗಾರಿ ಆದೇಶದ ದಿನಾಂಕದಿಂದ ಒಂಬತ್ತು ತಿಂಗಳೊಳಗೆ ಪೂರ್ಣಗೊಳಿಸಬೇಕು ಎಂಬ ಷರತ್ತಿನೊಂದಿಗೆ ಅನುಮೋದಿಸಿತು.

**ಅನುಬಂಧ–2.9**ರಲ್ಲಿ ತೋರಿಸಿರುವ ಪರೀಕ್ಷಾ–ತನಿಖೆ ನಡೆಸಿದ 12 ವಿವಿಧ ಪ್ಯಾಕೇಜ್‌ಗಳ ರಸ್ತೆ ಕಾಮಗಾರಿಗಳಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನಲ್ಲಿ ಕೆಎನ್–23–93 ಪ್ಯಾಕೇಜ್ ಅಡಿಯಲ್ಲಿ ಮುಂಡರಗಿಯಿಂದ ಕುರ್ಲೇರದೊಡ್ಡಿ ರಸ್ತೆಯವರೆಗೆ 11.09 ಕಿಮೀ ಉದ್ದದ ರಸ್ತೆಯ 'ಸುಧಾರಣೆ ಮತ್ತು ಡಾಂಬರೀಕರಣ' ಕಾಮಗಾರಿಯನ್ನು ಪೂರ್ಣಗೊಳಿಸದಿರುವುದನ್ನು ರಾಯಚೂರಿನ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ (ಕೆಆರ್‌ಆರ್‌ಡಿಎ) ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿಯಲ್ಲಿ 2009–10ರಿಂದ 2019–20ರವರೆಗಿನ ಅವಧಿಯ ದಾಖಲೆಗಳ ಲೆಕ್ಕಪರಿಶೋಧನೆಯು (ಜನವರಿ 2021) ತಿಳಿಯಪಡಿಸಿತು. ವಿವರಗಳನ್ನು ಕೆಳಗೆ ನೀಡಲಾಗಿದೆ.

ಮೇಲಿನ ಪ್ಯಾಕೇಜ್ ಸೇರಿದಂತೆ ವಿವಿಧ ರಸ್ತೆ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರ ಆಡಳಿತಾತ್ಮಕ ಅನುಮೋದನೆಯನ್ನು ನೀಡಿತು (ಜನವರಿ 2014). ಅದರಂತೆ ಕೆಆರ್‌ಆರ್‌ಡಿಎ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಿಂದ ಅಂದಾಜು ತಾಂತ್ರಿಕವಾಗಿ ಮಂಜೂರಾಗಿ (ಜನವರಿ 2014) ಅರ್ಹ ಗುತ್ತಿಗೆದಾರರಿಗೆ ₹ 768.21 ಲಕ್ಷದ ಟೆಂಡರ್‌ಗೆ ಕಾಮಗಾರಿ ಆದೇಶವನ್ನು ನೀಡಲಾಯಿತು (ಮಾರ್ಚ್ 2014) ಮತ್ತು ಮಳೆಗಾಲದ ಅವಧಿಯನ್ನು ಒಳಗೊಂಡಂತೆ ಒಂಬತ್ತು ತಿಂಗಳುಗಳಲ್ಲಿ ಅಂದರೆ ಡಿಸೆಂಬರ್ 2014ರೊಳಗೆ ಪೂರ್ಣಗೊಳಿಸಲು ಗುತ್ತಿಗೆದಾರರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಯಿತು.

ರಾಯಚೂರಿನ ಯೋಜನಾ ವಿಭಾಗವು ರಸ್ತೆ ಕಾಮಗಾರಿಯನ್ನು ಸಬ್‌ಗ್ರೇಡ್‌ನಿಂದ ಗ್ರೇಡ್–IIIವರೆಗೆ ಚೈನೇಜ್ 0.00 ಕಿ.ಮೀ.ನಿಂದ 5.30 ಕಿ.ಮೀ ಮತ್ತು ಚೈನೇಜ್ 7.28 ಕಿ.ಮೀ ನಿಂದ 11.09 ಕಿ.ಮೀ ವರೆಗೆ ಎಲ್ಲಾ ಲೇಯರ್‌ಗಳೊಂದಿಗೆ ಪೂರ್ಣಗೊಳಿಸಿತು. ಆದರೆ, 1.98 ಕಿ.ಮೀ. (5.30 ಕಿ.ಮೀ.ನಿಂದ 7.28 ಕಿ.ಮೀ.ವರೆಗೆ) ಅರಣ್ಯ ಚೈನೇಜ್ ಉದ್ದಕ್ಕೆ, ಗ್ರೇಡ್–II ಲೋಹದ ಪದರದ ಮೇಲೆ ಬಿಟುಮಿನಸ್ ಮೇಲ್ಮೈಯನ್ನು ಒದಗಿಸಿರಲಿಲ್ಲ. ಆ ನಿರ್ದಿಷ್ಟ ಪ್ರದೇಶವು ಅರಣ್ಯ ಭೂಮಿಯ ಭಾಗವಾಗಿರುವುದರಿಂದ ಮತ್ತು ಅರಣ್ಯ ಇಲಾಖೆಯು ಅರಣ್ಯ ಕಾಯಿದೆ ಮತ್ತು ನಿಯಮಗಳ ಪ್ರಕಾರ ರಸ್ತೆ ಕಾಮಗಾರಿಗೆ ಅನುಮತಿ ನೀಡದ ಕಾರಣ ಆ ಚೈನೇಜ್‌ನಲ್ಲಿ ಕಾಮಗಾರಿಯನ್ನು ಭಾಗಶಃ ಮಾತ್ರ ಕಾರ್ಯಗತಗೊಳಿಸಲಾಯಿತು.

30 ಜೂನ್ 2018ರ ಕರ್ನಾಟಕ ಸರ್ಕಾರದ ಆದೇಶದ ಪ್ರಕಾರ ಕಾಮಗಾರಿಯನ್ನು ಸ್ಥಗಿತಗೊಳಿಸಲಾಯಿತು ಮತ್ತು ಯಾವ ಸ್ಥಿತಿಯಲ್ಲಿದೆಯಾ ಅದೇ ಸ್ಥಿತಿಯಲ್ಲಿಯೇ ಪೂರ್ಣಗೊಂಡಿದೆ ಎಂದು ಪರಿಗಣಿಸಲಾಯಿತು (ಜೂನ್ 2018). ಅರಣ್ಯ ಇಲಾಖೆಯಿಂದ ಅನುಮತಿ ನೀಡದ ಕಾರಣ, ಐಆರ್‌ಸಿ ನಿಯಮಗಳು ಮತ್ತು ರಾಜ್ಯ ಲೋಕೋಪಯೋಗಿ ಮಾರ್ಗಸೂಚಿಗಳ ಪ್ರಕಾರ ರಸ್ತೆ ಕಾಮಗಾರಿ ಪೂರ್ಣಗೊಂಡಿರಲಿಲ್ಲ.

ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ಕಂಡಿಕೆ 135ರಲ್ಲಿ ನಿಗದಿಪಡಿಸಿದಂತೆ ಅರಣ್ಯ ಇಲಾಖೆಯಿಂದ ಅನುಮತಿಯಿಲ್ಲದೆ ರಸ್ತೆ ಕಾಮಗಾರಿಯನ್ನು ಪ್ರಾರಂಭಿಸಲಾಯಿತು ಮತ್ತು ರಸ್ತೆಯನ್ನು ನಿರ್ಮಿಸುವಾಗ ಐಆರ್‌ಸಿ ವಿಶಿಷ್ಟತೆಗಳನ್ನು ಅನುಸರಿಸಲಿಲ್ಲ. ಹೀಗೆ, ಎರಡು ಗ್ರಾಮೀಣ ವಾಸಸ್ಥಳಗಳ[56] ನಡುವೆ ಸಾರ್ವಕಾಲಿಕ ರಸ್ತೆ ಸಂಪರ್ಕವನ್ನು ಸಾಧಿಸದ ಕಾರಣ ಮತ್ತು ಪಿಎಂಜಿಎಸ್‌ವೈ ಯೋಜನೆಯಡಿಯಲ್ಲಿ ನಿಗದಿಪಡಿಸಿದಂತೆ ಸಾಮಾಜಿಕ ಮತ್ತು ಆರ್ಥಿಕ ಎರಡೂ ಅವಕಾಶಗಳನ್ನು ಕಳೆದುಕೊಂಡಿದ್ದರಿಂದ ಅರಣ್ಯ ಚೈನೇಜ್ (5.30 ಕಿ.ಮೀ.ನಿಂದ 7.28 ಕಿ.ಮೀ.) ಮೇಲೆ ಭರಿಸಿದ ₹ 62.09 ಲಕ್ಷ[57] ವೆಚ್ಚವು ವ್ಯರ್ಥವಾಯಿತು.

ಅರಣ್ಯ ವ್ಯಾಪ್ತಿಯಲ್ಲಿನ ಕಾಮಗಾರಿಯನ್ನು ಡಬ್ಲ್ಯುಬಿಎಮ್ (ಗ್ರೇಡ್–III) ಪದರದವರೆಗೆ ಕಾರ್ಯಗತಗೊಳಿಸಲಾಗಿದೆ ಮತ್ತು ಪೂರ್ಣಗೊಳಿಸಲಾಗಿದೆ ಹಾಗೂ ಅರಣ್ಯ ಇಲಾಖೆಯ

56 ಸಕ್ರಿನಾಯಕನಹಳ್ಳಿ ತಾಂಡಾ ಮತ್ತು ಬಂಡಿ ಲಕ್ಷ್ಮಣ ತಾಂಡಾ.

57 30.12.2021ರಂದು ಕೆಆರ್‌ಆರ್‌ಡಿಎ ಸಲ್ಲಿಸಿದ ಆರ್‌ಎ ಬಿಲ್‌ವಾರು ವೆಚ್ಚದ ವಿವರಗಳು.

ಆಕ್ಷೇಪಣೆಯಿಂದ ರದ್ದುಗೊಳಿಸಲಾಯಿತು ಎಂದು ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ (ಫೆಬ್ರವರಿ 2022) ಒಪ್ಪಿಕೊಂಡಿತು. ಆದರೆ ಎಸ್‌ಪಿ–72 ರ ಪ್ರಕಾರ, ಗ್ರ್ಯಾನ್ಯುಲರ್ ಸಬ್–ಬೇಸ್ (ಜಿಎಸ್‌ಬಿ) ಪದರವನ್ನು ವಾಟರ್ ಬೌಂಡ್ ಮೆಕಾಡಮ್ ಪದರದ (ಗ್ರೇಡ್–II) ಕೆಳಗೆ ಒದಗಿಸಲಾಗಿದೆ, ಇದು ಒಳಚರಂಡಿ ಪದರವಾಗಿ ಕಾರ್ಯನಿರ್ವಹಿಸುತ್ತದೆ ಎಂದೂ ಸಹ ಸರ್ಕಾರವು ತಿಳಿಸಿತು. ಹೀಗೆ, ಗ್ರ್ಯಾನ್ಯುಲರ್ ಬೇಸ್ ಅನ್ನು ರಸ್ತೆಗೆ ಹಾನಿಯಾಗದಂತೆ ಜಿಎಸ್‌ಬಿ ರಕ್ಷಿಸುತ್ತಿದೆ ಮತ್ತು 11.09 ಕಿ.ಮೀ. ಉದ್ದದ ಸಂಪೂರ್ಣ ರಸ್ತೆಯನ್ನು ಬಳಸಲಾಗುತ್ತಿದೆ ಎಂದೂ ಕೂಡ ತಿಳಿಸಲಾಯಿತು.

ಇಲ್ಲಿಯವರೆಗೆ (ಫೆಬ್ರವರಿ 2022) ಡಬ್ಲ್ಯುಬಿಎಮ್ ಲೇಯರ್‌ಗಳಲ್ಲಿ ಬಿಟುಮಿನಸ್ ಲೇಯರ್‌ಅನ್ನು ಒದಗಿಸದೆ ಅರಣ್ಯ ವ್ಯಾಪ್ತಿಯಲ್ಲಿನ ಕಾಮಗಾರಿಯನ್ನು ಅಪೂರ್ಣಗೊಳಿಸಿರುವುದರಿಂದ[58] (ಆಗಸ್ಟ್ 2016) ರಸ್ತೆಯ ರಕ್ಷಣೆ ಮತ್ತು ರಸ್ತೆಯ ಸಂಪೂರ್ಣ ಬಳಕೆಗೆ ಸಂಬಂಧಿಸಿದ ಉತ್ತರವನ್ನು ಒಪ್ಪಲಾಗುವುದಿಲ್ಲ. ಐಆರ್‌ಸಿ ಎಸ್‌ಪಿ 72ರ ಪ್ರಕಾರ, ಐದೂವರೆ ವರ್ಷಗಳಿಗೂ ಹೆಚ್ಚು ಕಾಲ ರಸ್ತೆಗೆ ಬಿಟುಮಿನಸ್ ಲೇಯರ್ ಒದಗಿಸದಿರುವುದು ಪಾದಚಾರಿ ಮಾರ್ಗವನ್ನು ದುರ್ಬಲಗೊಳಿಸುತ್ತದೆ ಮತ್ತು ರಸ್ತೆಗೆ ಹಾನಿಯುಂಟು ಮಾಡುತ್ತದೆ. ಭಾರೀ ಮಳೆ ಬೀಳುವ ಸಾಧ್ಯತೆಯಿದ್ದು ಅರಣ್ಯ ಚೈನೇಜ್‌ನಲ್ಲಿ ಬಿಟುಮಿನಸ್ ಮೇಲ್ಮೈ ಇಲ್ಲದ ಕಾರಣ ಅಸುರಕ್ಷಿತ ಹರಳಿನ ಬೇಸ್ ಹಾಳಾಗಿ ರಸ್ತೆ ಹಾನಿಗೆ ಕಾರಣವಾಗುತ್ತದೆ, ಜೊತೆಗೆ ರಸ್ತೆಯ ಉದ್ದದ ಅಸಮಾನತೆಯು ರಸ್ತೆ ಸುರಕ್ಷತೆಗೆ ಅಪಾಯಕಾರಿಯಾಗುತ್ತದೆ.

ಹೀಗೆ, ಅರಣ್ಯ ಚೈನೇಜ್‌ಗೆ ವೆಚ್ಚ ಮಾಡಿದ ₹ 62.09 ಲಕ್ಷ ಮೊತ್ತವು, ಆಲೋಚಿಸಿದಂತೆ ಎರಡು ಗ್ರಾಮೀಣ ವಸತಿ ಪ್ರದೇಶಗಳ ನಡುವೆ ಸಾರ್ವಕಾಲಿಕ ರಸ್ತೆ ಸಂಪರ್ಕವನ್ನು ಸಾಧಿಸಲು ಸಾಧ್ಯವಾಗಲಿಲ್ಲ.

***ಶಿಫಾರಸು:*** *ಅರಣ್ಯ ಭೂಮಿಯಲ್ಲಿನ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಮೊದಲು ಅರಣ್ಯ ಇಲಾಖೆಯಿಂದ ಅನುಮತಿಗಳನ್ನು ಪಡೆಯುವಲ್ಲಿ ಇಲಾಖೆಯು ಕಾಯಿದೆ/ನಿಯಮಗಳ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.*

[58] ಏಳನೇ ಮತ್ತು ಭಾಗಶ: ಆರ್‌ಎ ಬಿಲ್ಲಿನಲ್ಲಿ ದಾಖಲಿಸಿದಂತೆ.